ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮಾರ್ಚ್ 22 ಶುಕ್ರವಾರ 2024
₹4
ಸಂಪುಟ: 44 | ಸಂಚಿಕೆ: 333 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಡಿ.ಕೆ.ಬ್ರದರ್ಸ್ ವಿರುದ್ಧದ ಹೆಚ್‌ಡಿಕೆ ಹೇಳಿಕೆ ಹಿಂಪಡೆಯಲು ಆಗ್ರಹ

ಮೈಸೂರು,ಮಾ.21(ಜಿಎ)–ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಬದುಕಿಗೆ ಡಿಕೆ ಬ್ರದರ್ಸ್ ವಿಷ ಹಾಕಿದ್ದಾರೆ ಎಂಬ ಹೇಳಿಕೆಯನ್ನು ಎಚ್.ಡಿ. ಕುಮಾರಸ್ವಾಮಿ ವಾಪಸ್ ಪಡೆಯಬೇಕು ಎಂದು ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮನ್ನು ನಂಬಿದ ವ್ಯಕ್ತಿಗಳಿಗೆ ವಿಷ ಹಾಕುವ ಚಾಣಕ್ಯ ಬುದ್ಧಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಕರಗತವಾಗಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಸಿಎಂ ಸ್ಥಾನ ಬಿಟ್ಟುಕೊಡುವುದಾಗಿ ಹೇಳಿ ಬೆನ್ನಿಗೆ ಚೂರಿ ಹಾಕುವ ಮೂಲಕ ವಿಷ ಹಾಕಿದವರು ಕುಮಾರಸ್ವಾಮಿ ಎಂದು ಕಿಡಿಕಾರಿದರು.

ಜೆಡಿಎಸ್ ಪ್ರಾಬಲ್ಯವಿರುವ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಸಿ.ಎನ್. ಮಂಜುನಾಥ್ ಅವರನ್ನು ಜೆಡಿಎಸ್ ಅಭ್ಯರ್ಥಿಯಾಗಿಸದೇ ಬಿಜೆಪಿಗೆ ಕಳುಹಿಸಿ ಜೆಡಿಎಸ್ ಕಾರ್ಯಕರ್ತರಿಗೆ ವಿಷ ಹಾಕಿದ್ದು, ಎಚ್‌ಡಿಕೆ. ಕಾಂಗ್ರೆಸ್ ಪಕ್ಷ ಸಂಘಟನೆ ಮಾಡುವುದನ್ನು ದೇವೇಗೌಡರಿಗೆ ವಿಷ ಹಾಕುವುದು ಎನ್ನುವುದು ದ್ವೇಷ ರಾಜಕಾರಣಕ್ಕೆ ಸಾಕ್ಷಿ ಎಂದು ದೂರಿದರು. ಗೋಷ್ಠಿಯಲ್ಲಿ ಕುರುಬಾರಹಳ್ಳಿ ಪ್ರಕಾಶ್, ಎಸ್.ಎ.ರಹೀಂ, ರವಿ ಹಾಜರಿದ್ದರು.

ಇಂದು ಜಗದ್ಗುರು ರೇಣುಕಾಚಾರ್ಯರ ಜಯಂತಿ

ಮೈಸೂರು, ಮಾ.21(ಜಿಎ)–ಮೈಸೂರಿನ ಕೆ.ಆರ್.ಮೊಹಲ್ಲಾದ ರೇಣುಕಾಚಾರ್ಯ ರಸ್ತೆಯ ಜಗದ್ಗುರು ರೇಣುಕಾಚಾರ್ಯ ದೇವಸ್ಥಾನದ ವತಿಯಿಂದ ಮಾ.22ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 12ರವರೆಗೆ ರೇಣುಕಾಚಾರ್ಯರ ಜಯಂತಿ ಆಯೋಜಿಸಲಾಗಿದೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಚರಣಾ ಸಮಿತಿ ಅಧ್ಯಕ್ಷ ಪ್ರಸನ್ನಕುಮಾರ್ ಈ ವಿಷಯ ತಿಳಿಸಿ, ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಈ ಬಾರಿ ತೀರಾ ಸರಳವಾಗಿ ಆಚರಿಸಲಾಗುತ್ತಿದ್ದು, ಧಾರ್ಮಿಕ ಕಾರ್ಯಕ್ರಮಗಳಿಗೆ ಸೀಮಿತಗೊಳಿಸಲಾಗಿದೆ. ಯಾವುದೇ ರಾಜಕೀಯ ವ್ಯಕ್ತಿಗಳಿಗೆ ಆಹ್ವಾನವಿಲ್ಲ. ವೇದಿಕೆ ಕಾರ್ಯಕ್ರಮವೂ ಇರುವುದಿಲ್ಲ. ಕೇವಲ ಭಕ್ತರು ಮಾತ್ರ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜೈಶಂಕರ್, ಎನ್.ಜಿ.ಗಿರೀಶ್, ಕಾವ್ಯ ಶಿವಮೂರ್ತಿ, ಪ್ರದೀಪ್‌ಕುಮಾರ್, ಮಾಲಿನಿ ಪಾಲಾಕ್ಷ ಉಪಸ್ಥಿತರಿದ್ದರು.



ಹೃದಯ ಶಸ್ತ್ರಚಿಕಿತ್ಸೆಗೊಳಗಾಗಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಶೀಘ್ರ ಗುಣಮುಖರಾಗಲೆಂದು ಮೈಸೂರಿನ ಒಂಟಿಕೊಪ್ಪಲಿನ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ವೇಳೆ ಜೆಡಿಎಸ್ ನಗರ ಸಂಘಟನಾ ಕಾರ್ಯದರ್ಶಿ ಜೆ.ಪ್ರಕಾಶ್, ನಗರ ಉಪಾಧ್ಯಕ್ಷ ದೇವರಾಜು, ಕಾರ್ಯದರ್ಶಿ ಕೋದಂಡ, ರೈತ ಸಂಘದ ಡೈರಿ ಅಧ್ಯಕ್ಷ ಮಹದೇವಪ್ಪ, ಡಿಂಕಾ ಗ್ರಾಪಂ ಸದಸ್ಯ ಸೋಮಶೇಖರ್ ಇತರರಿದ್ದರು.

ನಂ.ಗೂಡಿನಲ್ಲಿ ಹೊಸ ಶಾಲಾ ಕಟ್ಟಡ ಉದ್ಘಾಟನೆ



ಮೈಸೂರು,ಮಾ.21–ಎಟಿ ಅಂಡ್ ಎಸ್ ಇಂಡಿಯಾ ಸಂಸ್ಥೆಯು ತನ್ನ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅಡಿಯಲ್ಲಿ ನಿರ್ಮಿಸಿರುವ ನಂಜನಗೂಡಿನ ಸುಜಾತಪುರಂ ಸರಕಾರಿ ಶಾಲೆಯ ನೂತನ ಕಟ್ಟಡವನ್ನು ಎಟಿ ಅಂಡ್ ಎಸ್ ಇಂಡಿಯಾ ಸಂಸ್ಥೆಯ ಹಿರಿಯ ನಿರ್ದೇಶಕ ಸಂತೋಷ್ ಗುಂಡಾಪಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಎಟಿ ಅಂಡ್ ಎಸ್ ಇಂಡಿಯಾವು ತನ್ನ ಸುತ್ತಮುತ್ತಲಿನ ಹಳ್ಳಿಗಳ ನಿವಾಸಿಗಳ ಆಕಾಂಕ್ಷೆಗಳನ್ನು ಗೌರವಿಸುತ್ತದೆ. ಈ ನಿಟ್ಟಿನಲ್ಲಿ ಸಂಸ್ಥೆಯು ಈ ಯೋಜನೆಗಾಗಿ 27 ಲಕ್ಷ ರೂ.ಗಳನ್ನು ವ್ಯಯಿಸಿದೆ. ವಿದ್ಯಾರ್ಥಿಗಳು ಉತ್ತಮ ಶಿಕ್ಷಣವನ್ನು ಪಡೆದು ಜವಾಬ್ದಾರಿಯುತ ಪ್ರಜೆಗಳಾಗುವಂತೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರು, ಅಧ್ಯಾಪಕರು, ಹಾಗೂ ಎಟಿ&ಎಸ್ ಇಂಡಿಯಾ ಸಂಸ್ಥೆಯ ಹಿರಿಯ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಮಾ.24, ವಿಶ್ವ ಮಹಿಳಾ ದಿನಾಚರಣೆ, ವಿಶೇಷ ಕರೋಕೆ ಗಾಯನ ಸ್ಪರ್ಧೆ

ಮೈಸೂರು,ಮಾ.21–ನಗರದ ಸ್ವರಲೋಕ ಸಾಂಸ್ಕೃತಿಕ ಕಲಾ ವೇದಿಕೆ ವತಿಯಿಂದ ಮಾ.24ರಂದು ಬೆಳಗ್ಗೆ 9 ಗಂಟೆಗೆ ಟೌನ್ ಹಾಲ್‌ನಲ್ಲಿ ವಿಶ್ವ ಮಹಿಳಾ ದಿನಾಚರಣೆ ಹಾಗೂ ವಿಶೇಷ ಕರೋಕೆ ಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮಕ್ಕೆ ಚಿತ್ರನಟಿ ರೇಖಾದಾಸ್ ಚಾಲನೆ ನೀಡಲಿದ್ದು, ತೀರ್ಪುಗಾರರಾಗಿ ಗಾಯಕಿ ಜೋಗಿ ಸುನೀತಾ ಭಾಗವಹಿಸಲಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ಪ್ರತಿಭೆಗಳಾದ ವೈದ್ಯಕೀಯ ಕ್ಷೇತ್ರದಲ್ಲಿ ಡಾ.ರೇಖಾ ಅರುಣ್, ಸಮಾಜ ಸೇವಾ ಕ್ಷೇತ್ರದಲ್ಲಿ ನಳಿನಿ ತಮ್ಮಯ್ಯ, ಆರಕ್ಷಕ ಸೇವಾ ಕ್ಷೇತ್ರದಲ್ಲಿ ಇನ್ಸ್‌ಪೆಕ್ಟರ್ ಮಮತಾ ಹಾಗೂ ಧನಲಕ್ಷ್ಮಿ, ಶುಶ್ರೂಷಕಿ ಕ್ಷೇತ್ರದಲ್ಲಿ ಕೆ.ಕೆ.ಯಶೋಧಾ, ರಂಗಭೂಮಿ ಕಲಾವಿದರ ಕ್ಷೇತ್ರದಲ್ಲಿ ಮೇರಿ ವಸಂತ್, ಶಿಕ್ಷಣ ಕ್ಷೇತ್ರದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಪ್ರಿಯಾಂಕ ಶೆಣೈ ಅವರನ್ನು ಇದೇ ವೇಳೆ ಗೌರವಿಸಲಾಗುವುದು. ಸುಮಾರು 45ರಿಂದ 50 ಜನ ರಾಜ್ಯದ ವಿವಿಧ ಜಿಲ್ಲೆಗಳಿಂದ ಗಾಯಕ, ಗಾಯಕಿಯರು ವಿಶೇಷ ಕರೋಕೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ವಿಜೇತರಿಗೆ ಚಿನ್ನದ ಹಾಗೂ ಬೆಳ್ಳಿ ನಾಣ್ಯಗಳನ್ನು ವಿತರಿಸಲಾಗುವುದು. ಕಾರ್ಯಕ್ರಮದಲ್ಲಿ ಸ್ವರಲೋಕ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷರು, ಆಯೋಜಕರಾದ ಯಶಸ್ವಿನಿ ಲೋಕೇಶ್ವರ್, ಉಪಾಧ್ಯಕ್ಷೆ ಗಾಯಕಿ ವಿಜಯಶ್ರೀ, ಪ್ರಧಾನ ಕಾರ್ಯದರ್ಶಿ ಪ್ರಿಯಾ, ಸಂಘಟನಾ ಕಾರ್ಯದರ್ಶಿ ಶಿವರಾಜ್, ಕಾರ್ಯದರ್ಶಿ ಕವಿತಾ, ಖಜಾಂಚಿ ಅಂಕಿತಾ ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶ. ಮಾಹಿತಿಗೆ ಮೊ.9663661646 ಸಂಪರ್ಕಿಸಬಹುದು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ಮೈಸೂರು ವಿವಿ ವತಿಯಿಂದ ನಡೆದ 2023–24ನೇ ಸಾಲಿನ ಚಾಮುಂಡಿ ವಲಯದ ಅಂತರ ಕಾಲೇಜುಗಳ ಪುರುಷರ ಸಾಫ್ಟ್‌ಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಗಳಿಸಿ ಮೈಸೂರು ವಿವಿ ಅಂತರ ವಲಯದ ಸಾಫ್ಟ್‌ಬಾಲ್ ಪಂದ್ಯಾವಳಿಗೆ ಅರ್ಹತೆ ಪಡೆದುಕೊಂಡಿದ್ದಾರೆ. ವಿಜೇತ ಕ್ರೀಡಾಪಟುಗಳೊಂದಿಗೆ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ.ಎಸ್.ಪ್ರತಿಭಾ, ದೈಹಿಕ ಶಿಕ್ಷಣ ನಿರ್ದೇಶಕರಾದ ಎಂ.ಕಾರ್ತಿಕ್, ಸಿ.ಎಸ್.ನಿರಂಜನ್ ಅವರನ್ನು ಚಿತ್ರದಲ್ಲಿ ಕಾಣಬಹುದು.

2024ರ ಲೋಕಸಭಾ ಚುನಾವಣೆ ಹಿನ್ನೆಲೆ

ಮೈಸೂರಲ್ಲಿ 18 ರಾತ್ರಿ ಚೆಕ್‌ಪೋಸ್ಟ್ ಸ್ಥಾಪನೆ

ಮೊದಲ ದಿನವೇ 16 ಲಕ್ಷ ರೂ. ಜಪ್ತಿ

ಮೈಸೂರು, ಮಾ. 21 (ಆರ್‌ಕೆ)– 2024ರ ಲೋಕಸಭಾ ಸಾರ್ವತ್ರಿಕ ಚುನಾವಣೆ ಘೋಷಣೆಯೊಂದಿಗೆ ಜಿಲ್ಲಾಡಳಿತ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದು, ಮೈಸೂರು ನಗರದಲ್ಲಿ ಬುಧವಾರದಿಂದ ಪೊಲೀಸರು ರಾತ್ರಿ ಚೆಕ್ ಪೋಸ್ಟ್‌ಗಳನ್ನು ಆರಂಭಿಸಿದ್ದಾರೆ.

ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರ ನಿರ್ದೇಶನದಂತೆ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಮಾರ್ಗದರ್ಶನದಲ್ಲಿ 18 ದಿಢೀರ್ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದ್ದು, ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್ ಹಾಗೂ ಎಲ್ಲಾ ಉಪ ವಿಭಾಗಗಳ ಎಸಿಪಿಗಳು ಮೈಸೂರು ನಗರದಾದ್ಯಂತ ರಾತ್ರಿ ಚೆಕ್‌ಪೋಸ್ಟ್‌ಗಳಲ್ಲಿ ವಾಹನಗಳ ತಪಾಸಣೆ ನಡೆಸಿದರು. ಎಎಸ್‌ಟಿ, ಎಫ್‌ಎಸ್‌ಟಿ ತಂಡದ ಅಧಿಕಾರಿಗಳೊಂದಿಗೆ ಬುಧವಾರ ರಾತ್ರಿ ನಡೆಸಿದ ತಪಾಸಣಾ ಕಾರ್ಯದಲ್ಲಿ ಒಟ್ಟು 16,21,000 ರೂ. ನಗದು ವಶಪಡಿಸಿಕೊಂಡರು.



ಡಿ.ದೇವರಾಜ ಅರಸು ರಸ್ತೆ, ಅಶೋಕ ರಸ್ತೆ, ಧನ್ವಂತರಿ ರಸ್ತೆ, ಚಾಮರಾಜ ಜೋಡಿ ರಸ್ತೆ, ನಜರ್‌ಬಾದ್ ಮುಖ್ಯ ರಸ್ತೆ, ಲಲಿತ ಮಹಲ್ ರಸ್ತೆ, ಮಹಾತ್ಮ ಗಾಂಧಿ ರಸ್ತೆ ಸೇರಿದಂತೆ ಮೈಸೂರಿನ ಪ್ರಮುಖ ರಸ್ತೆ, ಸರ್ಕಲ್‌ಗಳಲ್ಲಿ ದಿಢೀರ್ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ, ಆಯಾ ವ್ಯಾಪ್ತಿಯ ಠಾಣಾ ಪೊಲೀಸರು ರಾತ್ರಿ ಓಡಾಡುವ ವಾಹನಗಳನ್ನು ತಡೆದು ನಿಲ್ಲಿಸಿ ತೀವ್ರ ತಪಾಸಣೆ ನಡೆಸುತ್ತಿದ್ದಾರೆ. ಈಗಾಗಲೇ ಮೈಸೂರಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಸ್ಥಾಪಿಸಿರುವ ಚೆಕ್ ಪೋಸ್ಟ್‌ಗಳಲ್ಲಿ ದಿನದ 24 ಗಂಟೆಯೂ ವಾಹನಗಳ ತಪಾಸಣಾ ಕಾರ್ಯ ನಡೆಯುತ್ತಿದ್ದು, ಚುನಾವಣಾ ನೀತಿ ಸಂಹಿತೆಯನ್ವಯ ದಾಖಲೆಗಳಿಲ್ಲದೇ ಸಾಗಣೆ ಮಾಡುತ್ತಿರುವ ಹಣ, ಚಿನ್ನ, ಬೆಳ್ಳಿ ಆಭರಣ, ಬೆಲೆಬಾಳುವ ಗೃಹೋಪಯೋಗಿ ವಸ್ತುಗಳು ಹಾಗೂ ಮದ್ಯವನ್ನು ಅಧಿಕಾರಿಗಳು ವಶಪಡಿಸಿಕೊಂಡು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ಇದೀಗ 12 ಚೆಕ್‌ಪೋಸ್ಟ್‌ಗಳ ಜೊತೆಗೆ ಹೊಸದಾಗಿ ಆರಂಭವಾಗಿರುವ ನೈಟ್ ಸರ್‌ಪ್ರೈಸ್ ಚೆಕ್ ಪೋಸ್ಟ್‌ಗಳಲ್ಲೂ ತಪಾಸಣಾ ಕಾರ್ಯಾಚರಣೆ ನಡೆಸುತ್ತಿರುವುದರಿಂದ ಚುನಾವಣೆ ಸಂಬಂಧ ಅಕ್ರಮವಾಗಿ ಸಾಗಣೆ ಮಾಡುವ ವಸ್ತು, ನಗದು, ಮದ್ಯ ಹಾಗೂ ಇತರ ಸಲಕರಣೆಗಳಿಗೆ ಕಡಿವಾಣ ಹಾಕಿದಂತಾಗಿದೆ ಎಂದು ಡಿಸಿಪಿ ಎಂ.ಮುತ್ತುರಾಜ್ ತಿಳಿಸಿದ್ದಾರೆ.

ಒಟ್ಟಾರೆ ಮೈಸೂರು ನಗರ ಮತ್ತು ಹೊರವಲಯದ ಹೆದ್ದಾರಿಗಳಲ್ಲಿ ತೀವ್ರ ತಪಾಸಣೆ ನಡೆಸುತ್ತಿರುವುದರಿಂದ ಚುನಾವಣಾ ಸಂಬಂಧ ಅಕ್ರಮಕ್ಕೆ ಚೆಕ್‌ಪೋಸ್ಟ್‌ಗಳಲ್ಲಿ ಕಡಿವಾಣ ಹಾಕಿದಂತಾಗಿದೆ ಎಂದು ತಿಳಿಸಿದ್ದಾರೆ.

ಮಾ.24ರಂದು ಮೈಸೂರಲ್ಲಿ ಎಸ್ಟಿ ಮೋರ್ಚಾ ಮುನ್ನಡೆ ಸಮಾವೇಶ

ಮೈಸೂರು, ಮಾ.21(ಬಿಎಲ್‌ಯು)– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಎಸ್‌ಟಿ ಮೋರ್ಚಾ ಮುನ್ನಡೆ ಸಮಾವೇಶ ಮಾರ್ಚ್ 24ರಂದು ಮೈಸೂರಿನಲ್ಲಿ ನಡೆಯಲಿದೆ ಎಂದು ಮಾಜಿ ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲಕ್ಷ್ಮಿಪುರಂನ ನೇರಂಬಳ್ಳಿ ಸುಬ್ಬರಾವ್ ಕಲ್ಯಾಣ ಮಂಟಪದಲ್ಲಿ ಅಂದು ಬೆಳಿಗ್ಗೆ 11 ಗಂಟೆಗೆ ಸಮಾವೇಶ ನಡೆಯಲಿದೆ ಎಂದು ಹೇಳಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಚಾಮರಾಜನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲರಾಜ್, ಸಂಸದ ಪ್ರತಾಪ್ ಸಿಂಹ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಶಾಸಕ ರಾಮದಾಸ್ ಸೇರಿದಂತೆ ಹಲವು ನಾಯಕರು ಅಂದಿನ ಸಮಾವೇಶದಲ್ಲಿ ಭಾಗಿಯಾಗಲಿದ್ದಾರೆ ಎಂದರು.

ಎಸ್‌ಟಿ ಸಮುದಾಯಕ್ಕೆ ಬಹಳಷ್ಟು ಕೊಡುಗೆ ನೀಡಿರುವ ಬಿಜೆಪಿ, ಪರಿಶಿಷ್ಟ ಪಂಗಡದವರನ್ನು ಸದಾ ಬೆಂಬಲಿಸಿಕೊಂಡು ಬಂದಿದೆ. ವಾಲ್ಮೀಕಿ ಜಯಂತಿ, ಪರಿಶಿಷ್ಟ ಪಂಗಡ ಆಯೋಗ ರಚನೆ ಸೇರಿದಂತೆ ಹಲವು ಕೊಡುಗೆ ನೀಡಿ, ಮೀಸಲಾತಿ ಪ್ರಮಾಣ ಕೂಡ ಏರಿಕೆ ಮಾಡಿದೆ ಎಂದು ಶಿವಕುಮಾರ್ ತಿಳಿಸಿದರು.

ಪರಿವಾರ, ತಳವಾರ ಸಮುದಾಯವನ್ನು ಎಸ್ಟಿಗೆ ಸೇರ್ಪಡೆ ಮಾಡಿದ ಬಿಜೆಪಿ ಜನಪರ ಯೋಜನೆ ರೂಪಿಸಿದೆ. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಕೊಟ್ಟ ಕೊಡುಗೆ ತಿಳಿಸಲು ಈ ಸಮಾವೇಶ ನಡೆಸಲಾಗುತ್ತಿದೆ ಎಂದು ಹೇಳಿದರು. ಬಿಜೆಪಿ ಎಸ್‌ಟಿ ಘಟಕದ ಅಧ್ಯಕ್ಷ ಪಡುವಾರಹಳ್ಳಿ ರಾಮಕೃಷ್ಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮದ್ಯ ಮಾರಾಟ ನಿಷೇಧ

ಮೈಸೂರು,ಮಾ.21–ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಸಂಬಂಧ ಚುನಾವಣೆಯು ಸುಸೂತ್ರವಾಗಿ ನಡೆಸಲು ಹಾಗೂ ಶಾಂತಿಯುತವಾಗಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಮತದಾನದ ಅಂಗವಾಗಿ ಏ.24ರಂದು ಸಂಜೆ 5ರಿಂದ ಏ.26ರ ಮಧ್ಯರಾತ್ರಿ 12ರವರೆಗೆ ಮತ್ತು ಮೈಸೂರು ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಮತ ಎಣಿಕೆ ಅಂಗವಾಗಿ ಜೂ.3ರಂದು ಮಧ್ಯರಾತ್ರಿ 12ರಿಂದ ಜೂ.4ರ ಮಧ್ಯರಾತ್ರಿ 12ರವರೆಗೆ ಮೈಸೂರು ನಗರ ವ್ಯಾಪ್ತಿ ಹಾಗೂ ನಗರ ವ್ಯಾಪ್ತಿಯಿಂದ 5 ಕಿ.ಮೀ ವ್ಯಾಪ್ತಿಯಲ್ಲಿನ ಎಲ್ಲಾ ವಿಧದ ಮದ್ಯದಂಗಡಿಗಳನ್ನು ಮುಚ್ಚಲು ಮತ್ತು ಮದ್ಯ ಮಾರಾಟ, ಸಾಗಾಣಿಕೆ, ಶೇಖರಣೆಯನ್ನು ನಿಷೇಧಿಸಿ ಒಣ ದಿವಸ(ಡ್ರೈ ಡೇಸ್)ಗಳೆಂದು ಘೋಷಿಸಲಾಗಿದೆ. ಎಲ್ಲಾ ಮದ್ಯದ ಅಂಗಡಿಗಳನ್ನು ಹಾಗೂ ಮದ್ಯ ತಯಾರಿಕಾ ಘಟಕಗಳನ್ನು ಮುಚ್ಚಿಸಿ ಮೊಹರು ಮಾಡಿ ಅದರ ಕೀ ಯನ್ನು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಿಗೆ ಒಪ್ಪಿಸಬೇಕಾಗಿ ಮೈಸೂರು ನಗರ ಮತ್ತು ಮೈಸೂರು ಗ್ರಾಮಾಂತರದ ಅಬಕಾರಿ ಉಪಆಯುಕ್ತರಿಗೆ ನಿರ್ದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮತ್ತು ದಂಡಾಧಿಕಾರಿ ಡಾ.ರಾಜೇಂದ್ರ ಕೆ.ವಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಿಜೆಪಿಗೆ ನೇಮಕ



ಮೈಸೂರು: ಭಾರತೀಯ ಜನತಾ ಪಾರ್ಟಿಯ ಚಾಮರಾಜ ವಿಧಾನಸಭಾ ಕ್ಷೇತ್ರದ ಉಪಾಧ್ಯಕ್ಷರಾಗಿ ಎಸ್.ಅರವಿಂದ್ ಅವರನ್ನು ಕ್ಷೇತ್ರದ ಅಧ್ಯಕ್ಷ ಆರ್.ವಿ. ದಿನೇಶ್‌ಗೌಡ ನೇಮಕ ಮಾಡಿದ್ದಾರೆ.

ಆಸ್ತಿ ತೆರಿಗೆಯನ್ನು ಏ.1ರಿಂದ ಏ.30ರೊಳಗೆ ಪಾವತಿಸಿದಲ್ಲಿ ಶೇ.5ರಷ್ಟು ರಿಯಾಯಿತಿ

ಮೈಸೂರು: ವಿವಿಧ ವರ್ಗಗಳ ಸ್ವತ್ತುಗಳ ಮಾರುಕಟ್ಟೆ ಬೆಲೆಗಳಿಗೆ ಅನುಗುಣವಾಗಿ ಪ್ರಸಕ್ತ ಸಾಲಿನಲ್ಲಿ ಚಾಲ್ತಿ ಇರುವ ಪರಿಷ್ಕೃತ ಮಾರ್ಗಸೂಚಿ ಬೆಲೆಗಳನ್ನು ಅಳವಡಿಸಿಕೊಳ್ಳಲಾಗಿದ್ದು, ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಇರುವ ಎಲ್ಲಾ ಆಸ್ತಿಗಳಿಗೆ ಏ.1ರಿಂದ ಅನ್ವಯವಾಗುವಂತೆ ವಿಧಿಸಿ ಜಾರಿಗೊಳಿಸಲಾಗಿದೆ.

2024–25ನೇ ಸಾಲಿನ ಆಸ್ತಿ ತೆರಿಗೆಯನ್ನು ಏ.1ರಿಂದ ಏ.30 ಒಳಗೆ ಪಾವತಿಸಿದಲ್ಲಿ ಶೇ.5ರಷ್ಟು ಆಸ್ತಿ ತೆರಿಗೆ ರಿಯಾಯಿತಿ ಸೌಲಭ್ಯವಿರುತ್ತದೆ. ಆದುದರಿಂದ, ಏಪ್ರಿಲ್ ಮಾಹೆಯಲ್ಲಿ 2024–25ನೇ ಸಾಲಿನ ಆಸ್ತಿ ತೆರಿಗೆಯನ್ನು ಆಯಾ ವಲಯ ಕಚೇರಿಗಳಲ್ಲಿ ಪಾವತಿಸುವ ಮೂಲಕ ಶೇ.5ರಷ್ಟು ತೆರಿಗೆ ರಿಯಾಯಿತಿ ಪಡೆದುಕೊಳ್ಳಬಹುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ನೀಡಿದರೆ ಬುದ್ಧಿಮಾಂದ್ಯ ಮಕ್ಕಳು ಪೋಷಕರಿಗೆ ಸಮಸ್ಯೆಯೇ ಅಲ್ಲ

ಇಂಡಿಯನ್ ಅಕಾಡೆಮಿ ಆಫ್ ಪಿಡಿಯಾಟ್ರಿಕ್ಸ್ ರಾಜ್ಯಾಧ್ಯಕ್ಷ ಡಾ.ಎಸ್.ಎನ್.ಮೋತಿ ಅಭಿಮತ



'ವರ್ಲ್ಡ್ ಡೌನ್ ಸಿಂಡ್ರೋಮ್ ಡೇ' ಕಾರ್ಯಕ್ರಮವನ್ನು ಇಂಡಿಯನ್ ಅಕಾಡೆಮಿ ಆಫ್ ಪಿಡಿಯಾಟ್ರಿಕ್ಸ್ ರಾಜ್ಯಾಧ್ಯಕ್ಷ ಡಾ.ಎಸ್.ಎನ್.ಮೋತಿ ಉದ್ಘಾಟಿಸಿದರು.

ಭಾರತದಲ್ಲಿ ಪ್ರತಿ ವರ್ಷ 29ರಿಂದ 30 ಸಾವಿರ ಮಕ್ಕಳು 'ಡೌನ್ ಸಿಂಡ್ರೋಮ್'ಗೆ ತುತ್ತಾಗುತ್ತಿದ್ದಾರೆ. 750 ಮಕ್ಕಳಲ್ಲಿ ಒಂದು ಮಗುವಿಗೆ ಬುದ್ಧಿಮಾಂದ್ಯತೆ ಕಾಣಿಸಿಕೊಳ್ಳುತ್ತಿದೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಈ ರೀತಿ ಸಮಸ್ಯೆಯಿಂದ ಬಳಲುತ್ತಿರುವ ಹಲವು ಮಕ್ಕಳಿದ್ದಾರೆ. ಇಂತಹ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಅವರು ಮನೆಯಲ್ಲಿ ಸ್ವತಂತ್ರವಾಗಿರಲು ಪೋಷಕರು ಅವಕಾಶ ನೀಡಿದರೆ, ಈ ಮಕ್ಕಳು ಎಲ್ಲರಂತೆ ಬದುಕು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅಂತೆಯೇ ಈ ಮಕ್ಕಳಿಗೂ ಶಿಕ್ಷಣ ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿ ಬೆಳೆಸಬೇಕು. –ಡಾ.ಎಸ್.ಎನ್.ಮೋತಿ.

ಮೈಸೂರು, ಮಾ.21(ಎಸ್‌ಪಿಎನ್)– ನಮ್ಮ ದೇಶದಲ್ಲಿ ಸಾವಿರಕ್ಕೆ ಒಂದು ಬುದ್ಧಿಮಾಂದ್ಯ ಮಗು ಜನಿಸುತ್ತಿದೆ. ಪೋಷಕರು ಇದನ್ನು ಅಂಗವಿಕಲತೆ ಅಂದುಕೊಳ್ಳಬಾರದು ಎಂದು ಇಂಡಿಯನ್ ಅಕಾಡೆಮಿ ಆಫ್ ಪಿಡಿಯಾಟ್ರಿಕ್ಸ್ ರಾಜ್ಯಾಧ್ಯಕ್ಷ ಡಾ.ಎಸ್.ಎನ್. ಮೋತಿ ಕಿವಿಮಾತು ಹೇಳಿದರು.

ಮೈಸೂರು ನಗರದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಸೆಮಿನಾರ್ ಹಾಲ್‌ನಲ್ಲಿ ಆಯಿಷ್ ಹಾಗೂ ಇಂಡಿಯನ್ ಅಕಾಡೆಮಿ ಆಫ್ ಪಿಡಿಯಾಟ್ರಿಕ್ಸ್ ಸಹಯೋಗದೊಂದಿಗೆ ಆಯೋಜಿಸಿದ್ದ 'ವರ್ಲ್ಡ್ ಡೌನ್ ಸಿಂಡ್ರೋಮ್ ಡೇ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬುದ್ಧಿಮಾಂದ್ಯ ಮಕ್ಕಳಿಂದ ಏನೂ ಸಾಧ್ಯವಿಲ್ಲ ಅಂದುಕೊಳ್ಳಬಾರದು. ಪೋಷಕರು ಸಾಧ್ಯವಾದಷ್ಟು ಈ ಮಕ್ಕಳ ವ್ಯಕ್ತಿತ್ವ ಮತ್ತು ಬೌದ್ಧಿಕ ವಿಕಸನಕ್ಕೆ ಯತ್ನಿಸಬೇಕು. ವಿಶೇಷಚೇತನರು ಸಾಮಾನ್ಯ ಮನುಷ್ಯರಿಗಿಂತ ಹೆಚ್ಚು ಚುರುಕಾಗಿರುತ್ತಾರೆ. ಅವರಿಗೆ ಪ್ರತಿ ವೇದಿಕೆಯಲ್ಲೂ ಅವಕಾಶ ಕಲ್ಪಿಸಿದರೆ, ಬೇರೆ ಬೇರೆ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಾರೆ ಎಂದರು.

ಸೂರತ್‌ನ ವಿಶೇಷಚೇತನ ಬಾಲಕಿ ಯೋಗದ ಮೂಲಕ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ್ದಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಸಮ್ಮುಖದಲ್ಲಿ ಸನ್ಮಾನ ಮಾಡಿರುವುದೇ ಸಾಕ್ಷಿ. ಇಂತಹ ಮಗುವಿನ ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಿಸಬೇಕು ಎಂದು ಸಲಹೆ ನೀಡಿದರು.

ದೇಶದಲ್ಲಿ ಹುಟ್ಟುವ ಪ್ರತಿಯೊಂದು ಮಗುವು ವಿಭಿನ್ನ, ವಿಶೇಷ ಗುಣಗಳನ್ನು ರೂಢಿಸಿಕೊಂಡಿರುತ್ತವೆ. ಮಗು ಹೇಗೇ ಇರಲಿ. ಆ ಮಗುವೇ ತಾಯಿಯ ಪ್ರಪಂಚ. ಅದರ ಆಟ–ಪಾಠ, ಅಪ್ಪುಗೆ ತಾಯಿಗೆ ಸ್ವರ್ಗ ಸುಖ ನೀಡುತ್ತವೆ ಎಂದರು.

ಆದರೆ, ಕೆಲವೊಮ್ಮೆ ಅನುವಂಶಿಕವಾಗಿ ಬರುವ ವರ್ಣತಂತು ಅಥವಾ ಕ್ರೋಮೋಸೋಮ್‌ಗಳಿಂದ ಹುಟ್ಟಿದ ಮಕ್ಕಳು 'ಡೌನ್ ಸಿಂಡ್ರೋಮ್'ಗೆ ಒಳಗಾಗುತ್ತಾರೆ. ಇದು ವೈದ್ಯಕೀಯ ಲೋಕಕ್ಕೂ ಸವಾಲಾಗಿದೆ ಎಂದರು.

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಎಂ.ಪುಷ್ಪಾವತಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಈ ಬಾರಿ 'ವರ್ಲ್ಡ್ ಡೌನ್ ಸಿಂಡ್ರೋಮ್ ಡೇ'ನಲ್ಲಿ ವಿಶೇಷವಾದ ಥೀಮ್ ಇದೆ. ಚಂದ್ರನಂತೆ ಮುಖವಿರುವ ಮಕ್ಕಳು ಯಾವಾಗಲು ನಗುತ್ತಿರುತ್ತವೆ. ಈ ಮಕ್ಕಳ ಸಾಧನೆಗೆ ಪೋಷಕರು ಮನೆಯಲ್ಲಿ ಪೂರಕ ವಾತಾವರಣ ನಿರ್ಮಿಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಇಂಡಿಯನ್ ಅಕಾಡೆಮಿ ಆಫ್ ಪಿಡಿಯಾಟ್ರಿಕ್ ಮೈಸೂರು ಘಟಕದ ಅಧ್ಯಕ್ಷ ಡಾ.ಎಂ.ಆರ್. ಪ್ರಶಾಂತ್, ಮಕ್ಕಳ ನರರೋಗ ತಜ್ಞೆ ಡಾ.ಕೆ.ಅನುಷಾ ರಾಜ್, ಫಾತಿಮಾ, ಸಂಶೋಧಕಿ ಗ್ಲುಬ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.3.2024 ಶುಕ್ರವಾರ, ಮಳೆ ನಕ್ಷತ್ರ: ಉತ್ತರಾಭಾದ್ರ 17.03.2024ರಿಂದ 30.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಗಾನಭಾರತೀ :** ಭರತನಾಟ್ಯ ಕಾರ್ಯಕ್ರಮ, ಸಂಜೆ 6 ರಿಂದ ವಿದುಷಿ ರಾಧಿಕಾ ರಾಮಾನುಜನ್ ಅವರ ಶಿಷ್ಯ ವೃಂದದವರಿಂದ ಭರತನಾಟ್ಯ, ಸಂಜೆ 7 ರಿಂದ ವಿದ್ವಾನ್ ಬದರಿ ದಿವ್ಯಭೂಷಣ್ ಹಾಗೂ ತಂಡದವರಿಂದ ಭರತನಾಟ್ಯ ಕಾರ್ಯಕ್ರಮ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ವ್ಯವಸ್ಥಾಪಕರು :** ಚಿತ್ರ ಕಲಾವಿದ ಸುನಿಲ್ ರಾಜು ಅವರು ಕುಕ್ಕರಹಳ್ಳಿಕೆರೆಯಲ್ಲಿ ಸೆರೆ ಹಿಡಿದಿರುವ ಕಲಾತ್ಮಕ ಛಾಯಾಚಿತ್ರಗಳ ಪ್ರದರ್ಶನ, ಸ್ಥಳ: ಹೆರಿಟೇಜ್ ಹೌಸ್, ರಮ್ಯಾ ರೆಸ್ಟೋರೆಂಟ್ ಎದುರು, ಸರಸ್ವತಿಪುರಂ, ಬೆಳಗ್ಗೆ 10.30 ರಿಂದ.

■ **ದೀಕ್ಷಿತ್ ಆರೋಗ್ಯ ಧಾಮ :** ಉಚಿತ ಮೂಳೆ ಸಾಂದ್ರತೆ ಪರೀಕ್ಷೆ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಬೆಳಗ್ಗೆ 9 ರಿಂದ.


■ **ಜೆಎಸ್‌ಎಸ್ ಕಾನೂನು ಕಾಲೇಜು, ಸುರಾನ–ಸುರಾನ ಅಂತರರಾಷ್ಟ್ರೀಯ ಅಟಾರ್ನಿ :** 21ನೇ ರಾಷ್ಟ್ರೀಯ ಅಣುಕು ನ್ಯಾಯಾಲಯ ಸ್ಪರ್ಧೆ, ಸ್ಥಳ: ಜೆಎಸ್‌ಎಸ್ ಕಾನೂನು ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್:** ವಿಶ್ವ ಜಲದಿನದ ಅಂಗವಾಗಿ ರೋ.ಜಿ.ಕೆ.ಬಾಲಕೃಷ್ಣನ್ ಅವರಿಂದ ನೀರು ಮತ್ತು ನೈರ್ಮಲ್ಯ ಕುರಿತು ಉಪನ್ಯಾಸ, ಅಧ್ಯಕ್ಷತೆ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ.ಆರ್.ದೀಪು, ಸ್ಥಳ: ಎಸ್.ಪಿ.ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಸಂಜೆ 6ಕ್ಕೆ

■ **ರಂಗಾಯಣ:** ರಂಗಾಯಣದ ರೆಪರ್ಟರಿ ಕಲಾವಿದರಿಂದ ಗೋರ್‌ಮಾಟಿ ನಾಟಕ ಪ್ರದರ್ಶನ, ರಂಗರೂಪ: ಶಿರಗಾನಹಳ್ಳಿ ಶಾಂತನಾಯಕ್, ನಿರ್ದೇಶನ: ಸಿ.ಬಸವಲಿಂಗಯ್ಯ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ

■ **ಯೂತ್ ಫೋಟೋಗ್ರಾಫಿಕ್ ಸೊಸೈಟಿ :** 31ನೇ ಎಫ್‌ಐಪಿ ಸಮಾವೇಶ, ಉಪಸ್ಥಿತರು : ವನ್ಯಜೀವಿ ಛಾಯಾಗ್ರಾಹಕ ಬಿ.ಎಸ್. ಕೃಪಾಕರ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸ್ಥಳ: ಹೋಟೆಲ್ ರಿಯೋ ಮೆರಿಡಿಯನ್, ಸಯ್ಯಾಜಿರಾವ್ ರಸ್ತೆ, ಮಧ್ಯಾಹ್ನ 3ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ– ಲೀಲಾ ಅಪ್ಪಾಜಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ–ಡೀನ್ ಎಂ. ರಾಮನಾಥ ನಾಯ್ಡು, ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 9.10 ಆರೋಗ್ಯ ಕಾರ್ಯಕ್ರಮ–ಡಯಾಬಿಟೀಸ್ ಚಿಕಿತ್ಸೆ ಮತ್ತು ನಿರ್ವಹಣೆಯಲ್ಲಿ ಉಪಯೋಗಿಸಲಾಗುವ ವಿವಿಧ ವಿದ್ಯುನ್ಮಾನ ಉಪಕರಣಗಳು ಕುರಿತು ಡಾ.ಲಕ್ಷ್ಮೀ ನಾಗೇಂದ್ರ ಅವರೊಂದಿಗೆ ಮಾತುಕತೆ, 10.00 ಅಮೃತಾ ವೆಂಕಟೇಶ್–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ 1.20 ಭಾವಗೀತೆ–ರಮಾ ರಾಮಕೃಷ್ಣ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ದ್ವಾರಂ ವೆಂಕಟಸ್ವಾಮಿ ನಾಯ್ಡು–ವಯೋಲಿನ್, 4.00 ಮಹಿಳಾರಂಗ–ಸಖೀಸಂವಾದ, ಪ್ರಸ್ತುತಿ–ಕೆ.ಬಿ.ಮೀನಾ, 4.30 ವೃತ್ತಿ ಮಾರ್ಗದರ್ಶನ–ಆರ್ಕಿಟೆಕ್ಚರ್, ಪ್ಲಾನಿಂಗ್ ಮತ್ತು ಡಿಸೈನ್ ವಿಷಯಗಳಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಪ್ರೊ.ಸಪ್ನಾ ಶಿವಕುಮಾರ್ ಅವರೊಂದಿಗೆ ಮಾತುಕತೆ, 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ–ನಾಟಕ "ವರ್ಷಕ್ಕೊಂದು ಕರು", ರಚನೆ–ಡಾ.ಶಿವಕುಮಾರ್ ಕೆ. ರೆಡ್ಡರ್, ನಿರ್ಮಾಣ–ಪ್ರಭುಸ್ವಾಮಿ ಮಳೀಮಠ, 8.00 ಸಂಧ್ಯಾರಾಗ–ಹಿರಿಯ ಗಾಂಧೀವಾದಿ ಟಿ.ಜಿ.ಸತ್ಯನಾರಾಯಣ ಮತ್ತು ಶಶಿರೇಖ ಸತ್ಯನಾರಾಯಣ ಅವರೊಂದಿಗೆ ಆತ್ಮೀಯ ಮಾತುಕತೆ, 9.30 ಎಸ್. ಶಂಕರ್–ಹಾಡುಗಾರಿಕೆ, 10.00 ಹಳ್ಳಿ ಹಾಡು, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 22 ಶುಕ್ರವಾರ 2024

ಸಂಪುಟ: 44 | ಸಂಚಿಕೆ: 333 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕಾಂಗ್ರೆಸ್‌ನ 17 ಅಭ್ಯರ್ಥಿಗಳ ಎರಡನೇ ಪಟ್ಟಿ ಪ್ರಕಟ: ಮಂತ್ರಿಗಳು, ನಾಯಕರ ಮಕ್ಕಳು, ಸಂಬಂಧಿಗಳಿಗೆ ಮಣೆ

ಮೈಸೂರು–ಕೊಡಗು ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್





ಪ್ರಿಯಾಂಕ, ಮೃಣಾಳ್, ಸಂಯುಕ್ತಾ, ರಾಧಾಕೃಷ್ಣ, ಕುಮಾರನಾಯಕ್, ಸಾಗರ್ ಖಂಡ್ರೆ, ಬಸವರಾಜ ಹಿಟ್ನಾಳ್, ವಿನೋದ್, ಅಂಜಲಿ ನಿಂಬಾಳ್ಕರ್, ಪ್ರಭಾ, ಜಯಪ್ರಕಾಶ್‌ಹೆಗ್ಡೆ, ಪದ್ಮರಾಜ್, ಚಂದ್ರಪ್ಪ, ಪ್ರೊ.ರಾಜೀವ್‌ಗೌಡ, ಮನ್ಸೂರ್ ಅಲಿಖಾನ್, ಸೌಮ್ಯರೆಡ್ಡಿ

ನವದೆಹಲಿ, ಮಾ.21– ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಎರಡನೇ ಪಟ್ಟಿ ಬಿಡುಗಡೆ ಮಾಡಿದ್ದು, ಕರ್ನಾಟಕದ 17 ಕ್ಷೇತ್ರಗಳು ಸೇರಿದಂತೆ ದೇಶದ ಒಟ್ಟು 57 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಲಾಗಿದೆ. ಕರ್ನಾಟಕದ ಚಾಮರಾಜನಗರ, ಕೋಲಾರ, ಬಳ್ಳಾರಿ ಮತ್ತು ಚಿಕ್ಕಬಳ್ಳಾಪುರ ಕ್ಷೇತ್ರಗಳ ಅಭ್ಯರ್ಥಿ ಆಯ್ಕೆ ಕಗ್ಗಂಟಾಗಿದೆ.

ಕರ್ನಾಟಕಕ್ಕೆ ಘೋಷಿಸಿರುವ ಅಭ್ಯರ್ಥಿಗಳ ಪೈಕಿ ಮಂತ್ರಿಗಳು ಹಾಗೂ ಹಿರಿಯ ನಾಯಕರ ಮಕ್ಕಳು, ಸಂಬಂಧಿಕರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಉಳಿದ ಬೆರಳೆಣಿಕೆಯಷ್ಟನ್ನು ಕಾರ್ಯಕರ್ತರಿಗೆ ಕಲ್ಪಿಸಲಾಗಿದೆ. ಕಗ್ಗಂಟಾಗಿ ಉಳಿದಿರುವ 4 ಕ್ಷೇತ್ರಗಳಲ್ಲಿ ಕೂಡ ಮಂತ್ರಿಗಳು ಹಾಗೂ ನಾಯಕರ ಸಂಬಂಧಿಗಳು ಟಿಕೆಟ್ ಪಡೆಯುವ ವಿಚಾರವಾಗೇ ಜಿದ್ದಾಜಿದ್ದಿ ನಡೆದಿದೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿರುವ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ವಿರುದ್ಧ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅವರನ್ನು ಕಣಕ್ಕಿಳಿಸಲಾಗಿದೆ. ಕಲಬುರಗಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಳಿಯ ರಾಧಾಕೃಷ್ಣ, ಚಿಕ್ಕೋಡಿಯಲ್ಲಿ ಸಚಿವ ಸತೀಶ್ ಜಾರಕಿಹೊಳಿ ಪುತ್ರಿ ಪ್ರಿಯಾಂಕ ಜಾರಕಿಹೊಳಿ, ಬೆಳಗಾವಿಯಲ್ಲಿ ಸಚಿವೆ ● 6ನೇ ಪುಟಕ್ಕೆ



ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ವಿಶ್ವವಿಖ್ಯಾತ ಮೇಲುಕೋಟೆ ವೈರಮುಡಿ ಉತ್ಸವ ಗುರುವಾರ ರಾತ್ರಿ ವಿಜೃಂಭಣೆಯಿಂದ ನಡೆಯಿತು. ವಜ್ರ ಖಚಿತ ಚಲುವನಾರಾಯಣ ಸ್ವಾಮಿಯ ವೈಭವದ ಮೆರವಣಿಗೆಯನ್ನು ದೇಶ–ವಿದೇಶಗಳಿಂದ ಆಗಮಿಸಿದ್ದ ಲಕ್ಷಾಂತರ ಭಕ್ತರು ಕಣ್ತುಂಬಿಕೊಂಡರು.

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಬಂಧನ

ಹೊಸದಿಲ್ಲಿ: ದೆಹಲಿ ಸರ್ಕಾರದ ಮದ್ಯ ನಿಯಮಗಳ ಬದಲಾವಣೆ ಹಿನ್ನೆಲೆಯಲ್ಲಿ ನಡೆದಿದೆ ಎನ್ನಲಾಗಿರುವ ಭ್ರಷ್ಟಾಚಾರ ಹಾಗೂ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಿದ್ದಾರೆ.

ಗುರುವಾರ ಸಂಜೆ ಸುಮಾರು 6.30 ಹೊತ್ತಿಗೆ ಕೇಜ್ರಿವಾಲ್ ನಿವಾಸಕ್ಕೆ ಆಗಮಿಸಿದ ಅಧಿಕಾರಿಗಳು ಅವರನ್ನು ವಿಚಾರಣೆಗೊಳಪಡಿಸಿದರು. ಸತತ ಮೂರ್ನಾಲ್ಕು ಗಂಟೆಗಳ ವಿಚಾರಣೆಯ ನಂತರ ಅವರನ್ನು ಇ.ಡಿ. ಅಧಿಕಾರಿಗಳು ಬಂಧಿಸಿದ್ದಾರೆ.




ಇದಕ್ಕೂ ಮುನ್ನ, ಅಕ್ರಮ ಹಣ ವರ್ಗಾವಣೆ ಕುರಿತಂತೆ ತಮ್ಮ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ.) ಜಾರಿಗೊಳಿಸಿದ್ದ ಸಮನ್ಸ್ ರದ್ದುಗೊಳಿಸುವಂತೆ ಹಾಗೂ ಬಲವಂತದ ಕ್ರಮದಿಂದ ರಕ್ಷಣೆ ನೀಡುವಂತೆ ದೆಹಲಿ ಹೈಕೋರ್ಟ್‌ಗೆ ಕೇಜ್ರಿವಾಲ್ ಮನವಿ ಸಲ್ಲಿಸಿದ್ದರು. ಅವರ ಮನವಿಯನ್ನು ದೆಹಲಿ ನ್ಯಾಯಾಲಯ ಗುರುವಾರ (ಮಾ.21) ತಳ್ಳಿಹಾಕಿತ್ತು.

ಇದರ ಬೆನ್ನಲ್ಲೇ ಇಂದು ಸಂಜೆ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ನಿವಾಸಕ್ಕೆ ತೆರಳಿದ ಇಡಿ ಅಧಿಕಾರಿಗಳ ತಂಡ,ಮತ್ತೊಂದು ಸಮನ್ಸ್ ಹಾಗೂ ಸರ್ಚ್ ವಾರಂಟ್ ಅನ್ನು ಜಾರಿ ಮಾಡಿ, ಕೇಜ್ರಿವಾಲ್ ಅವರನ್ನು ವಿಚಾರಣೆಗೊಳಪಡಿಸಿತು. ಸತತ ವಿಚಾರಣೆಯ ನಂತರ ರಾತ್ರಿ ಅವರನ್ನು ಅಧಿಕಾರಿಗಳು ಬಂಧಿಸಿದರು. ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಕೇಜ್ರಿವಾಲ್ ಮನೆಗೆ ಆಗಮಿಸಿದ ಕೆಲವೇ ಕ್ಷಣಗಳಲ್ಲಿ ● 9ನೇ ಪುಟಕ್ಕೆ

ಹೆಚ್.ಡಿ.ಕುಮಾರಸ್ವಾಮಿಯವರೇ ಮಂಡ್ಯ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಘೋಷಣೆ

ಮಂಡ್ಯ,ಮಾ.21– ಮಂಡ್ಯ ಲೋಕಸಭಾ ಕ್ಷೇತ್ರದಿಂದ ಜೆಡಿಎಸ್– ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರೇ ಅಭ್ಯರ್ಥಿಯಾಗಲಿದ್ದು, ಪ್ರಚಂಡ ಮತಗಳಿಂದ ಗೆಲುವು ಸಾಧಿಸಲಿದ್ದಾರೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಡ್ಯ ಲೋಕಸಭಾ ಕ್ಷೇತ್ರದಿಂದ ಕುಮಾರಸ್ವಾಮಿ ಅವರು ಸ್ಪರ್ಧಿಸುವುದು ಸತ್ಯ. ಚುನಾವಣಾ ನೇತೃತ್ವವನ್ನು ನಾನೇ ವಹಿಸಿಕೊಂಡು ಭಾರಿ ಮತಗಳ ಅಂತರದಲ್ಲಿ ಗೆಲ್ಲಿಸುವ ಮೂಲಕ ನರೇಂದ್ರ ಮೋದಿ ಅವರ ಕೈಬಲಪಡಿಸುತ್ತೇವೆ. ● 9ನೇ ಪುಟಕ್ಕೆ

ಮಾಜಿ ಸಿಎಂ ಕುಮಾರಸ್ವಾಮಿಗೆ ಯಶಸ್ವಿ ಹೃದಯ ಶಸ್ತ್ರಚಿಕಿತ್ಸೆ

ನಿಖಿಲ್ ಕುಮಾರಸ್ವಾಮಿ ಮಾಹಿತಿ

ಬೆಂಗಳೂರು, ಮಾ.21– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಚೆನ್ನೈನ ಅಪೋಲೋ ಆಸ್ಪತ್ರೆಯಲ್ಲಿ ಗುರುವಾರ ಯಶಸ್ವಿಯಾಗಿ ಹೃದಯ ಶಸ್ತ್ರಚಿಕಿತ್ಸೆ ನಡೆದಿದೆ. ಅಮೆರಿಕ ವೈದ್ಯರು ಸೇರಿದಂತೆ ನುರಿತ ವೈದ್ಯರ ತಂಡ ಕುಮಾರಸ್ವಾಮಿ ಅವರಿಗೆ ಯಶಸ್ವಿಯಾಗಿ ಹೃದಯ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಈ ಬಗ್ಗೆ ಸಾಮಾಜಿಕ ತಾಲತಾಣ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಚೆನ್ನೈನ ಅಪೋಲೋ ಆಸ್ಪತ್ರೆಯಲ್ಲಿ ಇಂದು ಅತ್ಯಂತ ಯಶಸ್ವಿಯಾಗಿ ಹೃದಯ ಶಸ್ತ್ರಚಿಕಿತ್ಸೆ ನಡೆಯಿತು ಎಂದು ತಿಳಿಸಿದ್ದಾರೆ. ಅಭಿಮಾನಿಗಳು, ಹಿತೈಷಿಗಳು, ಜಾತ್ಯತೀತ ಜನತಾದಳ ಪಕ್ಷದ ● 9ನೇ ಪುಟಕ್ಕೆ

ಹೆಚ್‌ಡಿಕೆಗೆ ಸಹಾಯ ಮಾಡುವಂತೆ ದರ್ಶನ್‌ಗೆ ಸಿಎಸ್ಪಿ ಮನವಿ

ಮಂಡ್ಯ: ಮೇಲುಕೋಟೆ ವೈರಮುಡಿ ಆಭರಣಗಳನ್ನು ಸ್ವಾಗತಿಸಲು ಮಂಡ್ಯ ತಾಲೂಕಿನ ಗಡಿ ಭಾಗಕ್ಕೆ ಆಗಮಿಸಿದ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಮಾಧ್ಯಮಗಳ ಜೊತೆ ಮಾತನಾಡುವ ವೇಳೆ ಅಲ್ಲಿಗೆ ಬಂದ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಕೈಕುಲುಕಿದ ಬಳಿಕ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಹೆಚ್.ಡಿ.ಕುಮಾರಸ್ವಾಮಿ ಸ್ಪರ್ಧಿಸುತ್ತಿದ್ದು, ಅವರಿಗೆ ಸಹಾಯ ಮಾಡುವಂತೆ ಮನವಿ ಮಾಡಿದರು. ಈಗಾಗಲೇ ಇಂಡಿಯಾ ಒಕ್ಕೂಟದಲ್ಲಿ ಗುರುತಿಸಿಕೊಂಡಿರುವ ಸರ್ವೋದಯ ಕರ್ನಾಟಕ ಪಕ್ಷದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮುಂದೆ ಸಾಗಿದರು. ಪುಟ್ಟರಾಜು ಅವರ ಮನವಿಗೆ 'ಸರಿ ಸಾರ್' ಸಹಾಯ ಮಾಡೋಣ ಎಂದು ನಗುತ್ತಲೇ ಮುಂದೆ ಸಾಗಿದರು.



ಮುಡಾದಲ್ಲಿ ಭೂಮಾಲೀಕರಿಗೆ ಹೆಚ್ಚುವರಿ ಪ್ರೋತ್ಸಾಹಕ ನಿವೇಶನ ನೀಡಿದ್ದರೆ ಶಿಸ್ತು ಕ್ರಮ

● ಅಧಿಕಾರಿಗಳಿಗೆ ಮುಡಾ ಅಧ್ಯಕ್ಷ ಕೆ.ಮರೀಗೌಡ ಎಚ್ಚರಿಕೆ
● ಈ ಸಂಬಂಧಿತ ದಾಖಲೆಗಳ ಒದಗಿಸಲು ತಾಕೀತು

ಮೈಸೂರು,ಮಾ.21(ಆರ್‌ಕೆ)–ಪ್ರಾಧಿಕಾರದ ಸಭೆ ಅನುಮೋದನೆಯಿಲ್ಲದೆ ಹೆಚ್ಚುವರಿಯಾಗಿ ಪ್ರೋತ್ಸಾಹಕ ನಿವೇಶನಗಳನ್ನು ನೀಡಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧ್ಯಕ್ಷ ಕೆ.ಮರೀಗೌಡ ಎಚ್ಚರಿಕೆ ನೀಡಿದ್ದಾರೆ.

ಈ ಸಂಬಂಧ ಮಾರ್ಚ್ 16ರಂದು ಮುಡಾ ಆಯುಕ್ತರಿಗೆ ಟಿಪ್ಪಣಿ ನೀಡಿರುವ ಅಧ್ಯಕ್ಷರು, ಅದರ ಪ್ರತಿಗಳನ್ನು ಪ್ರಾಧಿಕಾರದ ಕಾರ್ಯದರ್ಶಿ, ವಿಶೇಷ ಭೂಸ್ವಾಧೀನಾಧಿಕಾರಿ ಹಾಗೂ ಎಲ್ಲಾ ವಿಶೇಷ ತಹಶೀಲ್ದಾರರಿಗೂ ರವಾನಿಸಿದ್ದಾರೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪರಸ್ಪರ ಒಪ್ಪಂದದಡಿ ಭೂ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಪ್ರೋತ್ಸಾಹಕ ನಿವೇಶನಗಳನ್ನು ಭೂ ಮಾಲೀಕರಿಗೆ ಈ ಹಿಂದೆಯೇ ಮಂಜೂರು ಮಾಡಲಾಗಿರುತ್ತದೆ. ಈಗ ಕೆಲವರು ನನ್ನನ್ನು ಸಂಪರ್ಕಿಸಿ ಮುಡಾದಿಂದ ಹೆಚ್ಚುವರಿಯಾಗಿ ಪ್ರೋತ್ಸಾಹಕ ನಿವೇಶನಗಳನ್ನು ನೀಡಲಾಗುತ್ತಿದ್ದು, ತಮಗೂ ಕೊಡಬೇಕೆಂದು ಕೇಳುತ್ತಿದ್ದಾರಲ್ಲದೆ, ಹಣಕೊಟ್ಟರೆ ನಿವೇಶನಗಳನ್ನು ತಾವು ಮಂಜೂರು ಮಾಡಿಸುತ್ತೇವೆ ಎಂದು ದಲ್ಲಾಳಿಗಳು ಹೇಳುತ್ತಿದ್ದಾರೆಂದು ಕೆಲ ಭೂಮಾಲೀಕರು ತಮಗೆ ತಿಳಿಸುತ್ತಿದ್ದಾರೆ ಎಂದು ಕೆ.ಮರೀಗೌಡರು ಟಿಪ್ಪಣಿಯಲ್ಲಿ ತಿಳಿಸಿದ್ದಾರೆ. ಈ ಹಿಂದೆ ಪರಸ್ಪರ ಒಪ್ಪಂದದಡಿ ಪ್ರಾಧಿಕಾರದಿಂದ ಭೂ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ನಿವೇಶಗಳನ್ನು ನೀಡಿದ್ದರೂ, ಈಗಲೂ ಹೆಚ್ಚುವರಿಯಾಗಿ ಪ್ರೋತ್ಸಾಹಕ ● 9ನೇ ಪುಟಕ್ಕೆ



ಅನ್ನಭಾಗ್ಯದ ಹಣ 3 ತಿಂಗಳಿಂದ ಬಂದೇ ಇಲ್ಲ...!

● ಫಲಾನುಭವಿಗಳ ಅಳಲು; ಕೆಲವರು ಕಾದು ಕಾದು ಹಿಡಿಶಾಪ ● ಮೈಸೂರಿನಲ್ಲಿದ್ದಾರೆ 7 ಲಕ್ಷ ಬಿಪಿಎಲ್ ಕಾರ್ಡ್‌ದಾರರು ● ಜಿಲ್ಲೆಯಲ್ಲಿ ತಿಂಗಳಿಗೆ 35 ಕೋಟಿ ಭರಿಸಬೇಕು; ಈಗ 105 ಕೋಟಿ ಬಾಕಿ ● ಹಾಗಾದರೆ ಪಂಚ ಗ್ಯಾರಂಟಿಗೆ ಮೀಸಲಿಟ್ಟ ಹಣವೇನಾಯಿತು

ಬಾಪುಲಿಂಗರಾಜ್ ಅರಸ್

ಮೈಸೂರು, ಮಾ.21(ಬಿಎಲ್‌ಯು)– ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಕಾರ್ಡ್‌ದಾರರಿಗೆ ರಾಜ್ಯ ಸರ್ಕಾರ ತಲಾ 10 ಕೆ.ಜಿ. ಅಕ್ಕಿ ಘೋಷಿಸಿದೆ. ಆದರೆ 5 ಕೆ.ಜಿ. ಅಕ್ಕಿ ಜೊತೆಗೆ ಉಳಿದ 5 ಕೆ.ಜಿ. ಅಕ್ಕಿ ಬದಲು ರಾಜ್ಯ ಸರ್ಕಾರ ಹಣ ನೀಡುತ್ತಿದೆ. ಆದರೆ ಕಳೆದ ಮೂರು ತಿಂಗಳಿಂದ ಹಣವೇ ಪಾವತಿಯಾಗಿಲ್ಲ. ಇದರಿಂದ ತಮ್ಮ ಖಾತೆಗೆ ಇಂದಲ್ಲ ನಾಳೆ ಹಣ ಬರಬಹುದೆಂದು ಚಾತಕ ಪಕ್ಷಿಯಂತೆ ಕಾದು ಕುಳಿತಿರುವ ಬಡಜನರು ತೀವ್ರ ನಿರಾಸೆಗೊಂಡು, ಹಿಡಿಶಾಪ ಹಾಕುತ್ತಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ, 10 ಕೆ.ಜಿ. ಅಕ್ಕಿ ನೀಡುವ ಅನ್ನಭಾಗ್ಯವೂ ಒಂದು. ಕೇಂದ್ರ ಸರ್ಕಾರದ ಆಹಾರ ಭದ್ರತಾ ಯೋಜನೆಯಡಿ ಇಷ್ಟು ವರ್ಷ ನೀಡುತ್ತಿದ್ದ 5 ಕೆ.ಜಿ.ಅಕ್ಕಿ ಜೊತೆಗೆ ಹೆಚ್ಚುವರಿಯಾಗಿ 5 ಕೆ.ಜಿ. ಅಕ್ಕಿ ನೀಡಲಾಗುವುದು ಎಂದು ರಾಜ್ಯ ಸರ್ಕಾರ ಘೋಷಿಸಿತ್ತು.

ಆದರೆ ಅಗತ್ಯವಿರುವಷ್ಟು ಅಕ್ಕಿ ಸಿಗದ ಕಾರಣ 5 ಕೆ.ಜಿ. ಅಕ್ಕಿ ಬದಲು ಹಣ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದರು. ಅದರಂತೆ ಒಂದೆರಡು ತಿಂಗಳು ಜನರ ಖಾತೆಗೆ ಹಣ ಜಮೆಯಾಯಿತು. ಆದರೆ ಜನವರಿ ತಿಂಗಳಿಂದ ಮಾರ್ಚ್ ತನಕ ಮೂರು ತಿಂಗಳ ಅವಧಿಯಲ್ಲಿ ಅನ್ನಭಾಗ್ಯ ಯೋಜನೆಯಡಿ ನೀಡಬೇಕಾದ 5 ಕೆ.ಜಿ. ಅಕ್ಕಿಯ ಹಣ ಜನರ ಖಾತೆಗೆ ಜಮಾ ಆಗಿಲ್ಲ.

ಇತ್ತೀಚೆಗೆ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪಂಚ ಗ್ಯಾರಂಟಿ ಯೋಜನೆಗೆ ಹಣ ಮೀಸಲಿಟ್ಟಿದ್ದೇವೆ ಎಂದು ಘೋಷಿಸಿದ್ದರು. ಹಾಗಾಗಿ ಪಂಚ ಗ್ಯಾರಂಟಿ ಯೋಜನೆಗಳು ಫಲಾನುಭವಿಗಳಿಗೆ ಸಿಗುತ್ತದೆ ಎಂದು ಭರವಸೆ ನೀಡಿದ್ದರು.

ಆದರೆ ಈಗ ಮೂರು ತಿಂಗಳಿಂದ ಬಾಕಿ 5 ಕೆ.ಜಿ.ಅಕ್ಕಿ ಹಣ ಬಿಪಿಎಲ್ ಕಾರ್ಡ್‌ದಾರರಿಗೆ ದೊರೆತಿಲ್ಲ. ಬಿಪಿಎಲ್ ಕಾರ್ಡ್‌ದಾರರಿಗೆ ನೀಡಲು ಅಕ್ಕಿಯ ಕೊರತೆ ಇರಬಹುದು. ಆದರೆ, ಹೇಳಿದಂತೆ ಹಣವನ್ನಾದರೂ ಕೊಡಬಹುದಲ್ಲ ಎಂಬುದು ಬಿಪಿಎಲ್ ಕಾರ್ಡ್‌ದಾರರ ಪ್ರಶ್ನೆ. ಮೈಸೂರು ಜಿಲ್ಲೆ ಒಂದರಲ್ಲೇ ಸುಮಾರು



7 ಲಕ್ಷ ಬಿಪಿಎಲ್ ಕಾರ್ಡ್‌ದಾರರಿದ್ದಾರೆ. ತಿಂಗಳಿಗೆ 5 ಕೆ.ಜಿ. ಅಕ್ಕಿ ಹಣದ ಬಾಬ್ತು 35 ಕೋಟಿ. ಈಗ ರಾಜ್ಯ ಸರ್ಕಾರ ಮೂರು ತಿಂಗಳಿಂದ ಹಣ ಪಾವತಿಸಿಲ್ಲ. ಸರ್ಕಾರ ಮೂರು ತಿಂಗಳ ಬಾಕಿ 105 ಕೋಟಿ ರೂ.ಗಳನ್ನು ಕೊಡಬೇಕಿದೆ. ಇದು ಮೈಸೂರು ಜಿಲ್ಲೆ ಒಂದರ ಅಂಕಿ–ಅಂಶ. ಇಡೀ ರಾಜ್ಯದ ಬಾಕಿ ಹಣ ಲೆಕ್ಕ ಹಾಕಿದರೆ ಸಾವಿರಾರು ಕೋಟಿ ರೂ. ಆಗಲಿದೆ. ರಾಜ್ಯ ಸರ್ಕಾರದ ಹಣಕಾಸು ವ್ಯವಸ್ಥೆ ಸುಭದ್ರವಾಗಿದೆ. ಪಂಚ ಗ್ಯಾರಂಟಿ ಸೇರಿದಂತೆ ಯಾವುದೇ ಅಭಿವೃದ್ಧಿ ಯೋಜನೆಗಳಿಗೆ ಹಣದ ಕೊರತೆ ಇಲ್ಲ ಎಂದು ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಾರೆ. ಆದರೆ, ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗೇ ಹಣ ನೀಡದಿರುವುದು ಸಾಮಾನ್ಯ ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಎಪಿಎಲ್ ಕಾರ್ಡ್‌ಗೆ ಪಡಿತರವಿಲ್ಲ, ದಾಖಲೆಗಷ್ಟೆ ಸೀಮಿತ....

ಇದು ಬಿಪಿಎಲ್ ಕಾರ್ಡ್‌ದಾರರ ಗೋಳಾದರೆ, ಎಪಿಎಲ್ ಕಾರ್ಡ್‌ದಾರರ ಅಳಲು ಇದಕ್ಕಿಂತ ಗಂಭೀರವಾಗಿದೆ. ಎಪಿಎಲ್ ಕಾರ್ಡ್ ಅನ್ನು ಸರ್ಕಾರ ಬರೀ ದಾಖಲೆಗೆ ಸೀಮಿತಗೊಳಿಸಿದಂತಿದೆ. ಎಪಿಎಲ್ ಕಾರ್ಡ್‌ದಾರರಿಗೂ ನಿಗದಿ ಪಡಿತರ ನೀಡಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿದಿನ ಕಂಡ ಕಂಡಲ್ಲಿ ಹೇಳುತ್ತಾ ಬಂದಿದ್ದರು. ಆದರೆ ಕಳೆದ ನಾಲ್ಕು ತಿಂಗಳಿಂದ ಎಪಿಎಲ್ ಕಾರ್ಡ್‌ದಾರರಿಗೆ ಪಡಿತರ ನೀಡಿಲ್ಲ. ಡಿಸೆಂಬರ್ ತಿಂಗಳಿಂದ ಎಪಿಎಲ್ ಕಾರ್ಡ್‌ದಾರರಿಗೆ ಪಡಿತರ ಹಂಚಿಕೆ ಮಾಡಿಲ್ಲ. ಮೈಸೂರು ಜಿಲ್ಲೆಯಲ್ಲಿ ಬಿಪಿಎಲ್ ಕಾರ್ಡ್‌ದಾರರಿಗೆ ವಿತರಣೆ ಮಾಡಿ ಉಳಿದ ಪಡಿತರವನ್ನು ಎಪಿಎಲ್ ಕಾರ್ಡ್‌ದಾರರಿಗೆ ನೀಡಲಾಗುತ್ತಿತ್ತು. ಆದರೆ, ಆ ಸ್ಟಾಕ್ ಮುಗಿದ ನಂತರ ಅದೂ ಇಲ್ಲ. ಇದರಿಂದ ಎಪಿಎಲ್ ಕಾರ್ಡ್ ಕೇವಲ ದಾಖಲೆಗಷ್ಟೆ ಸೀಮಿತವಾಗಿದೆ. ಹಾಗಾಗಿ ಮಧ್ಯಮ ವರ್ಗದ ಜನ ಸಂಕಷ್ಟಕ್ಕೀಡಾಗಿದ್ದಾರೆ. ಮೈಸೂರು ಜಿಲ್ಲೆಯಲ್ಲಿ 39,451 ಎಪಿಎಲ್ ಕಾರ್ಡ್‌ಗಳಿವೆ. ಎಪಿಎಲ್ ಕಾರ್ಡ್‌ನಲ್ಲಿ ಒಂದು ಕುಟುಂಬದ ಒಬ್ಬರಿಗೆ 5 ಕೆ.ಜಿ. ಅಕ್ಕಿ, ಇಬ್ಬರಿಗಿಂತ ಎಷ್ಟೆ ಜನರಿದ್ದರೂ 10 ಕೆ.ಜಿ. ಅಕ್ಕಿ ನೀಡಲಾಗುತ್ತಿತ್ತು. ಹಾಗಾಗಿ ಮೈಸೂರು ಜಿಲ್ಲೆಯಲ್ಲಿ ಒಂದು ತಿಂಗಳಿಗೆ ಎಪಿಎಲ್ ಕಾರ್ಡ್‌ದಾರರಿಗೆ 3,641 ಕ್ವಿಂಟಾಲ್ ಅಕ್ಕಿ ಅವಶ್ಯಕತೆ ಇದೆ. ಆದರೆ ಡಿಸೆಂಬರ್ ತಿಂಗಳಿಂದ ಸರ್ಕಾರ ಪಡಿತರ ಹಂಚಿಕೆ ಮಾಡಿಲ್ಲ. ಇದರಿಂದ ಮೈಸೂರು ಸೇರಿದಂತೆ ಕರ್ನಾಟಕದಲ್ಲಿರುವ 24 ಲಕ್ಷ ಎಪಿಎಲ್ ಕಾರ್ಡ್‌ದಾರರಿಗೆ ಪಡಿತರ ಸೌಲಭ್ಯ ಸಿಗದೆ ಕೇವಲ ದಾಖಲಾತಿಗೆ ಮಾತ್ರ ಕಾರ್ಡ್ ಇಟ್ಟುಕೊಂಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ರಿಚರ್ಡ್‌ಸನ್ : ನಿನ್ನೆ, ನನ್ನ ಹೆಂಡತಿ ಕಣ್ಣಿಗೆ ಧೂಳು ಬಿತ್ತು. ನಾನೂರು ರೂಪಾಯಿ ಖರ್ಚಾಯಿತು

ಜಾನ್ಸನ್ : ಅದೇನು ಮಹಾ, ನನ್ನ ಹೆಂಡತಿ ಕಣ್ಣಿಗೆ ನೆಕ್ಲೇಸು ಬಿತ್ತು. ನಾಲ್ಕು ಲಕ್ಷ ರೂಪಾಯಿ ಖರ್ಚಾಯಿತು.

ಮೈಸೂರು ಮಿತ್ರ

ಶುಕ್ರವಾರ, 22 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಪರರನ್ನು ಅರಿತವನೇ ಜಾಣ, ತನ್ನನ್ನು ಅರಿತವನೇ ಜ್ಞಾನಿ –ಲಾವೋತ್ಸೆ

ವೇದ ಸುಳ್ಳಾದರೂ { ಬಲ್ಲವನೇ ಬಲ್ಲ
ಗಾದೆ ಸುಳ್ಳಾಗದು { ಬೆಲ್ಲದ ಸವಿಯ

ನಿಮ್ಮ ಪತ್ರಗಳು

ರಾಚಯ್ಯ ಜೋಡಿ ರಸ್ತೆಯ ಮೋರಿ ಸ್ವಚ್ಛಗೊಳಿಸಿ



ಮಾನ್ಯರೆ,

ಚಾಮರಾಜನಗರ ಪಟ್ಟಣದಲ್ಲಿ ಬಿ.ರಾಚಯ್ಯ ಜೋಡಿ ರಸ್ತೆ ಪ್ರಮುಖ ಮಾರ್ಗವಾಗಿದೆ. ಈ ರಸ್ತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ, ತಹಸೀಲ್ದಾರ್ ಕಚೇರಿ, ನ್ಯಾಯಾಲಯ, ಹಳೆ ಸರ್ಕಾರಿ ಆಸ್ಪತ್ರೆ, ವಿವಿಧ ಅಂಗಡಿಗಳು, ಮೆಡಿಕಲ್ ಸ್ಟೋರ್‌ಗಳು, ಬ್ಯಾಂಕ್‌ಗಳು, ಸರ್ಕಾರಿ ಶಾಲಾ ಕಾಲೇಜು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಇನ್ನಿತರ ಸಂಸ್ಥೆಗಳಿವೆ. ಇದರಿಂದ ಪ್ರತಿನಿತ್ಯ ಹಿರಿಯ ನಾಗರಿಕರು, ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಪ್ರಮಾಣದಲ್ಲಿ ಓಡಾಡುವುದುಂಟು. ಆದರೆ ಈ ರಸ್ತೆಯಲ್ಲಿರುವ ಮೋರಿಗಳು ಸ್ವಚ್ಛತೆ ಇಲ್ಲದೆ ಸೊಳ್ಳೆಗಳ ಆವಾಸ ಸ್ಥಾನವಾಗಿದೆ. ಇದರಿಂದ ಕೆಟ್ಟವಾಸನೆ ಬರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ರೋಗ, ರುಜಿನಗಳು ಹರಡುವ ಭೀತಿಯಲ್ಲಿ ಇಲ್ಲಿನ ನಿವಾಸಿಗಳು ವಾಸಿಸುವಂತಾಗಿದೆ. ಕೂಡಲೇ ಸಂಬಂಧಪಟ್ಟ ಜನಪ್ರತಿನಿಧಿಗಳು ಗಮನಹರಿಸಿ, ಈ ಸಮಸ್ಯೆಯನ್ನು ಬಗೆಹರಿಸಿ ಇಲ್ಲಿನ ನಿವಾಸಿಗಳು ನೆಮ್ಮದಿಯಾಗಿ ಜೀವನ ನಡೆಸಲು ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ನೀರಿನ ಮಹತ್ವದ ಕುರಿತು ಜಾಗೃತಿ ಮೂಡಿಸಿ

ಮಾನ್ಯರೆ,

ಬೆಂಗಳೂರಿನಲ್ಲಿ ತಲೆದೋರಿರುವ ಜಲ 'ಕ್ಷಾಮ' ದಿಂದ ಮೈಸೂರು ನಗರದ ನಾಗರಿಕರು ಕಲಿಯಬೇಕಾದ ಪಾಠ ಬಹಳಷ್ಟಿದೆ. ಇನ್ನು ಕೆಲವೇ ದಿನಗಳಲ್ಲಿ ಪೂರ್ವ ಮುಂಗಾರು ಮಳೆ ಬಾರದಿದ್ದರೆ ಮೈಸೂರು ನಗರದ ಪರಿಸ್ಥಿತಿಯೂ ಬೆಂಗಳೂರಿಗಿಂತ ಭಿನ್ನವಾಗೇನೂ ಇರುವುದಿಲ್ಲ! ನೀರನ್ನು ಪೋಲು ಮಾಡದೆ ಸಂರಕ್ಷಿಸುವ ಹೊಣೆ ಮೈಸೂರು ನಗರದ ಜನತೆಯ ಮೇಲಿದೆ. ಕೆಲವು ಬಡಾವಣೆಗಳಲ್ಲಿ ಸಂಪಿನಿಂದ ಟ್ಯಾಂಕ್‌ಗೆ ನೀರು ತುಂಬಿಸಲು ವಿದ್ಯುತ್ ಮೋಟಾರ್ ಆನ್ ಮಾಡುವ ಮಹಾನುಭಾವರು ಗಂಟೆಗಟ್ಟಲೆ (ಕೆಲವು ಬಾರಿ ದಿನಪೂರ್ತಿ) ನೀರು ಹರಿದು ಪೋಲಾಗುತ್ತಿದ್ದರೂ ಮೋಟಾರನ್ನು ಆಫ್ ಮಾಡುವ ಗೋಜಿಗೇ ಹೋಗುವುದಿಲ್ಲ! ಇದರ ಬಗ್ಗೆ ತಿಳಿಹೇಳಿದವರನ್ನೇ ಏನೋ ತಪ್ಪು ಮಾಡಿದ್ದಾರೇನೋ ಎಂಬಂತೆ ನೋಡುತ್ತಾರೆ! ಹನಿ ನೀರಿನ ಮಹತ್ವವನ್ನು ಎಲ್ಲರೂ ತಿಳಿದುಕೊಂಡು ಜೀವಜಲವನ್ನು ಕಾಪಾಡಿಕೊಳ್ಳಬೇಕಿದೆ. ಶಾಲೆಯಲ್ಲಿ ಮಕ್ಕಳಿಗೆ ಈ ಕುರಿತು ಪೋಷಕರಿಗೆ ತಿಳಿಹೇಳುವಂತೆ ಶಿಕ್ಷಕರು ಹೇಳಬೇಕಿದೆ. ನೀರನ್ನು ಪೋಲು ಮಾಡುವುದು ಕಂಡುಬಂದರೆ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಕರಪತ್ರ ಅಥವಾ ಪೌರಕಾರ್ಮಿಕರ ವಾಹನಗಳ ಮೂಲಕ ನಗರದ ನಾಗರಿಕರಲ್ಲಿ ಪ್ರತಿ ಹನಿ ನೀರಿನ ಮಹತ್ವದ ಕುರಿತು ಜಾಗೃತಿ ಮೂಡಿಸಬೇಕಿದೆ. ಅದಕ್ಕೂ ಸ್ಪಂದಿಸದಿದ್ದರೆ ಅತಿ ಹೆಚ್ಚಿನ ದಂಡವನ್ನು ವಿಧಿಸುವುದರ ಮೂಲಕ ನೀರಿನ ಮಹತ್ವವನ್ನು ಕುರಿತು ಅರಿವು ಮೂಡಿಸಬೇಕಿದೆ. ಈ ಕ್ರಮಕ್ಕೂ ಬುದ್ಧಿ ಕಲಿಯದಿದ್ದರೆ ನೀರಿನ ಸಂಪರ್ಕವನ್ನು ಕಡಿತ ಮಾಡುವ ಮೂಲಕ ಜೀವ ಜಲವನ್ನು ಪೋಲು ಮಾಡುವವರಿಗೆ ಬುದ್ಧಿ ಕಲಿಸಬೇಕಿದೆ!

–ಡಿ.ಶ್ರೀನಿವಾಸ, ಯೂನಿವರ್ಸಿಟಿ ಲೇಔಟ್, ಮೈಸೂರು

ಚುನಾವಣಾ ಪ್ರಕ್ರಿಯೆ: ಇಷ್ಟು ದೀರ್ಘ ಏಕೆ?

ಮಾನ್ಯರೆ,

ಈ ಬಾರಿಯ ಲೋಕಸಭಾ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳಲು ಸುಮಾರು ಎರಡೂವರೆ ತಿಂಗಳ ಸುದೀರ್ಘ ಅವಧಿ ತೆಗೆದುಕೊಳ್ಳುತ್ತಿರುವುದು ಪ್ರಶ್ನಾರ್ಹವಾಗಿದೆ. ಈ ಸಂಬಂಧ ಮುಖ್ಯ ಚುನಾವಣಾ ಆಯುಕ್ತರು, ಭಾರತವು ವಿಸ್ತಾರವಾಗಿರುವುದರಿಂದ ಹೆಚ್ಚು ಸಮಯಾವಕಾಶ ಬೇಕಾಗುತ್ತದೆ ಎಂದು ಹೇಳಿರುವುದು ವಿತಂಡ ಸಮರ್ಥನೆಯಂತೆ ಭಾಸವಾಗುತ್ತದೆ. ಹಾಗಾದರೆ ದೇಶದ ಭೂ ಪ್ರದೇಶ ಇತ್ತೀಚಿನ ವರ್ಷಗಳಲ್ಲಿ ವಿಸ್ತಾರಗೊಂಡಿತೇ ಅಥವಾ ಸುರಕ್ಷಿತವಾಗಿ ಚುನಾವಣೆಗಳನ್ನು ನಡೆಸುವಷ್ಟು ನಮ್ಮ ರಕ್ಷಣಾ ವ್ಯವಸ್ಥೆ ಬಲಿಷ್ಠವಾಗಿಲ್ಲವೆ? ಈವರೆಗೆ ಲೋಕಸಭಾ ಚುನಾವಣೆಗಳಲ್ಲಿ ಪ್ರಕ್ರಿಯೆ ಮುಗಿಸಲು ಕೈಗೊಂಡಿರುವ ಗರಿಷ್ಠ ದಿನಗಳು 38. ಹೀಗಿರುವಾಗ, ಈ ಭಾರಿ ಮಾತ್ರ ಏನಾಗಿದೆ? ಮೊದಲ ಹಂತದ ಮತದಾನ ಮಾಡಿದವರು ಫಲಿತಾಂಶಕ್ಕಾಗಿ ಬರೋಬ್ಬರಿ ಒಂದೂವರೆ ತಿಂಗಳು ಕಾಯಬೇಕು. ಹೆಚ್ಚು ಸುದೀರ್ಘ ಅವಧಿಗೆ ಚುನಾವಣಾ ಪ್ರಕ್ರಿಯೆ ನಡೆಸುವುದು ಅದರ ನ್ಯಾಯ ಬದ್ಧತೆಗೆ ಮಾನದಂಡವಲ್ಲ ಎಂಬುದನ್ನು ನಾವು ಮಾನಗಣಬೇಕಾಗಿದೆ.

ಪ್ರಜಾಪ್ರಭುತ್ವದ ಯಶಸ್ವಿ ಕಾರ್ಯಾಚರಣೆಗೆ ಸಂವಿಧಾನಿಕ ನೈತಿಕತೆಯನ್ನು ಅನುಸರಿಸುವ ಅವಶ್ಯಕತೆ ಎಷ್ಟಿದೆ ಎಂಬುದರ ಕುರಿತು ಅಂಬೇಡ್ಕರ್ ಎಚ್ಚರಿಕೆ ನೀಡಿದ್ದರು. ಆದರೆ ಇಂದು ಪರಮೋಚ್ಚ ಸಾಂವಿಧಾನಿಕ ಸಂಸ್ಥೆಗಳೇ ಅನುಮಾನಾಸ್ಪದ ರೀತಿಯಲ್ಲಿ ವರ್ತಿಸುತ್ತಿರುವುದು ವಿಪರ್ಯಾಸ. ಇಂತಹ ದುಸ್ತರ ಕಾಲದಲ್ಲಿ ಸರಿ ಸುಮಾರು ಎರಡೂವರೆ ತಿಂಗಳ ಕಾಲ ದೇಶವನ್ನು ಚುನಾವಣಾ ಗುಂಗಿನಲ್ಲಿ ಇರಿಸುವ ಮೂಲಕ ಆಯೋಗ ಯಾರ ಹಿತಕ್ಕಾಗಿ ಮಣೆ ಹಾಕುತ್ತಿದೆ? ಮೇಲ್ನೋಟಕ್ಕೆ ಇದು, ಯಾರದ್ದೋ ಚುನಾವಣಾ ಪ್ರಚಾರದ ವೇಳಾಪಟ್ಟಿಗೆ ಪೂರಕವಾಗುವಂತೆ ಆಯೋಗ ತನ್ನ ವೇಳಾಪಟ್ಟಿಯನ್ನೇ ಹೊಂದಿಸಿಕೊಂಡಿರುವ ಹಾಗೆ ಭಾಸವಾಗುತ್ತಿದೆ. ಅಂತಹದೊಂದು ಅನುಮಾನ ಜನರಲ್ಲಿ ಮೂಡಿದರೆ ಅದರಲ್ಲಿ ಯಾವುದೇ ತಪ್ಪಿಲ್ಲ.

–ಕೆ.ಎಸ್.ಸುರೇಶ್, ಶಿಕ್ಷಕರು, ಕೆ.ಜಿ.ಹಳ್ಳಿ, ಹೆಚ್ ಡಿ ಕೋಟೆ.

ಅಂಚೆ ಪತ್ರ ಮಾಯ!

ಮಾನ್ಯರೆ,

ಅಂಚೆಯ ಅಣ್ಣ ಬಂದಿಹ ಚಿಣ್ಣ ಅಂಚೆಯ ಹಂಚಲು ಮನೆ ಮನೆಗೆ ಎಂಬ ಪದ್ಯ ಇತ್ತು. ಅಂಚೆಯ ಬಗ್ಗೆ ಅಪಾರ ಪ್ರೀತಿ ಅಭಿಮಾನ ಇತ್ತು. ಆದರೆ ಕೊರೊನಾ ಬಂದ ಸಮಯದಿಂದ ಯಾಕೋ ತುಂಬಾ ಬೇಸರ ಆಗುತ್ತಿದೆ. ಮೊದಲು ಕೇವಲ 10 ಪೈಸೆ ಕಾರ್ಡ್ ಬಂದರೂ ಸಹ ಅದನ್ನು ತಲುಪಿಸುತ್ತಿದ್ದ ಕಾಲ. ಇಂದು ಮರೆಯಾಗಿದೆ. ಈಗ ಮೊಬೈಲ್, ಇಮೇಲ್ ಯುಗ. ಆದರೂ ಸಹ ಕೆಲವು ಪತ್ರಗಳನ್ನು ಅಂಚೆ ಮೂಲಕವೇ ತರಿಸಿಕೊಳ್ಳಬೇಕು. 1987ರಿಂದ ಧರ್ಮಸ್ಥಳದಿಂದ ಪ್ರಕಟವಾಗುವ ಮಂಜುವಾಣಿ ಪತ್ರಿಕೆಗೆ ಚಂದಾದಾರನಾಗಿದ್ದು 37 ವರ್ಷ ಆದರೂ ಪತ್ರಿಕೆ ನಿರಂತರವಾಗಿ ಬರುತ್ತಿದೆ. ಆದರೆ ಈಗ ಈ ಪತ್ರಿಕೆ ಅಲ್ಲಿಂದ ಕಳಿಸಿದ್ದರೂ ಸಹ ನಮಗೆ ತಲುಪುತ್ತಿಲ್ಲ. ಕಾರಣ ಅಂಚೆ ಕಚೇರಿಯಲ್ಲಿ ಬಟವಾಡೆ ಮಾಡುವವರ ಬೇಜವಾಬ್ದಾರಿ ಅಂತ ಕಾಣುತ್ತೆ. ಪ್ರತಿ ತಿಂಗಳು ನಾವು ದೂರು ನೀಡಲು ಆಗುವುದಿಲ್ಲ. ಆದುದರಿಂದ ಅಂಚೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲರೂ ಸಹ ತಮ್ಮ ಕರ್ತವ್ಯವನ್ನು ಪ್ರಾಮಾಣಿಕತೆಯಿಂದ ಮಾಡಿದರೆ ಉತ್ತಮ. ಇತ್ತ ಇಲಾಖೆ ಅಧಿಕಾರಿಗಳು ಗಮನ ಹರಿಸುವರೇ?

–ಮೃತ್ಯುಂಜಯ, ಪಾಂಡವಪುರ.

ಅರಿತರೆ ಬಾಳು...! ಮರೆತರೆ ಗೋಳು...!!

ಪರಮೇಶ ಕೆ.ಉತ್ತನಹಳ್ಳಿ
ಕನ್ನಡ ಉಪನ್ಯಾಸಕ,
ಮೊ: 7795862281



ಆನಂದವಿಲ್ಲದಿದ್ದರೂ ಬದುಕಬಹುದು, ಆನಂದವಿಲ್ಲದಿದ್ದರೆ ಬದುಕಲಾಗದು. ಒಂದು ವೇಳೆ ಆನಂದವನ್ನು ಕಳೆದುಕೊಂಡ ಬದುಕು ಶವತ್ವದಿ ಬಾಳಬೇಕಾಗುತ್ತದೆ. ಆನಂದವೆಂದರೆ ಖುಷಿ–ನೆಮ್ಮದಿ–ಸಂತೋಷದಿಂದ ಜೀವಿಸುವುದು ಎಂದು ಅರ್ಥ. ನಾವು ನಗುವಿನ ಸಂತೆಗೆ ಹೋಗಿ ಅಳುವನ್ನು ಕೊಂಡುಕೊಂಡು ಮನೆಗೆ ಬಂದು ನೋವಿನ ಅಡುಗೆ ಮಾಡಿ ಎಲ್ಲರಿಗೂ ಅದನ್ನೇ ಬಡಿಸಿ ನಾವು ಅದನ್ನೇ ಊಟ ಮಾಡುತ್ತಿದ್ದೇವೆ. ಇಂದು ಆರ್ಥಿಕ ಬಡತನಕ್ಕಿಂತ ಆರೋಗ್ಯದ ಬಡತನ, ನೆಮ್ಮದಿಯ ಬಡತನ, ಸಂತೋಷದ ಬಡತನವೇ ಕಾಡುತ್ತಿದೆ. ಆರ್ಥಿಕ ಸಬಲತೆ ಎಂದರೆ ಹಣದ ಪ್ರಾಬಲ್ಯದಿಂದ ಏನು ಬೇಕಾದರೂ ಕೊಂಡುಕೊಳ್ಳ ಬಹುದು ಎನ್ನುವ ಮಾತು ಉತ್ಪ್ರೇಕ್ಷೆಯಾಗುತ್ತದೆ. ಹಣ ಮತ್ತು ಆನಂದ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಚಲಿಸುವ ಗಾಲಿಗಳು. ಮಿತಿಯಲ್ಲಿದ್ದರೆ ಸರಿ ದಾರಿಯಲ್ಲೇ ಸಾಗುತ್ತವೆ. ಆದರೆ ಅಳತೆ ಮೀರಿದ ಹಣ ಅಮಲೇರಿಸಿ ತನ್ನಿಂದ ಎಷ್ಟು ಸಾಧ್ಯವೋ ಅಷ್ಟು ಅಮೃತದಂತಹ ಆನಂದದ ಬದುಕಲ್ಲಿ ವಿಷದ ವಿಷಾದವನ್ನು ಮೂಡಿಸುತ್ತದೆ. ಅಂತೆಯೇ ಆನಂದಕ್ಕೂ ಆರೋಗ್ಯಕ್ಕೂ ಪರಸ್ಪರ ನಿಕಟವಾದ ನಂಟಿದೆ. ಆನಂದಕ್ಕೆ ಖುಷಿ, ಸಂತೋಷ, ನೆಮ್ಮದಿ ಈಗೆಲ್ಲಾ ಕರೆದರೂ ಅವುಗಳ ಭಾವಚಿತ್ತ ಒಂದೇ. ಖುಷಿಗೆ ಕಾರಣಗಳು ಆನಂದದ ರೂಪಗಳು ಯಾವುವು ಎಂದು ನೋಡುವುದಾದರೆ ಸಂತಸದ ಸ್ಥಿತಿ–ಭಾವ, ಸಮಾಧಾನದ ಬದುಕು, ಸ್ವಾತಂತ್ರ್ಯ ಜೀವನ. ಖುಷಿಯಿಂದ ಬದುಕಲು ಮತ್ತೊಬ್ಬರಿಗೆ ಒಳಿತನ್ನು ಮಾಡುವುದು, ಯಾವುದರಲ್ಲಿ ತನಗೆ ಆಸಕ್ತಿ ಇದೆಯೋ ಅದರಲ್ಲಿ ಕಾರ್ಯಮಗ್ನರಾಗುವುದು, ತನ್ನ ಹಾಗೂ ತನ್ನ ಕುಟುಂಬದ ಯೋಗ್ಯನಾಗಿ ನಡೆದುಕೊಳ್ಳುವುದು. ಈ ಮೂರು ಸನ್ನಿವೇಶಗಳಲ್ಲಿ ಆನಂದದಲ್ಲಿ ಬದುಕಲು ವೇದಿಕೆ ನಿರ್ಮಾಣ ಮಾಡಿಕೊಳ್ಳಬಹುದು.

ನೆಮ್ಮದಿಯನ್ನು, ಸಂತೋಷವನ್ನು, ಆನಂದವನ್ನು, ಆರೋಗ್ಯವನ್ನು ಅಂಗಡಿಗಳಲ್ಲಿ ಹುಡುಕುವುದಕ್ಕಿಂತ ಮನಸ್ಸುಗಳಲ್ಲಿ ಗರ್ಭೀಕರಿಸಿಕೊಂಡಿರುವ ಗೆಲುವುಗಳಲ್ಲಿ ಕಂಡುಕೊಳ್ಳುವುದು ಒಳಿತು. ಸಾಮಾನ್ಯವಾಗಿ ಎಲ್ಲರ ಬಯಕೆ ಏನೆಂದರೆ ನಾನು ಜೀವನದಲ್ಲಿ ನೆಮ್ಮದಿಯ, ಸಂತೋಷದ ಹಾಗೂ ಆರೋಗ್ಯದಿಂದ ಆನಂದದಿಂದ ಬದುಕಿದರೆ ಸಾಕು ಎಂದು ಪ್ರತಿ ಬಾರಿ ಹೇಳಿಕೊಳ್ಳುತ್ತಿರುತ್ತೇವೆ. ಆದರೆ ಈ ಅಂದುಕೊಳ್ಳುವುದು ರೂಢಿಗತವಾಗಿ ವ್ಯಕ್ತವಾಗಿ ಅನ್ವಯಿಸಿಕೊಂಡಿದ್ದೇ ಆದರೆ ಬದುಕು ಹೂ ಬಿಡುವ ಬನವಾಗುತ್ತದೆ. ಒಂದು ವೇಳೆ ಕೊಂಡುತಂದ ವಸ್ತುಗಳಲ್ಲಿಯೇ ಆನಂದವನ್ನು ಕಾಣುತ್ತೇವೆ ಎಂದು ಕೃತಕತೆಯ ಬಲೆಯಲ್ಲಿ ಸಂತೋಷದಂತಹ ಭಾವನೆಗಳನ್ನು ಹುಡುಕಿದ್ದೇ ಆದರೆ ಕಾಡ್ಗಿಚ್ಚಿಗೆ ಸಿಕ್ಕಿ ದಹನವಾದ ಕಾಡಿನ ಬದುಕು ನಮ್ಮದಾಗುತ್ತದೆ. ಖುಷಿಯನ್ನಾಗಲಿ, ಸಂತೋಷವನ್ನಾಗಲಿ ಕಾಣೆಯಾದವರ ಹುಡುಕಿಕೊಡಿ ಎಂದು ಜಾಹೀರಾತು ನೀಡಿ ತಡಕಾಡುವ ಪ್ರಮೇಯದಿಂದ ಲಭ್ಯವಾಗದು ಬದಲಿಗೆ ಅವುಗಳು ನಮ್ಮೊಳಗಿರುವ ಜೀವಧಾತು–ಭಾವದ ಸೆಲೆ, ಬತ್ತಬಾರದು ಗಂಗೆ.

ಆಧುನಿಕ ಗಾಳದ ಪ್ರಪಂಚ ಎಲ್ಲರನ್ನು, ಎಲ್ಲವನ್ನು ತನ್ನ ಬಲೆಯೊಳಗೆ ಬೀಳಿಸಿಕೊಂಡು ಎಷ್ಟು ಸಾಧ್ಯವೋ ಅಷ್ಟು ಬಗ್ಗುಬಡಿವ ಹುನ್ನಾರದಲ್ಲಿಯೇ ಕಾರ್ಯಪ್ರವೃತ್ತವಾಗಿರುತ್ತದೆ. ಇಲ್ಲಿ ಸಂತೋಷಕ್ಕಿಂತ ವ್ಯವಹಾರವೇ ಗಣ್ಯವಾಗಿರುತ್ತದೆ, ಆರೋಗ್ಯಕ್ಕಿಂತ ಆರ್ಥಿಕ ಸಬಲತೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ಒಂದು ಬಗೆಯಲ್ಲಿ ರೆಕ್ಕೆ ಇಲ್ಲದ ಹಕ್ಕಿಯಂತೆ ಮಾಡಿ ಬಿಡುತ್ತದೆ. ಆರ್ಥಿಕ ಸಬಲತೆಯಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿರುವ, ಹಣ–ಅಧಿಕಾರವನ್ನು ಸಮೃದ್ಧವಾಗಿ ಸಂಪಾದಿಸಿರುವ ವ್ಯಕ್ತಿಗಳು ಕೂಡ ಒಂದು ಬಗೆಯ ಮಾನಸಿಕ ಶಾಂತಿ ಇಲ್ಲದೆ ಆರೋಗ್ಯದ ಚೈತನ್ಯವನ್ನು ಮಾರಾಟ ಮಾಡಿ ಬದುಕುತ್ತಿರುವ ಅದೆಷ್ಟೋ ಮಂದಿ ನಮ್ಮೊಂದಿಗೆ ಇದ್ದಾರೆ. ಅವರ ಪಾಲಿನ ಆಸೆ–ಬಯಕೆ ಒಂದೆ. ಹುಟ್ಟುವಾಗಲಂತೂ ಆಸ್ಪತ್ರೆಯಲ್ಲಿ ಹುಟ್ಟಿದ್ದೇವೆ, ಸಾಯುವಾಗ ಆಸ್ಪತ್ರೆಯಲ್ಲಿ ಪ್ರಾಣ ಹೋಗದಿದ್ದರೆ ಸಾಕು ಎಂಬ ಕೋರಿಕೆಯ ಪ್ರಾರ್ಥನೆಗಳನ್ನು ನಾನೇ ಎಷ್ಟೋ ಬಾರಿ ಕೇಳಿಸಿಕೊಂಡಿದ್ದೇನೆ. ಇಷ್ಟೆಲ್ಲಾ ಹೇಳಿದರೂ ನಮ್ಮ ಜೀವನದಲ್ಲಿ ನೆಮ್ಮದಿಯ ಕುರುಹುಗಳೇ ಇಲ್ಲವೇ, ಸಂತೋಷದಿಂದ ಬದುಕಲು ಸಾಧ್ಯವಿಲ್ಲವೇ ಎಂಬ ಪ್ರಶ್ನೆ ಎದ್ದು ನಿಲ್ಲುವುದು ಸಹಜ. ನಾಲ್ಕು ದಿನದ ಬದುಕಲ್ಲಿ ಎಲ್ಲವೂ ಇದ್ದೇ ಇದೆ; ನೋವಿದೆ, ನಲಿವಿದೆ, ದುಃಖವಿದೆ, ಸಂತೋಷವಿದೆ, ಆಸೆ ಇದೆ, ಆಮಿಷವಿದೆ, ಕಷ್ಟವಿದೆ, ಸುಖವಿದೆ. ರಾತ್ರಿ ಹಗಲು ಇದ್ದಂತೆ, ಕತ್ತಲು ಬೆಳಕು ಇದ್ದಂತೆ ಇವುಗಳೇ ಆವರಿಸಿಕೊಂಡು ಬದುಕು ಹರಡಿ ನಿಂತಿದೆ. ಈ ನಡುವೆ ನಾವು ಕೆಲವು ವೇಳೆ ನಮಗಿಲ್ಲದ ಸಂತೋಷ ಮತ್ತೊಬ್ಬರಲ್ಲೂ ಇರಬಾರದೆನ್ನುವ ಹೊಟ್ಟೆಕಿಚ್ಚಿನಿಂದ ಅಸೂಯೆಪಡುತ್ತೇವೆ. ಈಗೆ ಮಾಡುವುದು ಸುಖವನ್ನು, ಸಂತೋಷವನ್ನು ಮಾರಿ ದುಃಖವನ್ನು ನಾವೇ ಖರೀದಿಸಿದಂತೆ. ಅದಕ್ಕೆ ಬಸವಣ್ಣನವರು 'ತನ್ನ ಬಣ್ಣಿಸಬೇಡ ಇದಿರ ಅಳಿಯಲುಬೇಡ' ಎಂದು ಮನುಷ್ಯನ ಸಣ್ಣತನವನ್ನು ಕುರಿತು ತಿಳಿಸಿದ್ದಾರೆ. ವಿಶಾಲ ಹೃದಯದಲ್ಲಿ ಮಾತ್ರವೇ ಆನಂದ, ಸಂತೋಷ ಬದುಕಿರಲು ಸಾಧ್ಯ. ಖುಷಿಯಾಗಿ ಬದುಕಲು ಸಾಕಷ್ಟು ಅವಕಾಶಗಳಿದ್ದರು ಚೂರು ಚೂರು ಕಾರಣಗಳಿಗೆ ಭೂಮಿ ತೂಕದ ಭಾರವನ್ನೆಲ್ಲಾ ತಾನೇ ಹೊತ್ತಿರುವವನಂತೆ ಭಾರವಾದ ಬದುಕನ್ನು ಸಾಗಿಸುವುದು ಎಲ್ಲಿಂದ ಸಂತೋಷವನ್ನು ಹೊತ್ತು ತರುವುದು. ಗೊತ್ತು ಗುರಿ ಇಲ್ಲದೆ ಸಮಸ್ಯೆಗಳ ಸೃಷ್ಟಿಸಿಕೊಂಡು ಬದುಕನ್ನು ನರಕ ಮಾಡಿ ಕೊಂಡರೆ ಚೈತನ್ಯದ ಚಿಲುಮೆ ಉಕ್ಕಲಾರದು.

> “ ಜಂಜಾಟದ ಬದುಕಲ್ಲಿ ಶಾಂತಿ ಹುಡುಕುವುದು, ಒತ್ತಡದ ಬದುಕಲ್ಲಿ ನೆಮ್ಮದಿ ಕಂಡುಕೊಳ್ಳುವುದು, ಹಣ ಖರ್ಚುಮಾಡಿ ಆರೋಗ್ಯ ಕೊಳ್ಳುವುದು ಅಸಾಧ್ಯದ ಕೆಲಸ. ಒಂದು ಮಾತಂತು ಸತ್ಯ ಸಂತೋಷಕ್ಕಾಗಲಿ, ದುಃಖಕ್ಕಾಗಲಿ ನಾವೇ ಹೊಣೆಗಾರರಾಗಿರುತ್ತೇವೆ. ಇರುವುದರಲ್ಲಿ ಇರುವುದನ್ನು ಹುಡುಕದೆ, ಇಲ್ಲದಿರುವಲ್ಲಿ ಇರುವುದನ್ನು ಹುಡುಕಲು ಅದನ್ನೇ ಹಿಡಿಯುತ್ತೇನೆ ಎಂಬ ಹುಂಬತನದಲ್ಲಿ ಬೆನ್ನತ್ತುವುದು ಖುಷಿಯ ಕ್ಷಣಗಳನ್ನು ಸಂಹರಿಸಿ ಬಿಡುತ್ತದೆ.

ಜಂಜಾಟದ ಬದುಕಲ್ಲಿ ಶಾಂತಿ ಹುಡುಕುವುದು, ಒತ್ತಡದ ಬದುಕಲ್ಲಿ ನೆಮ್ಮದಿ ಕಂಡುಕೊಳ್ಳುವುದು, ಹಣ ಖರ್ಚುಮಾಡಿ ಆರೋಗ್ಯ ಕೊಳ್ಳುವುದು ಅಸಾಧ್ಯದ ಕೆಲಸ. ಒಂದು ಮಾತಂತು ಸತ್ಯ ಸಂತೋಷಕ್ಕಾಗಲಿ, ದುಃಖಕ್ಕಾಗಲಿ ನಾವೇ ಹೊಣೆಗಾರರಾಗಿರುತ್ತೇವೆ. ಇರುವುದರಲ್ಲಿ ಇರುವುದನ್ನು ಹುಡುಕದೆ, ಇಲ್ಲದಿರುವಲ್ಲಿ ಇರುವುದನ್ನು ಹುಡುಕಲು ಅದನ್ನೇ ಹಿಡಿಯುತ್ತೇನೆ ಎಂಬ ಹುಂಬತನದಲ್ಲಿ ಬೆನ್ನತ್ತುವುದು ಖುಷಿಯ ಕ್ಷಣಗಳನ್ನು ಸಂಹರಿಸಿ ಬಿಡುತ್ತದೆ. ಖುಷಿಯ ಕ್ಷಣಗಳೊಂದಿಗೆ ನಮ್ಮ ಬದುಕನ್ನು ಹೊಂದಿಸಿಕೊಂಡು ಹೋಗಲು ಕೆಲವು ಕ್ರಿಯಾಶೀಲವಾದ ಸೂತ್ರದ ಎಳೆಗಳು ಇಲ್ಲಿ ನಮಗೆ ಕಾಣಸಿಗುತ್ತವೆ.

ದುರಾಸೆಯ ದುಂದು ವೆಚ್ಚಕ್ಕೆ ಕಡಿವಾಣ ಹಾಕಬೇಕು: ನಮ್ಮ ಖರ್ಚು ಸಂಪಾದನೆಯ ಒಂದು ರೂಪಾಯಿಗಿಂತ ಕಡಿಮೆ ಇರಬೇಕೇ ವಿನಃ ಅದನ್ನು ಮೀರಬಾರದು. ಸಾಲ ಮಾಡಿ ತುಪ್ಪ ತಿನ್ನುವ ಮನೋಭಾವ ಖುಷಿಯ ಬದುಕನ್ನು ನರಕವಾಗಿಸುತ್ತದೆ. ಏನೇ ಖರ್ಚು ಮಾಡಿದರೂ ಅದರ ಲೆಕ್ಕ ಬರೆದಿಡುವ ಅಂದಾಜು ಆಯವ್ಯಯದ ಬಾಬ್ತನ್ನು ಸಿದ್ಧಪಡಿಸಿಕೊಳ್ಳುವುದು ಒಳಿತು.

ಮತ್ತೊಬ್ಬರೊಂದಿಗೆ ಹೋಲಿಕೆ ಸಲ್ಲದು: ಇರುವ ಆದಾಯದಲ್ಲಿ ಬದುಕಲು ಸಾಕಷ್ಟು ಅವಕಾಶಗಳಿದ್ದರು ಹೋಲಿಕೆ ಮತ್ತು ಅನುಕರಣೆಯಿಂದ ನಮ್ಮ ಬದುಕಿಗೆ ಶೋಭೆ ತಂದುಕೊಳ್ಳುತ್ತೇನೆ ಎಂದು ಪ್ರತಿಯೊಂದಕ್ಕೂ ಅನುಕರಿಸುತ್ತಾ, ಹೋಲಿಕೆಗೆ ಮನಸ್ಸು ಮಾಡಿದ್ದೇ ಆದರೆ ಬಾಳು ಗೋಳಿನ ಆಗರವಾಗುತ್ತದೆ. ನಮ್ಮ ಬದುಕು ನಮಗೆ, ಅವರ ಬದುಕು ಅವರಿಗೆ, ಅವರಂತೆ ನಾವಿಲ್ಲ, ನಮ್ಮಂತೆ ಅವರಿಲ್ಲ. ಅವರ ಸಂಪಾದನೆ, ಖರ್ಚು–ವೆಚ್ಚದ ಇತಿ ಮಿತಿಗಳೇ ಬೇರೆ, ನಮ್ಮ ಸಂಪಾದನೆ, ಖರ್ಚು–ವೆಚ್ಚದ ಇತಿಮಿತಿಗಳೇ ಬೇರೆ ಅನುಕರಣೆಯಿಂದ ದಿವಾಳಿಯಾಗಿ ಖುಷಿಯನ್ನು ಮಾರಾಟ ಮಾಡಿದ ಎಷ್ಟೋ ಕುಟುಂಬಗಳು ದಾಖಲೆಗೆ ಸಿಗುತ್ತವೆ.

ಪ್ರತಿ ನಿರ್ಧಾರಗಳು ಆಲೋಚನೆಯಿಂದ ಕೂಡಿರಲಿ: ಹಲವು ವೇಳೆ ಮೂಕ ಪ್ರಾಣಿಯಂತೆ, ಅವಸರಕ್ಕೆ ಜೋತು ಬಿದ್ದ ವ್ಯಕ್ತಿಯಂತೆ ಇಂದು ಮುಂದು ಪರಿಶೀಲಿಸದೆ ತಕ್ಷಣವೇ ತೀರ್ಮಾನಕ್ಕೆ ಮುಂದಾಗುವುದು, ವಿನಾಕಾರಣ ಕೈ ಸುಟ್ಟುಕೊಳ್ಳುವುದು ಖುಷಿಯ ಬದುಕನ್ನು ಸರ್ವಪತನ ಮಾಡುತ್ತದೆ. ಯಾವುದೇ ತೀರ್ಮಾನ–ನಿರ್ಧಾರ ತೆಗೆದುಕೊಳ್ಳುವಾಗ ಒಂದೆರಡು ಬಾರಿ ಯೋಚಿಸುವ ಹಾಗೂ ಬಲ್ಲವರೊಂದಿಗೆ ಸಮಾಲೋಚನೆ ಮಾಡುವುದು ಒಳಿತು ಇಲ್ಲವಾದರೆ ತಪ್ಪು ನಿರ್ಧಾರಗಳಿಗೆ ಬಲಿಯಾಗಬೇಕಾಗುತ್ತದೆ.


ಅಂಟಿಕೊಂಡು ಕೂರುವುದು ಬೇಡ: ಬದುಕನ್ನು ಸಾಗಿಸಲು ನೂರಾರು ದಾರಿಗಳಿವೆ. ಪ್ರತಿಭೆಯಿದ್ದರೂ, ಅವಕಾಶಗಳಿದ್ದರೂ ಯಾವುದೋ ಒಂದು ಉದ್ದೇಶದಿಂದ ಒಂದನ್ನೇ ಆಶ್ರಯಿಸಿ ಅದಕ್ಕೆ ಅಂಟಿಕೊಂಡರೆ ಕೂಪ ಮಂಡುಕಗಳಾಗಬೇಕಾಗುತ್ತದೆ. ಬಾವಿಯೊಳಗಿನ ಕಪ್ಪೆಯಾದರೆ ಬದುಕೆಲ್ಲವೂ ಸಪ್ಪೆ ಸಪ್ಪೆ ಎನ್ನುವಂತಾಗುವ ಪರಿಸ್ಥಿತಿಗೆ ಬಂದು ತಲುಪದೆ ಹೊಸತನದ ಬದುಕು ತೆರೆದುಕೊಳ್ಳುತ್ತದೆ.

ನಡೆದಷ್ಟಿದೆ ನೆಲ,
ಕುಡಿದಷ್ಟಿದೆ ಜಲ,
ಹಾರಿದಷ್ಟಿದೆ ಆಕಾಶ,

ಎನ್ನುವಂತೆ ಸರಿಯಾದ ದಾರಿ ಹಿಡಿದು ಮುಂದೆ ನಡೆದು ಸಾಗಿದರೆ ಬದುಕು ಚೈತನ್ಯ ಪೂರ್ಣವಾಗುತ್ತದೆ.

ಭಾವನೆಗಳ ಭಾರದಲ್ಲಿ ಬದುಕುವುದಲ್ಲ: ಕೆಲವು ವೇಳೆ ನಮ್ಮ ಭಾವನೆಗಳೇ ನಮಗೆ ಮುಳುವಾಗುತ್ತವೆ. ಒಳ್ಳೆಯತನವನ್ನು ದುರುಪಯೋಗಪಡಿಸಿಕೊಂಡು ನೆಮ್ಮದಿಯ ನೆರಳು ಕೊಡುವ ಮರವನ್ನೇ ನಾಶಪಡಿಸುವ ಹುನ್ನಾರ ಸದಾ ಕಾಲ ನಡೆಯುತ್ತಲೇ ಇರುತ್ತದೆ. ಅಂತಹ ಬಾಂಧವ್ಯದ ಭಾವನೆಗೆ ಬೆಲೆ ನೀಡಿದ್ದೇ ಆದರೆ ಮಧುರ ಮೈತ್ರಿ, ಖುಷಿಯು ಕುಸಿತ ಕಾಣುತ್ತದೆ.

ಸದಭಿರುಚಿಯ ಹವ್ಯಾಸಗಳಿಗೆ ಆಸ್ಪದ: ಎದೆಯ ಬಟ್ಟಲಲ್ಲಿ ಖುಷಿಯ ಕ್ಷಣಗಳು ಸ್ಥಿರವಾಗಿ ಉಳಿಯಲು ಕೆಲವು ಒಳ್ಳೆಯ ಹವ್ಯಾಸಗಳನ್ನು ಮೈಗೂಡಿಸಿಕೊಳ್ಳಬೇಕು. ಮೌಲ್ಯಯುತ ಪುಸ್ತಕಗಳನ್ನು ಓದುವ, ತಮ್ಮ ಮನಸ್ಸಿಗೆ ತೋಚಿದ ಭಾವನೆಗಳನ್ನು ಅಕ್ಷರ ರೂಪಕ್ಕೆ ಇಳಿಸುವ, ಇಂಪಾದ ಸಂಗೀತವನ್ನು ಆಸ್ವಾದಿಸುವ, ಮುದ ನೀಡುವ ಸ್ಥಳಗಳಿಗೆ ಪ್ರವಾಸ ಕೈಗೊಳ್ಳುವ, ಇಷ್ಟದ ಕೆಲಸಗಳನ್ನು ತೃಪ್ತಿಯಿಂದ ಮಾಡಿದಾಗ ಆತ್ಮತೃಪ್ತಿ–ಸಂತೃಪ್ತಿಯ ಭಾವ ತಾಳಲು ಸಾಧ್ಯವಾಗುತ್ತದೆ. ಒಟ್ಟುಗೂಡಿಸಿ ಹೇಳುವುದಾದರೆ ಯಾರು ಯಾರೊಂದಿಗೂ ಹೋಲಿಸಿಕೊಳ್ಳದೆ ತಮಗೆ ಎದುರಾದ ಬದುಕನ್ನು ತಾವು ಬದುಕಬೇಕು, ಆದಷ್ಟು ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು, ಕುಟುಂಬದೊಂದಿಗೆ, ಸಂಬಂಧಿಕರೊಂದಿಗೆ ಸಮಯವನ್ನು ಕಾಯ್ದಿರಿಸುವುದು. ಆರೋಗ್ಯವಂತ ದೇಹವೇ ನಿಜವಾದ ಖುಷಿ. ಅದಕ್ಕೇ ಬಲ್ಲವರು ಹೇಳಿರುವುದು ಆರೋಗ್ಯವೇ ಭಾಗ್ಯವೆಂದು. ಯಾವ ಭಾಗ್ಯ ಕಳೆದುಕೊಂಡರು ತರಬಹುದು, ಆದರೆ ಆರೋಗ್ಯ ಕೈಕೊಟ್ಟರೆ ತರಲಾಗದು. ಅಸಹಾಯಕರಿಗೆ–ದುರ್ಬಲರಿಗೆ ಸಹಾಯ ಹಸ್ತ ನೀಡಬೇಕು. ಮನತುಂಬಿ ನಗುವುದು. ಆದರೆ ಅದು ಅಪಹಾಸ್ಯದ ನಗುವಾಗದೆ ಮುಕ್ತಭಾವದ ನಗುವು ಹೃದಯವನ್ನು ಅರಳಿಸುತ್ತವೆ. ಇಲ್ಲಿ ಉಲ್ಲೇಖಿಸಿರು ವಿಚಾರಗಳು ನಮ್ಮ ಬದುಕನ್ನು ಖುಷಿಯ ಕಡೆಗೆ ಕರೆದುಕೊಂಡು ಹೊಗುವ ಗ್ರಹಿಕೆಯ ಅಂಶಗಳು ಅಷ್ಟೇ. ಹೀಗೆ ಯೋಚಿ ಸುತ್ತಾ ನಡೆದಂತೆಲ್ಲ ಮನಸ್ಸಿನ ಭಾವನೆಗಳಾದ ಸಂತೋಷ, ನೆಮ್ಮದಿ, ಖುಷಿ, ಆನಂದವನ್ನು ಹೊರಗಿನಿಂದ ತಂದು ತುರುಕಿಕೊಳ್ಳಲಾಗದ ಅಂಶಗಳು ಎಂದು ಸಾಬೀತಾಯಿತು. ಆದ್ದರಿಂದ ನಾವು ನಮ್ಮನ್ನು ಎಚ್ಚರಕ್ಕೆ ಒಳಗು ಮಾಡಿಕೊಂಡು ಬದುಕಿನ ಪುಟದಲ್ಲಿ ಜೀವಿಸಿದ್ದೇ ಆದರೆ ಬದುಕು ನಮಗೆ ಖುಷಿ ಕೊಡುತ್ತದೆ ಇಲ್ಲವಾದರೆ ನರಕದ ಬಾಗಿಲಿಗೆ ದ್ವಾರಪಾಲಕರು ನಾವೇ ಆಗಬೇಕಾಗುತ್ತದೆ.





ಮೈಸೂರಿನಲ್ಲಿ ಹಿರಿಯ ವಕೀಲರೂ ಆದ ಲಾ ಗೈಡ್ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರಿಗೆ ಹುಟ್ಟುಹಬ್ಬದ ಶುಭಾಶಂಯ ಕೋರಲಾಯಿತು. ಈವೇಳೆ ನಗರಪಾಲಿಕೆ ಸದಸ್ಯ ಲೋಕೇಶ್ ಪಿಯಾ, ಕೆಪಿಸಿಸಿ ವಕ್ತಾರ ಹಾಗೂ ಮೈಸೂರು ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಎಂ.ಲಕ್ಷ್ಮಣ, ಸಾಮಾಜಿಕ ಕಾರ್ಯಕರ್ತ ಶಂಭು, ಕಾಂಗ್ರೆಸ್ ಮುಖಂಡರಾದ ಕೀಲಾರ ಜಯರಾಮ್, ಉದ್ಯಮಿ ತಿಮ್ಮಯ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಭವಿಷ್ಯದಲ್ಲಿ ಮತ ಚಲಾವಣೆ ವೇಳೆ ಶಾಯಿ ಬದಲು ಮಾರ್ಕರ್ ಪೆನ್ ಬಳಕೆ ಸಾಧ್ಯತೆ



ಮೈಸೂರು, ಮಾ.21– ಚುನಾವಣಾ ಆಯೋಗ ಅನುಮೋದನೆ ನೀಡಿದರೆ ಭವಿಷ್ಯದ ಚುನಾವಣೆಗಳಲ್ಲಿ ಅಳಿಸಲಾಗದ ಶಾಯಿ ಬದಲು ಮಾರ್ಕರ್ ಪೆನ್‌ಗಳಿಂದ ಗುರುತು ಹಾಕುವ ಪದ್ಧತಿ ಜಾರಿಗೆ ಬರುವ ಸಾಧ್ಯತೆ ಇದೆ ಎಂದು ಮೈಸೂರು ಪೇಂಟ್ಸ್ ಮತ್ತು ವಾರ್ನಿಶ್ ಲಿಮಿಟೆಡ್(ಮೈಲ್ಯಾಕ್)ನ ವ್ಯವಸ್ಥಾಪಕ ನಿರ್ದೇಶಕ(ಎಂಡಿ) ಕೆ. ಮೊಹಮ್ಮದ್ ಇರ್ಫಾನ್ ತಿಳಿಸಿದ್ದಾರೆ.

ಈಗಾಗಲೇ ಹಲವು ಹಂತಗಳ ಪರೀಕ್ಷೆ ನಂತರ ಮಾರ್ಕರ್ ಪೆನ್ ಅಂತಿಮ ಮಾದರಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗಿದೆ. ಆಯೋಗ ಅನುಮೋದನೆ ನೀಡಿದರೆ ಭವಿಷ್ಯದ ಚುನಾವಣೆಗಳಲ್ಲಿ ಮಾರ್ಕರ್ ಪೆನ್ನುಗಳ ಬಳಕೆಯನ್ನು ನಿರೀಕ್ಷಿಸಬಹುದು. ಈಗಾಗಲೇ ಮಂಗೋಲಿಯಾ ರಾಷ್ಟ್ರದಿಂದ ಮಾರ್ಕರ್ ಪೆನ್ ಪೂರೈಸುವಂತೆ ಬೇಡಿಕೆ ಬಂದಿದೆ. ಆದರೆ ನಮ್ಮ ರಾಷ್ಟ್ರದಲ್ಲಿ ಪ್ರಾಯೋಗಿಕವಾಗಿ ಬಳಸಿ, ಪರಿಶೀಲಿಸುವ ಮೊದಲು ಬೇರೆ ರಾಷ್ಟ್ರಗಳಿಗೆ ನೀಡಲು ಸಾಧ್ಯವಿಲ್ಲ ಎಂದರು.

ಈ ಕಾರ್ಖಾನೆಯನ್ನು 1937ರಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಆರಂಭಿಸಿದ್ದು, ಈವರೆಗೂ ನಿರಂತರವಾಗಿ ಲಾಭದೊಂದಿಗೆ ಯಶಸ್ವಿಯಾಗಿ ನಡೆಯುತ್ತಿರುವ ಸರ್ಕಾರಿ ಸ್ವಾಮ್ಯದ ಉದ್ಯಮವಾಗಿದೆ. 3ನೇ ಲೋಕಸಭಾ ಚುನಾವಣೆ(1962ರಿಂದ) ನಿರಂತರವಾಗಿ ಅಳಿಸಲಾಗದ ಶಾಯಿ ಪೂರೈಸಲಾಗುತ್ತಿದೆ. ಸುಮಾರು 35 ರಾಷ್ಟ್ರಗಳಿಗೆ ಸರಬರಾಜು ಮಾಡಲಾಗಿದೆ. ಒಂದು ಕಾಲದಲ್ಲಿ ಪಾಕಿಸ್ತಾನ್, ಅಫ್ಘಾನಿಸ್ತಾನ್ ರಾಷ್ಟ್ರಗಳೂ ಮೈಲ್ಯಾಕ್‌ನಿಂದ ಶಾಯಿ ಖರೀದಿಸಿವೆ ಎಂದು ಹೇಳಿದರು.

ಕೇಂದ್ರ ಚುನಾವಣಾ ಆಯೋಗವು ನೀಡಿದ್ದ ನಿರ್ದೇಶನದ ಮೇರೆಗೆ ರಾಜ್ಯದ ಚುನಾವಣಾ ಆಯೋಗಗಳು ಇಂಕ್ ಬಾಟಲ್‌ನ ಆರ್ಡರ್‌ಗಳನ್ನು ನೀಡುತ್ತವೆ. ಈ ಬಾರಿಯ ಲೋಕಸಭಾ ಚುನಾವಣೆಗೆ 10 ಸಿಸಿ ವಯಲ್ಸ್‌ನ 26,55,000 ಶಾಯಿ ಬಾಟಲ್‌ಗಳಿಗೆ ಆರ್ಡರ್ ನೀಡಲಾಗಿದೆ. ಕಳೆದ ಡಿಸೆಂಬರ್‌ನಿಂದ ಉತ್ಪಾದನೆ ಆರಂಭಿಸಿ, ಎಲ್ಲಾ ರಾಜ್ಯಗಳಿಗೂ ಅಳಿಸಲಾಗದ ಶಾಯಿಯನ್ನು ಪೂರೈಕೆ ಮಾಡಲಾಗಿದೆ. ಇದರಿಂದ 55 ಕೋಟಿ ವ್ಯವಹಾರ ನಡೆದಿದೆ. ಕಂಪನಿಯ ಇತಿಹಾಸದಲ್ಲಿಯೇ ಇದು ಅತೀ ದೊಡ್ಡ ವಹಿವಾಟು ಎಂದರು.

ಸಿಲ್ವರ್ ನೈಟ್ರೇಟ್ ಇನ್ನಿತರ ಕಚ್ಚಾ ವಸ್ತುಗಳಿಂದ ಇಂಕ್ ತಯಾರು ಮಾಡಲಾಗುತ್ತದೆ. ಕಳೆದ ವರ್ಷ 10 ಸಿಸಿ ವಯಲ್ಸ್‌ನ ಬಾಟಲ್‌ಗೆ 160 ರೂ ಇತ್ತು. ಚುನಾವಣೆ ಆಯೋಗ ಈ ಬಾರಿ 174 ರೂ. ನಿಗದಿ ಮಾಡಿದೆ. ಒಂದು ಬಾಟಲ್‌ನಿಂದ 700 ಜನರಿಗೆ ಗುರುತು ಹಾಕಬಹುದು. ಈ ಗುರುತನ್ನು ಬೆರಳಿಗೆ ಹಾಕಿದ ತಕ್ಷಣ ತನ್ನ ಬಣ್ಣವನ್ನು ಬದಲಾಯಿಸಿಕೊಂಡು 10 ರಿಂದ 15 ದಿನದವರೆಗೆ ಅಳಿಸಲು ಸಾಧ್ಯವಾಗುವುದಿಲ್ಲ ಎಂದರು.

ಲೋಕಸಭೆಯಲ್ಲಿ 20 ಸ್ಥಾನ ಗೆಲ್ತೀವಿ; ಗಟ್ಟಿಯಾಗಿ ನಿಂತು ಚುನಾವಣೆ ಎದುರಿಸಿ

ಜನ ಕಾಂಗ್ರೆಸ್ ಕೈ ಬಿಡಲ್ಲ; ಸಿಎಂ ಕಿವಿಮಾತು



ಬೆಂಗಳೂರು, ಮಾ.21– ಲೋಕಸಭೆಯಲ್ಲಿ ಕನಿಷ್ಠ 20 ಸ್ಥಾನಗಳನ್ನು ಗೆಲ್ಲುವ ಉತ್ತಮ ಅವಕಾಶವಿದ್ದು, ಜನರ ನಡುವೆ ಗಟ್ಟಿಯಾಗಿ ನಿಂತು ಸಮರ್ಥವಾಗಿ ಚುನಾವಣೆ ಎದುರಿಸಿ ಗೆದ್ದು ಬನ್ನಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಕಾಂಗ್ರೆಸ್ ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆಗೂ ಮುನ್ನ ಕೆಪಿಸಿಸಿ ಕಚೇರಿಯಲ್ಲಿ ನಡೆದ ಲೋಕಸಭಾ ಚುನಾವಣೆ ಸಿದ್ಧತೆ ಸಂಬಂಧ ಹಿರಿಯ ಶಾಸಕರು ಮತ್ತು ಸಂಭಾವ್ಯ ಅಭ್ಯರ್ಥಿಗಳ ಸಭೆಯಲ್ಲಿ ಮಾತನಾಡಿ, ವಿಧಾನಸಭೆ ಚುನಾವಣೆಯಲ್ಲಿ ನಾವು 136 ಸ್ಥಾನ ಗೆಲ್ಲುತ್ತೇವೆ ಎಂದು ಯಾರೂ ಹೇಳಿರಲಿಲ್ಲ. ಆದರೆ ನನಗೆ ವೈಯುಕ್ತಿಕವಾಗಿ ಜನರ ಭಾವನೆ ಗೊತ್ತಿತ್ತು. ಲೋಕಸಭೆಯಲ್ಲೂ ನಮಗೆ 20 ಸ್ಥಾನದವರೆಗೂ ಖಚಿತವಾಗಿ ಗೆಲ್ಲುವ ಅವಕಾಶಗಳಿವೆ ಎಂದು ನುಡಿದರು.

ರಾಜ್ಯದಲ್ಲಿ ಮಾತ್ರವಲ್ಲ, ದೇಶದ ನಾನಾ ಕಡೆಗಳಲ್ಲಿ ಬಿಜೆಪಿ ವಿರುದ್ಧವಾದ ಅಲೆ ಹೆಚ್ಚಾಗಿದೆ. ದೇಶದ ಭವಿಷ್ಯಕ್ಕಾಗಿ ಈ ಸರ್ಕಾರ ಬದಲಾಗಬೇಕೆಂಬ ಅಭಿಪ್ರಾಯ ವಿದ್ಯಾವಂತ ಸಮುದಾಯದಲ್ಲಿದೆ. ಹೀಗಾಗಿ ನಾವು 20 ಸ್ಥಾನ ಗೆಲ್ಲಬಹುದು. ವಾಸ್ತವ ಸ್ಥಿತಿ ಏನೆಂಬುದು ನಮಗೆ ತಿಳಿದಿದೆ. ನಮ್ಮ ಗ್ಯಾರಂಟಿಗಳ ಬಗ್ಗೆ ನಾಡಿನ ಜನತೆಗೆ, ನಮ್ಮ ಹೆಣ್ಣು ಮಕ್ಕಳಿಗೆ, ತಾಯಂದಿರಿಗೆ ಧನ್ಯತೆ ಇದೆ. ಅವರ್‍ಯಾರೂ ನಮ್ಮ ಕೈ ಬಿಡಲ್ಲ. ಪ್ರತೀ ದಿನ, ಪ್ರತೀ ತಿಂಗಳು ಸರ್ಕಾರದ ಗ್ಯಾರಂಟಿಗಳ ಫಲ ತಾಯಂದಿರ ಮಡಿಲು ಸೇರುತ್ತಿದೆ ಇವರಿಗೆ ಕೈ ಮುಗಿದು ಮತ ಕೇಳಿ ಎಂದು ಸಂಭಾವ್ಯ ಅಭ್ಯರ್ಥಿಗಳಿಗೆ ಕಿವಿಮಾತು ಹೇಳಿದರು.

ಕೇಂದ್ರ ಸರ್ಕಾರ ತೆರಿಗೆ ದುಡ್ಡು ಪಡೆದು ರಾಜ್ಯಕ್ಕೆ ಯಾವ ರೀತಿ ವಂಚಿಸಿದೆ ಎಂಬ ನೋವು ನಮ್ಮ ನಾಡಿನ ಜನರಲ್ಲಿದೆ. ಈ ಭೀಕರ ಅನ್ಯಾಯದ ನಡುವೆಯೂ ರಾಜ್ಯ ಆರ್ಥಿಕವಾಗಿ ಪ್ರಗತಿಯಲ್ಲಿರುವ ಬಗ್ಗೆ ನೇರ ಮತ್ತು ಪರೋಕ್ಷ ತೆರಿಗೆದಾರರಿಗೆ ಮನವರಿಕೆ ಮಾಡಿಕೊಡಿ. ಎಲ್ಲರೂ ಒಮ್ಮತದಿಂದ ಕೆಲಸ ಮಾಡಿ, ಕನಿಷ್ಠ 20 ಸ್ಥಾನ ಗೆಲ್ಲೋಣ ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂಭಾವ್ಯ ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಇದೇ ವೇಳೆ ಪ್ರತಿ ಮತದಾರರ ಮನೆ ಮತ್ತು ಮನಸ್ಸು ತಲುಪಲು ಹಾಗೂ ಬಿಜೆಪಿ ಷಡ್ಯಂತ್ರವನ್ನು ಜನರಿಗೆ ಮನವರಿಕೆ ಮಾಡಿಕೊಡಲು ಯೋಜನೆ ರೂಪಿಸುವುದು, ಪ್ರತಿಷ್ಠೆ ಬಿಟ್ಟು ಕಾರ್ಯಕರ್ತರು ಹಾಗೂ ಸ್ಥಳೀಯ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು, ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಿ ಅರ್ಥಪೂರ್ಣವಾಗಿ ಚುನಾವಣೆ ನಡೆಸುವುದು ಸೇರಿದಂತೆ ಹಲವು ಅಭಿಪ್ರಾಯಗಳು ವ್ಯಕ್ತವಾದವು.

ಕಾಂಗ್ರೆಸ್ ಅಭ್ಯರ್ಥಿಗಳಾದ ಬಾಗಲಕೋಟೆ ಸಂಯುಕ್ತ ಪಾಟೀಲ್, ಬೆಂಗಳೂರು ಸೆಂಟ್ರಲ್ ಕ್ಷೇತ್ರದ ಮನ್ಸೂರ್ ಅಲಿ ಖಾನ್, ವಿನೋದ್ ಹಸೂಟಿ ಧಾರವಾಡ, ಚಿತ್ರದುರ್ಗದ ಚಂದ್ರಪ್ಪ, ಉಡುಪಿ ಜಯಪ್ರಕಾಶ್ ಹೆಗ್ಡೆ, ತುಮಕೂರು ಮುದ್ದಹನುಮೇಗೌಡ, ದಕ್ಷಿಣ ಕನ್ನಡ ಪದ್ಮರಾಜ್, ರಾಯಚೂರು ಕುಮಾರನಾಯ್ಕ್, ಬೆಂಗಳೂರು ದಕ್ಷಿಣದ ಸೌಮ್ಯ ರೆಡ್ಡಿ, ಉತ್ತರ ಕನ್ನಡ ಅಂಜಲಿ ನಿಂಬಾಳ್ಕರ್, ಮಂಡ್ಯ ವೆಂಕಟರಮಣೇಗೌಡ, ಮೈಸೂರು ಲಕ್ಷ್ಮಣ್, ಬೆಂಗಳೂರು ಉತ್ತರದ ರಾಜೀವ್‌ಗೌಡ, ಬೀದರ್ ಸಾಗರ್ ಖಂಡ್ರೆ, ಮೃಣಾಳ್ ಹೆಬ್ಬಾಳ್ಕರ್ ಮತ್ತಿತರರು ಭಾಗವಹಿಸಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಶ್ರೀ ಚಂದ್ರಮೌಳೇಶ್ವರ ಸ್ವಾಮಿ ರಥೋತ್ಸವ





ಮೈಸೂರು, ಮಾ.21(ಎಂಟಿವೈ)– ಮೈಸೂರು ತಾಲೂಕಿನ ಸಿದ್ದಲಿಂಗಪುರ ಗ್ರಾಮದಲ್ಲಿರುವ ಪುರಾತನ ಶ್ರೀ ಚಂದ್ರ ಮೌಳೇಶ್ವರ ಸ್ವಾಮಿ ದೇವಾಲಯದಲ್ಲಿ ಗುರುವಾರ ರಥೋತ್ಸವ ಹಾಗೂ ವಿಶೇಷ ಪೂಜಾ ಮಹೋತ್ಸವ ವಿಜೃಂಭಣೆ ಯಿಂದ ನೆರವೇರಿತು.

ಪ್ರತಿ ವರ್ಷ ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಾಲಯದಲ್ಲಿ ಸ್ವಾಮಿಯ ರಥೋತ್ಸವ ಹಾಗೂ ವಿಶೇಷ ಪೂಜಾ ಮಹೋತ್ಸವ ಸಂಪ್ರದಾಯದಂತೆ ನಡೆಸಿ ಕೊಂಡು ಬರಲಾಗಿದ್ದು, ಇಂದು ಸಿದ್ದ ಲಿಂಗಪುರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರ ಸಮ್ಮುಖದಲ್ಲಿ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ವಿಶೇಷ ಪೂಜಾ ಮಹೋತ್ಸವ ಅಂಗ ವಾಗಿ ದೇವಾಲಯದ ಪ್ರಧಾನ ಅರ್ಚಕ ನಂದಕುಮಾರ್ ನೇತೃತ್ವದಲ್ಲಿ ಗಣಪತಿ ಪೂಜೆ, ಪುಣ್ಯಾಹ, ನವಗ್ರಹ ಶಾಂತಿ ಹೋಮ, ರುದ್ರ ಹೋಮ, ಪಾರ್ವತಿ ಹೋಮ, ಪೂರ್ಣಾಹುತಿ, ಬಲಿ ಪ್ರಧಾನ, ಹವನ, ಪೂಜೆ ಮತ್ತು ಮೂಲ ದೇವರಿಗೆ ರುದ್ರಾ ಭಿಷೇಕ, ರುದ್ರ ಪಾರಾಯಣ ಹಾಗೂ ಫಲ ಪಂಚಾಮೃತ ಅಭಿಷೇಕ ನೆರವೇರಿಸಲಾಯಿತು. ಬಳಿಕ ವಿಶೇಷ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು. ನಂತರ ಬೆಳಿಗ್ಗೆ 11.45 ರಿಂದ 12.20ರೊಳಗೆ ಸಲ್ಲುವ ಶುಭ ಮಿಥುನ ಲಗ್ನದಲ್ಲಿ, ಪಾರ್ವತಿದೇವಿ, ಶ್ರೀ ಚಂದ್ರಮೌಳೇಶ್ವರ ಸ್ವಾಮಿಯ ರಥೋತ್ಸವ ಭಕ್ತಾದಿಗಳ ಸಮ್ಮುಖದಲ್ಲಿ ನೆರವೇರಿಸ ಲಾಯಿತು. ರಥೋತ್ಸವದ ಬಳಿಕ ದೇವಾ ಲಯದ ಸಮೀಪ ಮಧ್ಯಾಹ್ನ 12.30 ಗಂಟೆಗೆ ಸಾವಿರಾರು ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಮರಿತಿಬ್ಬೇಗೌಡ ರಾಜೀನಾಮೆ; ಜೆಡಿಎಸ್‌ಗೂ ಗುಡ್ ಬೈ

ಹುಬ್ಬಳ್ಳಿ,ಮಾ.21– ಜೆಡಿಎಸ್ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಅವರು ಗುರುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.



ಹುಬ್ಬಳ್ಳಿಯಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ಅವರ ರಾಜೀನಾಮೆ ಅಂಗೀಕರಿಸಿದ ಹೊರಟ್ಟಿ, ನಾನು ಎಲ್ಲವನ್ನು ಪ್ರಶ್ನೆ ಮಾಡಿದ್ದೇನೆ. ಮರಿತಿಬ್ಬೇಗೌಡರು ಸ್ವ ಇಚ್ಛೆಯಿಂದ ರಾಜೀನಾಮೆ ಕೊಡುತ್ತಿರುವುದಾಗಿ ತಿಳಿಸಿದ್ದಾರೆ. ಹೀಗಾಗಿ ರಾಜೀನಾಮೆ ಅಂಗೀಕಾರ ಮಾಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಮಾತನಾಡಿದ ಮರಿತಿಬ್ಬೇಗೌಡ, ನಾನು ಸ್ವ ಇಚ್ಛೆಯಿಂದ ರಾಜೀನಾಮೆ ನೀಡಿದ್ದೇನೆ. ಸಭಾಪತಿಗಳು ರಾಜೀನಾಮೆ ಅಂಗೀಕರಿಸಿದ್ದಾರೆ. ಸಭಾಪತಿಗೆ ಧನ್ಯವಾದಗಳು ಎಂದರು. ಅಲ್ಲದೆ, ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ರಾಜ್ಯಾಧ್ಯಕ್ಷ ಎಚ್‌ಡಿ ಕುಮಾರಸ್ವಾಮಿ ವಿರುದ್ಧವೂ ತೀವ್ರ ಅಸಮಾಧಾನ ಹೊರಹಾಕಿದ್ದು, ಜೆಡಿಎಸ್‌ಗೂ ಗುಡ್ ಬೈ ಹೇಳಿದ್ದಾರೆ.

ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ

ಸಿ ವಿಜಿಲ್ ಮೂಲಕ ರಾಜ್ಯಾದ್ಯಂತ ಇದುವರೆಗೆ 1120 ದೂರು ಸಲ್ಲಿಕೆ

ಮೈಸೂರು, ಮಾ.21(ಎಸ್‌ಬಿಡಿ)– ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಬಗ್ಗೆ ಸಾರ್ವಜನಿಕರೂ ಹದ್ದಿನಕಣ್ಣಿಟ್ಟಿದ್ದು, ಸಿವಿಜಿಲ್ (c VIGIL) ಆ್ಯಪ್ ಮೂಲಕ ರಾಜ್ಯದಲ್ಲಿ ಈವರೆಗೆ 1,120 ದೂರು ಸಲ್ಲಿಸಿದ್ದಾರೆ.

ನೀತಿ ಸಂಹಿತೆ ಉಲ್ಲಂಘನೆ ಹಾಗೂ ಚುನಾವಣಾ ಅಕ್ರಮಗಳ ತಡೆಗೆ ಚುನಾ ವಣಾ ಆಯೋಗ ವಿವಿಧ ಹಂತಗಳಲ್ಲಿ ಕಾರ್ಯಪ್ರವೃತ್ತವಾಗಿದೆ. ಇದರಲ್ಲಿ ಸಾರ್ವ ಜನಿಕರ ಸಹಭಾಗಿತ್ವ ಪಡೆಯುವ ಉದ್ದೇಶ ದಿಂದ 'ಸಿ ವಿಜಿಲ್' ಆ್ಯಪ್ ಮೂಲಕ ಸರಳ ಕ್ರಮದಲ್ಲಿ ದೂರು ನೀಡಲು ಅವಕಾಶ ಮಾಡಿಕೊಟ್ಟಿದೆ ಇದು ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆಗೆ ಪೂರಕವಾದ ಪರಿ ಣಾಮಕಾರಿ ಕ್ರಮ ಎಂದು ಪರಿಗಣಿಸಲಾಗಿದೆ.

ನಿರೀಕ್ಷೆಯಂತೆ ಸಾರ್ವಜನಿಕರು ಚುನಾ ವಣಾ ಅಕ್ರಮ ತಡೆಗೆ ತಾವಿರುವ ಸ್ಥಳ ದಿಂದಲೂ ಸಹಕರಿಸುತ್ತಿದ್ದಾರೆ. ಜನ ಜಾಗೃತ ರಾಗಿರುವುದರಿಂದ ಯಾವುದೋ ಹಳ್ಳಿಯ ಗಲ್ಲಿಯಲ್ಲಿ ನೀತಿ ಸಂಹಿತೆ ಉಲ್ಲಂಘನೆ



ಯಾದರೂ ಚುನಾವಣಾ ಆಯೋಗದ ಗಮನಕ್ಕೆ ಬರುತ್ತಿದೆ. ಹಾಗಾಗಿ ಪ್ರಚಾರ ಸಂದರ್ಭದಲ್ಲೂ ಅಭ್ಯರ್ಥಿಗಳು ಹಾಗೂ ಅವರ ಬೆಂಬಲಿಗರು ತುಂಬಾ ಎಚ್ಚರಿಕೆ ವಹಿಸುವುದು ಅನಿವಾರ್ಯವಾಗಿದೆ.

ದೂರುಗಳೇನು?: ಚುನಾವಣಾ ನೀತಿ ಸಂಹಿತೆ ಮಾ.16ರಂದು ಜಾರಿಯಾಗಿದ್ದು, ಈಗಾಗಲೇ ಅಭ್ಯರ್ಥಿಗಳು ಪ್ರಚಾರ ಆರಂಭಿಸಿದ್ದಾರೆ. ಆದರೆ ಅಭ್ಯರ್ಥಿಗಳ ಪ್ರತಿ ಹೆಜ್ಜೆಯನ್ನೂ ಚುನಾವಣಾ ಆಯೋಗ ಗಮನಿಸುತ್ತಿದೆ. ಇತ್ತ ಸಾರ್ವಜನಿಕರೂ ಕೂಡ 'ಕಣ್ಣು–ಕಿವಿ'ಯಾಗಿ ಚುನಾವಣಾ ಆಯೋಗಕ್ಕೆ ಸಾಥ್ ನೀಡುತ್ತಿದ್ದಾರೆ. ಅನುಮತಿ ಇಲ್ಲದೆ ಪೋಸ್ಟರ್ ಹಾಗೂ ಬ್ಯಾನರ್ ಅಳವಡಿಸಿರುವ ಬಗ್ಗೆ ಬರೋಬ್ಬರಿ 663 ದೂರುಗಳು ಸಿವಿಜಿಲ್ ಆ್ಯಪ್ ಮೂಲಕ ಸಲ್ಲಿಕೆಯಾಗಿವೆ. ಮತದಾರರಿಗೆ ಹಣ ವಿತರಣೆ 6, ಅಧಿಕೃತ ಘೋಷಣೆ ಇಲ್ಲದ ಪೋಸ್ಟರ್ ಅಳವಡಿಕೆ 89, ಬಂದೂಕು ತೋರಿಸಿ ಬೆದರಿಕೆ 1, ಉಡುಗೊರೆ ಹಾಗೂ ಕೂಪನ್ ವಿತರಣೆ 7, ನಿರ್ಬಂಧಿತ ಅವಧಿಯಲ್ಲಿ ಪ್ರಚಾರ 6, ಮದ್ಯ ಹಂಚಿಕೆ 3, ಆಸ್ತಿ ವಿರೂಪ ಗೊಳಿಸುವಿಕೆ 15, ಅನುಮತಿಯಿಲ್ಲದೆ ವಾಹನ ಬೆಂಗಾವಲು 4, ಧಾರ್ಮಿಕ ಹಾಗೂ ಸಾಮುದಾಯಿಕ ಭಾಷಣ ಹಾಗೂ ಸಂದೇಶಗಳು 2, ಇತರೆ 913 ಸೇರಿದಂತೆ ನಿನ್ನೆವರೆಗೆ ಸಲ್ಲಿಕೆಯಾಗಿರುವ ಒಟ್ಟು 1,120 ದೂರುಗಳನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಂಡಿರುವುದಾಗಿ ರಾಜ್ಯ ಮುಖ್ಯ ಚುನಾ ವಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಸಿವಿಜಿಲ್ ಅಸ್ತ್ರ ಬಳಸಿ: ಚುನಾವಣೆ ಗಳಲ್ಲಿ ಹಣ ಮತ್ತು ಮದ್ಯ ಹಂಚಿಕೆ ವಿಪ ರೀತವಾಗಿರುವುದು ಆತಂಕ ಹೆಚ್ಚಿಸಿದೆ. ಇದನ್ನು ಖಂಡಿಸುವ, ಈ ಬಗ್ಗೆ ದೂರು ನೀಡುವ ಮನಃಸ್ಥಿತಿ ಇದ್ದವರೂ ಅಸಹಾಯಕರಾಗಿರುತ್ತಾರೆ. ಇಂತಹವರು ಸಿ ವಿಜಿಲ್ ಅಸ್ತ್ರ ಬಳಸಿಕೊಳ್ಳಬಹುದು. ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿ ಗಳ ಭಾಷಣ, ಚುನಾವಣಾ ಪ್ರಚಾರ, ರ್ಯಾಲಿ, ಮೆರವಣಿಗೆ, ಚುನಾವಣಾ ಪ್ರಣಾ ಳಿಕೆಗಳಿಗೆ ಸಂಬಂಧಿಸಿದಂತೆ ನಿಯಮ ಮೀರಿದರೆ ಅಥವಾ ಮತ ಹಾಕುವಂತೆ ಜನರನ್ನು ಓಲೈಸಲು ಯಾವುದೇ ವ್ಯಕ್ತಿ ಉಡುಗೊರೆ, ಹಣ ನೀಡುತ್ತಿರುವುದು ಕಂಡು ಬಂದರೆ ಮಾಹಿತಿ ನೀಡಬಹುದು.

ಒಮ್ಮೆ ನಾಗರಿಕರು ಅಪ್ಲಿಕೇಶನ್ ಡೌನ್ ಲೋಡ್ ಮಾಡಿ, ಅವರ ಮೊಬೈಲ್ ಸಂಖ್ಯೆ ಮತ್ತು ಕ್ಷೇತ್ರವನ್ನು ನಮೂದಿಸಿದರೆ, ಅವರಿಗೆ ದೂರು ಸಲ್ಲಿಸಲು ಅನುವು ಮಾಡಿ ಕೊಡುತ್ತದೆ. ಸಲ್ಲಿಸುವ ದೂರುಗಳು ಜಿಲ್ಲಾ ನಿಯಂತ್ರಣ ಕೇಂದ್ರಕ್ಕೆ ತಲುಪುತ್ತವೆ. ಪರಿಶೀಲಿಸಿ ಕೆಲವೇ ನಿಮಿಷಗಳಲ್ಲಿ ಫ್ಲೈಯಿಂಗ್ ಸ್ಕ್ವಾಡ್‌ಗೆ ರವಾನಿಸಲಾಗುತ್ತದೆ. ಕೂಡಲೇ ಅಧಿಕಾರಿಗಳ ತಂಡ ಸ್ಥಳಕ್ಕೆ ದೌಡಾಯಿಸಿ ಪರಿಶೀಲಿಸಿದ ಬಳಿಕ ಚುನಾವಣಾಧಿಕಾರಿಗೆ ವರದಿ ನೀಡುತ್ತಾರೆ. ದೂರು ನಿಜವಾಗಿದ್ದರೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಎಲ್ಲೆಡೆ ಹದ್ದಿನಕಣ್ಣು

ಇ–ಮೇಲ್ ಮೂಲಕ 5 ಹಾಗೂ ಪತ್ರ ಮುಖೇನ 8 ದೂರುಗಳು ಚುನಾ ವಣಾ ಆಯೋಗಕ್ಕೆ ಸಲ್ಲಿಕೆಯಾಗಿವೆ. ಅಲ್ಲದೆ ಪತ್ರಿಕೆಗಳ ಮೂಲಕ 2, ವಾಹಿನಿಗಳ ಮೂಲಕ 3 ಹಾಗೂ ಸಾಮಾಜಿಕ ಮಾಧ್ಯಮಗಳಿಂದ 11 ದೂರುಗಳು ದಾಖಲಾಗಿವೆ. ಫ್ಲೈಯಿಂಗ್ ಸ್ಕ್ವಾಡ್‌ಗಳು ಹಾಗೂ ಸಿವಿಜಿಲ್ ಆ್ಯಪ್ ಮಾತ್ರವಲ್ಲದೆ ಎಲ್ಲಾ ಮೂಲ ಗಳಿಂದಲೂ ದೂರು ದಾಖಲಿಸಿ ಕೊಂಡು ಕ್ರಮಕ್ಕೆ ಆಯೋಗ ಮುಂದಾಗಿದೆ.



ಮೈಸೂರಿನ ಹಿರಿಯ ವಕೀಲರು ಹಾಗೂ 'ಲಾ ಗೈಡ್' ಕನ್ನಡ ಕಾನೂನು ಮಾಸಪತ್ರಿಕೆಯ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರ ಹುಟ್ಟುಹಬ್ಬವನ್ನು ಅವರ ಸ್ನೇಹಿತರು, ಹಿತೈಷಿಗಳು ಏರ್‌ಲೈನ್ಸ್ ಹೋಟೆಲ್‌ನಲ್ಲಿ ಅದ್ಧೂರಿಯಾಗಿ ಆಚರಿಸಿದರು. ಈ ವೇಳೆ ಹಿರಿಯ ಶಾಸಕ ಜಿ.ಟಿ.ದೇವೇಗೌಡರು, ಸಿಹಿ ತಿನ್ನಿಸಿ ವೆಂಕಟೇಶ್ ಅವರಿಗೆ ಶುಭ ಕೋರಿದರು. ಹಿರಿಯ ವಕೀಲ ಎಂ.ಡಿ.ಹರೀಶ್ ಕುಮಾರ್ ಹೆಗ್ಡೆ, ಯುವ ಉದ್ಯಮಿ ಅಭಿಷೇಕ್ ಹೆಗ್ಡೆ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್, ಮಾಜಿ ಅಧ್ಯಕ್ಷ ಜಿ.ವಿ.ರಾಮಮೂರ್ತಿ, ಎಸ್.ಲೋಕೇಶ್, ಲಾ ಗೈಡ್ ಬಳಗದ ಸದಸ್ಯರು ಹಾಗೂ ವಕೀಲರು ಉಪಸ್ಥಿತರಿದ್ದರು.

ಪ್ರೋತ್ಸಾಹ ನೀಡಿದವರಿಗೆ ಕಾಂಗ್ರೆಸ್ ಮುಖಂಡ ಡಾ.ಶುಶ್ರುತ್‌ಗೌಡ ಧನ್ಯವಾದ

ಮೈಸೂರು,ಮಾ.21(ಪಿಎಂ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಥಾನಕ್ಕೆ ನನ್ನ ಹೆಸರು ಕೇಳಿ ಬಂದ ದಿನದಿಂದ ನನ್ನ ಜೊತೆ ನಿಂತು ಪ್ರೋತ್ಸಾಹ ನೀಡಿದ ಎಲ್ಲರಿಗೂ ಕಾಂಗ್ರೆಸ್ ಮುಖಂಡ ಡಾ.ಶುಶ್ರುತ್‌ಗೌಡ ಧನ್ಯವಾದ ತಿಳಿಸಿದ್ದಾರೆ.

ಕೆಲ ಕಾರಣಗಳಿಂದ ನನಗೆ ಟಿಕೆಟ್ ಸಿಗದಿದ್ದರೂ ಎಂದಿನಂತೆ ಸಮಾಜಸೇವೆಯಲ್ಲಿ ಮುಂದುವರೆಯಲಿದ್ದೇನೆ. ನನ್ನ ಜೊತೆ ನಿಂತು ತೋರಿದ ಪ್ರೀತಿ, ಸಹಕಾರ ನಿಜಕ್ಕೂ ಹೃದಯಸ್ಪರ್ಶಿಯಾಗಿದೆ. ಸಹಕಾರ ನೀಡಿ ಉತ್ತೇಜಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಸಮಾಜಕ್ಕೆ ಸ್ಪಂದಿಸಲು ಸದಾ ಸಿದ್ಧನಿದ್ದೇನೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಎಂ.ಲಕ್ಷ್ಮಣ್‌ಗೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಅಭಿನಂದನೆ

ಮೈಸೂರು,ಮಾ.21(ಪಿಎಂ)– ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಸಮಿತಿಯು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಎಂ.ಲಕ್ಷ್ಮಣ್ ಅವರನ್ನು ಅಂತಿಮಗೊಳಿಸಿದೆ. ಅದಕ್ಕಾಗಿ ವೈಯಕ್ತಿಕವಾಗಿ ಲಕ್ಷ್ಮಣ್ ಅವರನ್ನು ಅಭಿನಂದಿಸುವುದಾಗಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ತಿಳಿಸಿದ್ದಾರೆ.



ಕೆಪಿಸಿಸಿ ಚುನಾವಣಾ ಸಮಿತಿಯು ಎಂ.ಲಕ್ಷ್ಮಣ್ ಅವರೊಂದಿಗೆ ನನ್ನ ಹೆಸರನ್ನು ಎಐಸಿಸಿ ರಾಷ್ಟ್ರೀಯ ಚುನಾವಣಾ ಸಮಿತಿಗೆ ಶಿಫಾರಸ್ಸು ಮಾಡಿತ್ತು. ಸುಮಾರು ಮೂರು ದಿನಗಳ ದೀರ್ಘಾವಧಿ ಚರ್ಚೆಯ ನಂತರ ಎಂ.ಲಕ್ಷ್ಮಣ್ ಅವರ ಹೆಸರನ್ನು ಅಂತಿಮಗೊಳಿಸಿದೆ. ಹೈಕಮಾಂಡ್ ತೀರ್ಮಾನಕ್ಕೆ ತಲೆಬಾಗಿ ಲಕ್ಷ್ಮಣ್ ಅವರ ಗೆಲುವಿಗಾಗಿ ಸಾಮೂಹಿಕ ಹೋರಾಟ ನಮ್ಮ ಮುಂದಿನ ಗುರಿ. ನನಗೆ ಅಧಿಕಾರಕ್ಕಿಂತ ಪಕ್ಷವೇ ಮುಖ್ಯ. ಪಕ್ಷ ತಾಯಿ ಇದ್ದಂತೆ. ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ವಿಮೋಚನೆಗಾಗಿ ಸ್ವಾತಂತ್ರ್ಯ ಚಳುವಳಿ ನಡೆಯಿತು. ಇಂದು ಸ್ವಾತಂತ್ರ್ಯ ಭಾರತದಲ್ಲಿ ಸಂವಿಧಾನದ ಆಶಯಗಳ ಅಡಿಯಲ್ಲಿ ಸುಭದ್ರ, ಸಾಮರಸ್ಯ ಮತ್ತು ಶಾಂತಿಯುತ ಭಾರತ ನಿರ್ಮಿಸಬೇಕಿದ್ದು, ಇದಕ್ಕಾಗಿ ಬಿಜೆಪಿ ವಿರುದ್ಧ ದೇಶದ ಪ್ರತಿಯೊಬ್ಬ ಪ್ರಜೆಯೂ ಚುನಾವಣಾ ಸಂಗ್ರಾಮ ಆರಂಭಿಸುವ ನೈತಿಕ ಜವಾಬ್ದಾರಿ ನಿಭಾಯಿಸಬೇಕಿದೆ. ಆದ್ದರಿಂದ ನಾನು ಕಾಂಗ್ರೆಸ್ ಪಕ್ಷದ ಶಾಶ್ವತ ಕಾವಲುಗಾರ. ನನ್ನನ್ನೂ ಲೋಕಸಭೆಗೆ ಸ್ಪರ್ಧಿಸಲು ಸಮರ್ಥನೆಂದು ಬೆನ್ನು ತಟ್ಟಿದ್ದ ಎಲ್ಲರಿಗೂ ಧನ್ಯವಾದಗಳು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಮಾಣಿಕ ಪ್ರಯತ್ನ, ಸತತ ಪರಿಶ್ರಮದಿಂದ ಎಂದಾದರೂ ಫಲ

● ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ● ಪಿಡಿಓ, ಎಫ್‌ಡಿಎ, ಎಸಿ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ



ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಗುರುವಾರ ಪಿಡಿಓ, ಎಫ್‌ಡಿಎ, ಎಸಿ ಪರೀಕ್ಷೆಗಳ ಅಧ್ಯಯನ ಪುಸ್ತಕವನ್ನು ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ಬಿಡುಗಡೆ ಮಾಡಿದರು.

ಮೈಸೂರು,ಮಾ.21(ಪಿಎಂ)– ಪ್ರಾಮಾಣಿಕ ಪ್ರಯತ್ನ ಮತ್ತು ಸತತ ಪರಿಶ್ರಮವು ಎಂದಾದರೂ ಒಂದು ದಿನ ಫಲ ತಂದು ಕೊಡಲಿದೆ ಎಂದು ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ಹೇಳಿದರು.

ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ಆವರಣದಲ್ಲಿ ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಸಂಸ್ಥೆಯ 63 ದಿನಗಳ ಪಿಡಿಓ, ಎಫ್‌ಡಿಎ, ಎಸಿ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಸದರಿ ಪರೀಕ್ಷೆಗಳ ಅಧ್ಯಯನ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಏಕಾಗ್ರತೆಯಿಂದ ಓದಿ ಮನನ ಮಾಡಿ ಕೊಳ್ಳುವುದರಿಂದ ವಿಷಯ ತಲೆಗೆ ಹತ್ತಲಿದೆ. ಯಾವುದೇ ಪಠ್ಯಗಳನ್ನು ದಕ್ಕಿಸಿಕೊಳ್ಳ ಬೇಕೆಂದರೆ ನಿರಂತರ ಅಧ್ಯಯನ ಅಗತ್ಯ. ಜ್ಞಾನಬುತ್ತಿ ಸಂಸ್ಥೆಯೊಂದಿಗೆ ಕಳೆದ 40 ವರ್ಷಗಳಿಂದ ಒಡನಾಟ ಹೊಂದಿದ್ದೇನೆ. ಅಂದಿನಿಂದಲೂ ಈ ಸಂಸ್ಥೆ ಸೇವಾ ಚಟುವಟಿಕೆಯಾಗಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುತ್ತಿದೆ. ಇಂತಹ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಯಶಸ್ಸು ಸಾಧಿಸಬೇಕು ಎಂದು ಕಿವಿಮಾತು ಹೇಳಿದರು.

ಯಾವುದೇ ಆಗಲಿ ಉಚಿತ ಎಂದಾಕ್ಷಣ ಅದನ್ನು ಅಗ್ಗ ಎಂದು ಭಾವಿಸಬಾರದು. ಅದರ ಹಿಂದೆ ಕಳಕಳಿ ಮತ್ತು ಬದ್ಧತೆ ಇರುತ್ತದೆ ಎಂಬುದನ್ನು ಅರ್ಥ ಮಾಡಿ ಕೊಳ್ಳಬೇಕು. ನಮಗೆ ಯಾವುದೇ ಆಧಾರ ವಿಲ್ಲವೆಂದು ಕೈಕಟ್ಟಿ ಕುಳಿತುಕೊಳ್ಳಬಾರದು. ಛಲವಿದ್ದರೆ ಗುರಿ ಸಾಧಿಸಲು ಖಂಡಿತ ಸಾಧ್ಯವಿದೆ ಎಂದರು.

ಇದಕ್ಕೂ ಮುನ್ನ ಶಿಬಿರಾರ್ಥಿಗಳಿಗೆ ಶುಭ ಹಾರೈಕೆ ಮತ್ತು ಇತ್ತೀಚೆಗೆ ನಿಧನರಾದ ಮಾಜಿ ಶಾಸಕ ವಾಸು ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಕೆಶಿವರಾಂ ಅವರ ಸ್ಮರಿಸಿದ ಆಹಾರ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಡಾ.ಕಾ. ರಾಮೇಶ್ವರಪ್ಪ, 4 ದಶಕಗಳ ಹಿಂದೆ ಶಿಕ್ಷಕರಿಗೆ ತರಬೇತಿ ಕೊಡುವ ಮೂಲಕ ಜ್ಞಾನಬುತ್ತಿ ಮೈಸೂರಿನಲ್ಲಿ ಕಾರ್ಯಾರಂಭ ಮಾಡಿತು. ನಂತರ ಕಾರ್ಯವ್ಯಾಪ್ತಿ ಬದಲಿಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುತ್ತಾ ಮುನ್ನಡೆಯುತ್ತಿದೆ ಎಂದು ತಿಳಿಸಿದರು.

ಕೆಶಿವರಾಂ ಮತ್ತು ವಾಸು ಇಬ್ಬರೂ ಜ್ಞಾನಬುತ್ತಿಗೆ ಬೆಂಬಲವಾಗಿದ್ದವರು. ಶಿವರಾಂ ತಳ ಸಮುದಾಯದ ಅಸ್ಮಿತೆ. ಅಂತೆಯೇ ವಾಸು ಅಮರ ಹೃದಯವಂತರು. ಸದ್ಗುಣ ಹೊಂದಿದ್ದ ಮೇರು ವ್ಯಕ್ತಿತ್ವದವರು. ಈ ಇಬ್ಬರು ನಮ್ಮನ್ನು ಅಗಲಿರುವುದು ಸಮಾಜಕ್ಕೆ ತುಂಬಲಾರದ ನಷ್ಟ ಎಂದು ಸ್ಮರಿಸಿದರು. ಅಖಿಲ ಭಾರತ ವಯಸ್ಕರ ಶಿಕ್ಷಣ ಸಮಿತಿ ನಿರ್ದೇಶಕ ವೈ.ಎನ್.ಶಂಕರೇಗೌಡ ಅಧ್ಯಕ್ಷತೆ ವಹಿಸಿದ್ದರು. ಜಾನಪದ ಕಲಾವಿದ ಅಮ್ಮ ರಾಮಚಂದ್ರ, ಸಂಸ್ಥೆಯ ಜೈನಹಳ್ಳಿ ಸತ್ಯನಾರಾಯಣಗೌಡ, ಹೆಚ್.ಬಾಲಕೃಷ್ಣ ಮತ್ತಿತರರು ಹಾಜರಿದ್ದರು.

ಸೊಳ್ಳೆ ನಿಯಂತ್ರಣ ವಿಧಾನಗಳ ಮಾದರಿ ಪ್ರದರ್ಶನ







ಮೈಸೂರು,ಮಾ.21– ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿಯ ವತಿ ಯಿಂದ ಇತ್ತೀಚೆಗೆ ಜಿಲ್ಲಾ ಮಟ್ಟದ 'ಸೊಳ್ಳೆ ನಿಯಂತ್ರಣ ವಿಧಾನಗಳ ಮಾದರಿ ಪ್ರದರ್ಶನ' ಕಾರ್ಯಕ್ರಮವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಆವರಣದ ವೈದ್ಯರ ಭವನದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಸಿ. ಸುವರ್ಣ ವಹಿಸಿದ್ದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ ಪಿ.ಸಿ ಮುಖ್ಯ ಅತಿಥಿಯಾಗಿದ್ದರು. ತೀರ್ಪುಗಾರರಾಗಿ ಸಾರ್ವ ಜನಿಕ ಶಿಕ್ಷಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಜ್ಯ ವಿಜ್ಞಾನ ಪರಿಷತ್ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ತಾಲೂಕು ಮಟ್ಟದಲ್ಲಿ ಸ್ಪರ್ಧಿಸಿ ಭಾಗ ವಹಿಸಿದ್ದ ಎಲ್ಲಾ ಮಕ್ಕಳಿಗೆ ಪ್ರಮಾಣ ಪತ್ರ ವಿತರಿಸ ಲಾಯಿತು. ಪ್ರಥಮ, ದ್ವಿತೀಯ, ತೃತೀಯ ಬಹುಮಾನ ಗಳಿಸಿದ್ದ 5ರಿಂದ 7ನೇ ತರಗತಿಯ 3 ಮಕ್ಕಳು ಮತ್ತು 8ರಿಂದ 10ನೇ ತರಗತಿಯ 3 ಮಕ್ಕಳು ಭಾಗವಹಿಸಿದ್ದರು.

ಪ್ರಾಥಮಿಕ ಶಾಲಾ ಮಕ್ಕಳು: ಪ್ರಥಮ ಬಹುಮಾನ ನಂಜನಗೂಡು ಅಶೋಕಪುರಂನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನಂದಿನಿ, ದ್ವಿತೀಯ ಬಹುಮಾನ ಅರಸನ ಕೆರೆಯ ಸರ್ಕಾರಿ ಹಿರಿಯ ಪ್ರಾಥ ಮಿಕ ಶಾಲೆಯ ಸಂಗೀತ, ತೃತೀಯ ಬಹುಮಾನ ಹೂಟಗಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರೀತಮ್‌ಕುಮಾರ್ ಮತ್ತು ಬಾಲಾಜಿ.

ಪ್ರೌಢಶಾಲಾ ಮಕ್ಕಳು: ಪ್ರಥಮ ಬಹುಮಾನ ಹುಣಸೂರಿನ ಮನು ಗನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಿಂಚನ, ದ್ವಿತೀಯ ಬಹುಮಾನ ಹೆಚ್.ಡಿ. ಕೋಟೆಯ ಮಾದಾಪುರದ ಸ.ಪ್ರೌ.ಶಾಲೆಯ ಸುಶ್ಮಿತ, ತೃತೀಯ ಬಹುಮಾನ ಕೆ.ಆರ್.ನಗರದ ಆದರ್ಶ ವಿದ್ಯಾಲಯದ ಭಾವನ ಬಹುಮಾನ ಪಡೆದಿರುತ್ತಾರೆ.

ಶಾದ್‌ನಗರದ ಅಪಘಾತದಲ್ಲಿ ಗಾಯಗೊಂಡಿದ್ದ ನಾಲ್ವರ ಚೇತರಿಕೆ

ಮೈಸೂರು,ಮಾ.21(ಆರ್‌ಕೆ)–ತೆಲಂಗಾಣದ ಶಾದ್ ನಗರದಲ್ಲಿ ಮಾರ್ಚ್18ರಂದು ರಾತ್ರಿ ಸಂಭವಿಸಿದ್ದ ರಸ್ತೆ ಅಪಘಾತದಲ್ಲಿ ಗಾಯಗೊಂಡಿರುವ ಮೈಸೂರಿನ ನಾಲ್ವರು ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೈಸೂರಿನಿಂದ ಮಾರುತಿ ಇಕೊ (ಕೆಎ55,ಎಂ.4205) ಕಾರಿನಲ್ಲಿ ಕಾಶಿಗೆ ಹೋಗುತ್ತಿದ್ದಾಗ ತೆಲಂಗಾಣದ ಶಾದ್‌ನಗರದ ಬೈಪಾಸ್ ರಸ್ತೆಯಲ್ಲಿ ಚಾಲಕ ರಘುರಾಂ ಅವರ ನಿಯಂತ್ರಣ ತಪ್ಪಿದ ಕಾರು, ರಸ್ತೆ ಬದಿಯ ಮರಕ್ಕೆ ಅಪ್ಪಳಿಸಿದ ಪರಿಣಾಮ ವಾಹನದಲ್ಲಿದ್ದ ಬಿಎಲ್.ನರಸಿಂಹ ಅಯ್ಯರ್ ಮತ್ತು ಎಸ್.ಕೆರತ್ನಾಕರ್ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದರು. ಘಟನೆಯಲ್ಲಿ ಕಾರು ಚಾಲನೆ ಮಾಡುತ್ತಿದ್ದ ರಘುರಾಮ್, ವಿಶ್ವನಾಥ್, ಶ್ರೀರಾಂ ಹಾಗೂ ಮದನಕುಮಾರ್ ಅವರು ತೀವ್ರವಾಗಿ ಗಾಯಗೊಂಡಿದ್ದರು.

ಹೆಜ್ಜೇನು ದಾಳಿ: ವೃದ್ಧ ಸಾವು

ಮೈಸೂರು, ಮಾ.21(ಎಂಕೆ)– ಹೆಜ್ಜೇನು ದಾಳಿಯಿಂದ ಗಾಬರಿಗೊಂಡ ವೃದ್ಧರೊಬ್ಬರು ಕುಸಿದು ಮೃತಪಟ್ಟಿರುವ ಘಟನೆ ವಿದ್ಯಾರಣ್ಯಪುರಂನಲ್ಲಿ ಗುರುವಾರ ನಡೆದಿದೆ. ಇಲ್ಲಿನ ನಿವಾಸಿ ಸದಾಶಿವಪ್ಪ(70) ಮೃತಪಟ್ಟವರು. ವಿದ್ಯಾರಣ್ಯಪುರಂನ ಚಾಮುಂಡಿವನದಲ್ಲಿ ಸೆಕ್ಯೂರಿಟಿ ಕೆಲಸ ಮಾಡಿಕೊಂಡಿದ್ದ ಅವರ ಮೇಲೆ ಗುರುವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಹೆಜ್ಜೇನು ದಾಳಿ ಮಾಡಿವೆ. ಇದರ ಆಘಾತದಿಂದ ಮೃತಪಟ್ಟಿದ್ದಾರೆ ಎನ್ನಲಾಗಿದೆ. ವಿಷಯ ತಿಳಿದು ಮಾಹಿತಿ ಪಡೆಯಲು ಮುಂದಾದ ವಿದ್ಯಾರಣ್ಯಪುರಂ ಠಾಣೆ ಪೊಲೀಸರಿಗೆ, ಸದಾಶಿವಪ್ಪ ಅವರ ಕುಟುಂಬಸ್ಥರು ಹೆಜ್ಜೇನು ದಾಳಿಯಿಂದ ಆಘಾತಗೊಂಡು ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ ಎಂದು ತಿಳಿದುಬಂದಿದೆ.

ಸಾವಿತ್ರಿ ನಿಧನ

ಮೈಸೂರು: ಮೈಸೂರಿನ ಜಯಲಕ್ಷ್ಮಿಪುರಂ ನಿವಾಸಿ ಹಾಗೂ ಶ್ರೀ ಜಯ ಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ನಿವೃತ್ತಗ್ರೂಥ ಪಾಲಕರಾದ ಶ್ರೀಮತಿ ಜಿ.ಸಾವಿತ್ರಿ (73 ವರ್ಷ) ಮಾ.20ರಂದು ನಿಧನರಾದರು. ಇವರು ಜಯಲಕ್ಷ್ಮಿಪುರಂ ನಿವಾಸಿಯಾಗಿದ್ದು, ದಿವಂಗತರು ತಾಯಿ, ಅಕ್ಕ, ಅಕ್ಕನ ಮಗ, ಸೇರಿದಂತೆ ಅಪಾರ ಮಿತ್ರರನ್ನು ಅಗಲಿದ್ದಾರೆ.



ಮಾನಸಗಂಗೋತ್ರಿ ಆವರಣದಲ್ಲಿಂದ ಕಾಫಿ ಮಂಡಳಿ ಚಟ್ಟಳ್ಳಿಗೆ ಸ್ಥಳಾಂತರಿಸಲು ಸಿದ್ಧತೆ





ಮೈಸೂರು, ಮಾ.21(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕಾಫಿ ನಾಡಿನ ಕೊಂಡಿಯಾಗಿರುವ ಭಾರತ ಸರ್ಕಾರದ 'ಕಾಫಿ ಮಂಡಳಿ'ಯ ಸ್ಥಳಾಂತರದ ಸಿದ್ಧತೆ ಸದ್ದಿಲ್ಲದೆ ನಡೆಯುತ್ತಿದೆ.

ಮೈಸೂರು ವಿಶ್ವವಿದ್ಯಾನಿಲಯದ ಮುಖ್ಯದ್ವಾರ(ಮೈಸೂರು–ಬೋಗಾದಿ ರಸ್ತೆ)ದ ಎದುರಿಗೆ, ವಿಶ್ವವಿದ್ಯಾನಿಲಯದ ಕಟ್ಟಡದಲ್ಲೇ ಕಳೆದ 50 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಕಾಫಿ ಮಂಡಳಿ ಕಚೇರಿಯನ್ನು, ಸೋಮವಾರಪೇಟೆ ಚಟ್ಟಳ್ಳಿಗೆ ಸ್ಥಳಾಂತರಿಸಲು ಎಲ್ಲಾ ಬಗೆಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

1972ರ ಫೆ.4 ರಂದು ಅಂದಿನ ವಿವಿ ಕುಲಪತಿಗಳಾಗಿದ್ದ ಪ್ರೊ.ಡಿ.ಜವರೇಗೌಡ(ದೇಜಗೌ) ಅವರ ಸಮ್ಮುಖದಲ್ಲಿ ಅಂದಿನ ಭಾರತ ಸರ್ಕಾರದ ವಿದೇಶಿ ವ್ಯವಹಾರ ಸಚಿವ ರಾಗಿದ್ದ ಎ.ಸಿ.ಜಾರ್ಜ್ ಉದ್ಘಾಟಿಸಿದ್ದರು. ಅಂದಿನಿಂದ ಇಲ್ಲಿಯವರೆಗೆ ಕಾಫಿ ತಳಿ ಅಭಿವೃದ್ಧಿ, ಬೀಜ ಬಿತ್ತನೆ ಹಾಗೂ ಸಂರಕ್ಷಣೆ ಕುರಿತು ಸಂಶೋಧನೆ ನಡೆಸುತ್ತಿದ್ದ ಕಾಫಿ ಮಂಡಳಿ ಮೈಸೂರು ಬಿಟ್ಟು ಹೋಗಲು ಸಿದ್ಧವಾಗಿದೆ.

ಕಾಫಿ ಬೋರ್ಡ್‌ನಲ್ಲಿ ಸಂಶೋಧನೆ ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯ, ಜೆಎಸ್‌ಎಸ್ ಸೇರಿದಂತೆ ರಾಜ್ಯ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ, ಪದವಿ ಹಾಗೂ ಸ್ನಾತಕೋತ್ತರ ಕಾಲೇಜುಗಳಲ್ಲಿ ಸಸ್ಯಶಾಸ್ತ್ರ ಅಧ್ಯಯನ ಮಾಡುವ ವಿದ್ಯಾರ್ಥಿಗಳನ್ನು ಅಪ್ರೆಂಟಿಸ್(ಶಿಷ್ಯವೃತ್ತಿ) ಆಗಿ ನೇಮಕ ಮಾಡಿಕೊಂಡು ಸೂಕ್ತ ಸಂಶೋಧನಾ ತರಬೇತಿ ಕೊಟ್ಟು, ಪ್ರಮಾಣ ಪತ್ರ ನೀಡಲಾ ಗುತ್ತಿತ್ತು ಆದರೆ ಕಳೆದ ಮೂರ್‍ನಾಲ್ಕು ತಿಂಗಳಿಂದ ಸ್ಥಳಾಂತರಿಸುವ ಹಿನ್ನೆಲೆಯಿಂದಾಗಿ ಅಪ್ರೆಂಟಿಸ್ ನೇಮಕವನ್ನು ನಿಲ್ಲಿಸಲಾಗಿದೆ.

ತೀವ್ರ ಬೇಸರ: ರಾಜ್ಯ ವಿವಿಧೆಡೆಯಿಂದ ಬಂದು ಮೈಸೂರಿನಲ್ಲಿ ನೆಲೆಸಿ, ಕಾಫಿ ಬೋರ್ಡ್‌ನಲ್ಲಿ ಸಂಶೋಧನೆ ನಡೆಸುತ್ತಿರುವ ಕೆಲ ಸಂಶೋಧಕರು, ತರಬೇತಿ ಅವಕಾಶ ವಂಚಿತ ವಿದ್ಯಾರ್ಥಿಗಳು ಕಾಫಿ ಬೋರ್ಡ್ ಸ್ಥಳಾಂತರಕ್ಕೆ ತೀವ್ರ ಬೇಸರ ವ್ಯಕ್ತಪಡಿಸಿ ದ್ದಾರೆ. ಸೋಮವಾರಪೇಟೆಗೆ ಸ್ಥಳಾಂತರ ವಾದರೆ ಮೂಲಸೌಕರ್ಯ ಕೊರತೆ ಯಾಗಬಹುದು ಎಂದು ಸಂಶೋಧಕರು ತಿಳಿಸಿದರೆ, ತರಬೇತಿಗೆ ಅವಕಾಶವಿಲ್ಲದೆ ಅಧ್ಯಯನಕ್ಕೆ ತೊಂದರೆಯಾಗಿದೆ ಎಂದು ಮೈಸೂರು ವಿವಿ ಸಸ್ಯಶಾಸ್ತ್ರ ವಿಭಾಗದ ಕೆಲ ವಿದ್ಯಾರ್ಥಿಗಳು 'ಮೈಸೂರು ಮಿತ್ರ'ನಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

ಸದ್ದಿಲ್ಲದೆ ಕಾರ್ಯನಿರ್ವಹಣೆ: ಕಳೆದ 50 ವರ್ಷಗಳಿಂದ ಮೈಸೂರು ವಿವಿ ಕಟ್ಟಡದಲ್ಲೇ ಇದ್ದ ಕೇಂದ್ರ ಸರ್ಕಾರದ ಕಾಫಿ ಬೋರ್ಡ್ ಸದ್ದಿಲ್ಲದೆ ಕಾರ್ಯನಿರ್ವಹಿಸಿದೆ. ಮೈಸೂರಿನ ಅರ್ಧದಷ್ಟು ಜನರಿಗೆ ಕಾಫಿ ಬೋರ್ಡ್ ಮೈಸೂರಲ್ಲಿ ಎಲ್ಲಿದೆ ಎಂಬುದೇ ತಿಳಿದಿರಲಿಲ್ಲ. ಕಟ್ಟಡ ಹಿಂಬದಿಯಲ್ಲಿ ಗಿಡ–ಮರಗಳಿಂದ ಆವೃತವಾಗಿದ್ದ ಕಾಫಿ ಬೋರ್ಡ್ 50 ವರ್ಷ ಮೈಸೂರಿನಲ್ಲಿತ್ತೇ ಎಂಬಂತಾಗಿದೆ ಎಂದು ಕೆಲ ಮೈಸೂರಿಗರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಸ್ಥಳಾಂತರಿಸುವ ಅನಿವಾರ್ಯತೆ ಇರಲಿಲ್ಲ...

ಮೈಸೂರಿನಿಂದ ಸೋಮವಾರಪೇಟೆಗೆ ಕಾಫಿ ಬೋರ್ಡ್ ಸ್ಥಳಾಂತರಿಸುವ ಅನಿವಾರ್ಯತೆ ಇರಲಿಲ್ಲ. ಆದರೆ ಸಂಶೋಧನೆಗೆ ತೊಡಕಾಗಿದೆ ಎಂಬ ಕಾರಣಗಳನ್ನೊಡ್ಡಿ ಮೇಲಾಧಿಕಾರಿಗಳು ಸ್ಥಳಾಂತರಿಸುವ ನಿರ್ಧಾರ ಕೈಗೊಂಡಿದ್ದಾರೆ. 50 ವರ್ಷಗಳಿಂದ ಆಗದಿರುವ ತೊಂದರೆ ಈಗ ಆಯಿತೆಂದರೆ ನಂಬಲು ಸಾಧ್ಯವೆ. ಇದೆಲ್ಲವೂ ಸ್ವ–ಹಿತಾಸಕ್ತಿಗಾಗಿ ನಡೆಯುತ್ತಿರುವಂತಿದೆ.

– ಸಂಶೋಧಕ ಹಾಗೂ ಸಸ್ಯಶಾಸ್ತ್ರ ಅಧ್ಯಯನ ವಿದ್ಯಾರ್ಥಿಗಳು

ಚುನಾವಣೆ ನಂತರ: ಈ ವರ್ಷದ ಏಪ್ರಿಲ್ ತಿಂಗಳ ಮೊದಲ ವಾರವೇ ಸ್ಥಳಾಂತರಿಸುವಂತೆ ಈ ಹಿಂದೆಯೇ ಕಾಫಿ ಬೋರ್ಡ್‌ನ ಅಧಿ ಕಾರಿಗಳಿಗೆ ಮಾಹಿತಿ ಬಂದಿತ್ತು ಆದರೆ ಇದೇ ವೇಳೆ ಲೋಕಸಭಾ ಚುನಾವಣೆ ಘೋಷಣೆ ಯಾಗಿರುವುದರಿಂದಾಗಿ ಜೂನ್ ಅಥವಾ ಜುಲೈ ತಿಂಗಳಿನಲ್ಲಿ ಸ್ಥಳಾಂತರಿಸುವ ಸಾಧ್ಯತೆ ಇದೆ ಎಂದು ಕಾಫಿ ಬೋರ್ಡ್ ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು.

ವೈಭವದ ವೈರಮುಡಿ ಉತ್ಸವ

ವಜ್ರಖಚಿತ ಚಲುವನಾರಾಯಣನ ದರ್ಶನ ಪಡೆದ ಲಕ್ಷಾಂತರ ಭಕ್ತರು



ಮಂಡ್ಯ,ಮಾ.21– ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿರುವ ಐತಿಹಾಸಿಕ ಧಾರ್ಮಿಕ ಕ್ಷೇತ್ರ ಮೇಲುಕೋಟೆಯ ಚಲುವ ನಾರಾಯಣನ ವೈರಮುಡಿ ಉತ್ಸವ ಗುರುವಾರ ರಾತ್ರಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ರಾತ್ರಿ 9ಗಂಟೆ ವೇಳೆಗೆ ವಜ್ರಖಚಿತನಾಗಿ ಶ್ರೀ ಚಲುವನಾರಾಯಣ ಮೇಲುಕೋಟೆಯ ತೇರಿನ ಬೀದಿಯಲ್ಲಿ ವಿರಾಜಮಾನನಾದ.

ಜಿಲ್ಲಾಡಳಿತ ಎಲ್ಲಾ ರೀತಿಯ ಸಿದ್ಧತೆ ಕೈಗೊಂಡಿತ್ತು. ಮೇಲುಕೋಟೆ ದೇಗುಲದ ಆವರಣಕ್ಕೆ ಗುರುವಾರ ಮಂಡ್ಯ, ಬೆಂಗಳೂರು, ಮೈಸೂರು ಸೇರಿದಂತೆ ರಾಜ್ಯದ ಮೂಲೆ ಮೂಲೆಗಳಿಂದ ಭಕ್ತರು ಆಗಮಿಸಿದರಲ್ಲದೆ ಆಂಧ್ರ, ತಮಿಳುನಾಡು, ಕೇರಳ, ತೆಲಂಗಾಣದಿಂದ ಲಕ್ಷಾಂತರ ಮಂದಿ ಭಕ್ತರು ಆಗಮಿಸಿ ವಜ್ರಖಚಿತ ಚಲುವನಾರಾಯಣನ ದರ್ಶನ ಪಡೆದರು. ಈ ನಿಟ್ಟಿನಲ್ಲಿ ಮಂಡ್ಯ, ಮೈಸೂರು, ಬೆಂಗಳೂರಿನಿಂದ ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿತ್ತು.

ಜೊತೆಗೆ ದೇವಾಲಯದ ಆವರಣದಲ್ಲಿ ಪ್ರಸಾದ ವಿನಿಯೋಗ, ಪಾರ್ಕಿಂಗ್ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ತಂಗುದಾಣ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿತ್ತು. ರಾತ್ರಿ 9ಗಂಟೆ ವೇಳೆಗೆ ಆರಂಭವಾದ ವೈರಮುಡಿ ಉತ್ಸವ ತಡರಾತ್ರಿಯವರೆಗೂ ಜರುಗಿತು.

ವೈರಮುಡಿ ಉತ್ಸವದ ಹಿನ್ನಲೆಯಲ್ಲಿ ಗುರುವಾರ ಬೆಳಿಗ್ಗೆ ಮಂಡ್ಯ ನಗರದ ಜಿಲ್ಲಾ ಖಜಾನೆಯಿಂದ ಜಿಲ್ಲಾಡಳಿತ ಹಾಗೂ ಮೇಲುಕೋಟೆ ಸ್ಥಾನಿಕ ಅರ್ಚಕರ ನೇತೃತ್ವದಲ್ಲಿ ವಜ್ರಖಚಿತ ವೈರಮುಡಿಯನ್ನು ಹೊರಗೆ ತೆಗೆದು, ಮಂಡ್ಯ ನಗರದ ಲಕ್ಷ್ಮಿ ಜನಾರ್ದನ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಅಲ್ಲಿಂದ ಬಿಗಿ ಭದ್ರತೆಯಲ್ಲಿ ಮೇಲುಕೋಟೆ ದೇಗುಲಕ್ಕೆ ಒಡವೆಗಳನ್ನು ತೆಗೆದುಕೊಂಡು ಬರಲಾಯಿತು. ಸಾಗುವ ದಾರಿಯಲ್ಲಿ ಸುತ್ತಮುತ್ತಲ ಗ್ರಾಮಸ್ಥರು ಪೂಜೆ ನೆರವೇರಿಸಿದರು ಹಾಗೂ ವಿವಿಧ ದೇವಾಲಯಗಳಲ್ಲಿ ಪೂಜೆ ನೆರವೇರಿತು.

ಕುಮಾರಸ್ವಾಮಿ ಶೀಘ್ರ ಗುಣಮುಖಕ್ಕೆ ಕೋರಿ ಜಿಲ್ಲಾದ್ಯಂತ ಪೂಜೆ, ಹೋಮ

ಮಂಡ್ಯ: ಹೃದಯ ಚಿಕಿತ್ಸೆಗಾಗಿ ಚೆನ್ನೈನ ಖಾಸಗಿ ಆಸ್ಪತ್ರೆಗೆ ದಾಖಲಾಗಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಬಹುಬೇಗ ಗುಣಮುಖರಾಗಲೆಂದು ಕೋರಿ ಮಂಡ್ಯ ಜಿಲ್ಲೆಯ ವಿವಿಧೆಡೆ ಜೆಡಿಎಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹೆಚ್.ಡಿ.ಕುಮಾರಸ್ವಾಮಿ ಹೆಸರಲ್ಲಿ ಪೂಜೆ ಸಲ್ಲಿಸಿ, ಹೋಮ, ಹವನ ಮಾಡಿದ್ದಾರೆ.

ನಗರದ ವಿದ್ಯಾಗಣಪತಿ ದೇಗುಲದಲ್ಲಿ ಜೆಡಿಎಸ್ ಮುಖಂಡ ಬಿ.ಆರ್.ರಾಮಚಂದ್ರ ನೇತೃತ್ವದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ಹೆಚ್ಡಿಕೆ ಬೇಗ ಗುಣಮುಖರಾಗಿ ಚುನಾವಣಾ ಚಟುವಟಿಕೆಯಲ್ಲಿ ತೊಡಗಿಕೊಳ್ಳುವಂತೆ ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ಮನ್‌ಮುಲ್ ಉಪಾಧ್ಯಕ್ಷ ಎಂ.ಎಸ್.ರಘುನಂದನ್, ಮುಖಂಡರಾದ ನಾಗೇಶ್, ಕೆ.ಸಿ.ನಾಗಮ್ಮ, ಹನಕೆರೆ ನಾಗಪ್ಪ, ಸಿದ್ದರಾಮೇಗೌಡ, ನವೀನ್, ಪದ್ಮಾವತಿ ಇತರರಿದ್ದರು.

ಕೆಆರ್.ಪೇಟೆ: ಪಟ್ಟಣದ ಮೇಲುಕೋಟೆ ರಸ್ತೆಯಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಹೆಚ್ಡಿಕೆ ಹೆಸರಲ್ಲಿ ವಿಶೇಷ ಪೂಜೆ ಸಲ್ಲಿಸಿ ಶೀಘ್ರವೇ ಗುಣಮುಖರಾಗಿ ಹೊರಬರಲಿ ಎಂದು ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಎ.ಎನ್.ಜಾನಕಿರಾಮ್ ನೇತೃತ್ವದಲ್ಲಿ ವಿಶೇಷ ಪೂಜೆ ಸ್ಲಲಿಸಲಾಯಿತು. ಈ ಸಂದರ್ಭದಲ್ಲಿ ಮನ್‌ಮುಲ್ ನಿರ್ದೇಶಕ ಡಾಲು ರವಿ, ಮುಖಂಡರಾದ ಹೆಚ್.ಟಿ.ಲೋಕೇಶ್, ಮೋಹನ್, ಹುಲ್ಲೇಗೌಡ, ರಆಜು, ನಾಗೇಶ್ ಇತರರಿದ್ದರು.

ಹಲಗೂರು: ಹಲಗೂರು ಗ್ರಾಮ ದೇವತೆಯಾದ ಪಟ್ಟಲದಮ್ಮ ದೇವಸ್ಥಾನದಲ್ಲಿ ಶಸ್ತ್ರಚಿಕ್ಕಿತ್ಸೆಗೆ ಒಳಗಾಗಿರುವ ಹೆಚ್.ಡಿ.ಕುಮಾರಸ್ವಾಮಿ ಆರೋಗ್ಯ ಗುಣಮುಖರಾಗಲೆಂದು ಪಟ್ಟಲದಮ್ಮ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯವನ್ನು ಹಮ್ಮಿಕೊಳ್ಳಲಾಗಿತ್ತು.

ಇದೇ ಸಂದರ್ಭದಲ್ಲಿ ಮಾತನಾಡಿದ ಮಾಜಿ ಶಾಸಕ ಡಾ.ಕೆ.ಅನ್ನದಾನಿ, ರೈತರಿಗೆ ವಿಶೇಷವಾದ ಯೋಜನೆಗಳನ್ನು ರೂಪಿಸಿ ಬಡವರನ್ನು ಆರ್ಥಿಕವಾಗಿ ಮೇಲೆತ್ತಲು ಸಾಕಷ್ಟು ಶ್ರಮವಹಿಸುತ್ತಿರುವ ನಮ್ಮ ಪ್ರೀತಿಯ ಹೆಚ್.ಡಿ.ಕುಮಾರಣ್ಣ ಇಂದು ಚೆನ್ನೈನ ಅಪಲೋ ಆಸ್ಪತ್ರೆಯಲ್ಲಿ ಮೂರನೇ ಬಾರಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಯಾವುದೇ ತೊಂದರೆಯಾಗದೆ ಚಿಕಿತ್ಸೆ ಯಶಸ್ವಿಯಾಗಿ ರಾಜ್ಯದ ಬಡ ಜನರಿಗೆ ಮತ್ತೆ ಅವರ ಸೇವೆ ಸಿಗಲಿ ಎಂದು ಹಲಗೂರು ಗ್ರಾಮ ದೇವತೆ ಪಟ್ಟಲದಮ್ಮ ದೇವಿಯನ್ನು ಪ್ರಾರ್ಥಿಸಿ ವಿಶೇಷ ಪೂಜೆಯನ್ನು ಮಾಡಿಸಿದ್ದೇವೆ ಎಂದರು.

ಪೂಜಾ ಕಾರ್ಯಕ್ರಮದಲ್ಲಿ ಹಲಗೂರು ಹೋಬಳಿಯ ಜೆಡಿಎಸ್ ಹಾಗೂ ಬಿಜೆಪಿ ಮುಂಖಡರಾದ ರಾಮಚಂದ್ರೇಗೌಡ, ಚಿಕ್ಕಸ್ವಾಮಿ, ಸಚಿನ್, ಆನಂದ್, ತಮ್ಮಣ್ಣಗೌಡ, ಸುರೇಶ್, ವಂದರಿ ಬಾಬು, ಮೋದಿ ರವಿ, ಎನ್.ಕೆ.ಕುಮಾರ್, ಗಂಗಾಧರ್, ಶಿವಮಾದು, ಸಾಗ್ಯ ಜಯರಾಮ್, ಕುಂತೂರು ಸೋಮು, ಬೆನಮನಹಳ್ಳಿ ಲಿಂಗರಾಜು, ಕೃಷ್ಣೇಗೌಡ, ಪುಟ್ಟಸ್ವಾಮಿ, ನಾಗೇಶ್, ಇತರರಿದ್ದರು.



ಮಂಡ್ಯ ನಗರದ ಶ್ರೀ ವಿದ್ಯಾಗಣಪತಿ ದೇವಾಲಯದಲ್ಲಿ ಜೆಡಿಎಸ್ ವರಿಷ್ಠ ಎಚ್‌ಡಿ ಕುಮಾರಸ್ವಾಮಿ ಆರೋಗ್ಯ ಚೇತರಿಕೆಗಾಗಿ ಜಿಲ್ಲಾ ಜೆಡಿಎಸ್ ಮುಖಂಡರು ವಿಶೇಷ ಪೂಜೆ ಸಲ್ಲಿಸಿದರು

ನಾಳೆ ವಿದ್ಯುತ್ ವ್ಯತ್ಯಯ

ನಾಗಮಂಗಲ: ತಾಲೂಕಿನ ವಡೇರಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರಂತರ ಜ್ಯೋತಿ ಕಾಮಗಾರಿ ಇರುವುದರಿಂದ ಸದರಿ ವಿದ್ಯುತ್ ಕೇಂದ್ರದಿಂದ ಹೊರಹೊಮ್ಮುವ ಫೀಡರ್‌ಗೆ ಅಂದರೆ ಕಾಳಿಂಗನಹಳ್ಳಿ ಗ್ರಾಮ ಪಂಚಾಯಿತಿಯ ಎಲ್ಲಾ ಗ್ರಾಮಗಳಿಗೆ ಮಾ.23 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆ ವರೆಗೆ ವಿದ್ಯುತ್ ವ್ಯತ್ಯಯವಾಗುತ್ತದೆ.

ಅಪ್ರಾಪ್ತೆ ಮೇಲೆ ಅತ್ಯಾಚಾರ; ಅಪರಾಧಿಗೆ 28 ವರ್ಷ ಜೈಲು

ಮಂಡ್ಯ,ಮಾ.21–ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಅಪರಾಧಿಗೆ 28 ವರ್ಷ ಜೈಲು ಶಿಕ್ಷೆ, 65,500 ರೂ. ದಂಡ ವಿಧಿಸಿ ಅಧಿಕ ಸೆಷನ್ಸ್ ಮತ್ತು ತ್ವರಿತಗತಿ ನ್ಯಾಯಾಲಯ ತೀರ್ಪು ನೀಡಿ ಆದೇಶ ಹೊರಡಿಸಿದೆ.

ನಗರದ ಹಾಲಹಳ್ಳಿ ಲೇಬರ್ ಕಾಲೋನಿಯ ಮುಸ್ಲಿಂ ಬ್ಲಾಕ್ ಹತ್ತನೇ ಕ್ರಾಸ್‌ನ ಸಲ್ಮಾನ್ ಪಾಷಾ ಶಿಕ್ಷೆಗೆ ಗುರಿಯಾದ ಅಪರಾಧಿ.

ಸಲ್ಮಾನ್‌ಪಾಷ ಬಡಾವಣೆಯ ಅಪ್ರಾಪ್ತ ವಯಸ್ಸಿನ ಬಾಲಕಿ ಶಾಲೆಗೆ ಹಾಗೂ ಟ್ಯೂಷನ್‌ಗೆ ಹೋಗುವಾಗ ಮತ್ತು ಬರುವಾಗ ಆಕೆಯನ್ನು ಹಿಂಬಾಲಿಸಿಕೊಂಡು ಹೋಗಿ ತಿಂಡಿ ಕೊಟ್ಟು ಮಾತನಾಡಿಸುತ್ತಿದ್ದ.

ಅಪ್ರಾಪ್ತ ಬಾಲಕಿ ಪ್ರತಿದಿನ ಸಂಜೆ ಟ್ಯೂಷನ್‌ಗೆ ಹೋಗುವಾಗ ಆರೋಪಿಯು ಬಾಲಕಿಯನ್ನು ಯಾರು ಇಲ್ಲದ ಸಮಯದಲ್ಲಿ ತನ್ನ ರೂಂಗೆ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯವೆಸಗಿದ್ದು, 2022ನೇ ಜುಲೈ 3ರಂದು ರಾತ್ರಿ ಊಟ ಮುಗಿಸಿ ತಮ್ಮ ಮನೆಯ ರೂಂನಲ್ಲಿ ಮಲಗಿದ್ದ ಅಪ್ರಾಪ್ತ ಬಾಲಕಿಯನ್ನು ಮಧ್ಯರಾತ್ರಿ ಬಾಲಕಿಯ ಮನೆಯ ಕಾಂಪೌಂಡ್ ಒಳಗೆ ಅಕ್ರಮ ಪ್ರವೇಶ ಮಾಡಿ ಬಾಲಕಿ ಮಲಗಿದ್ದ ಮನೆಯ ರೂಂನ ಕಿಟಕಿಯ ಮೂಲಕ ಅಪ್ರಾಪ್ತ ಬಾಲಕಿಯನ್ನು ಕೂಗಿ ಎಬ್ಬಿಸಿ ಮನೆಯಿಂದ ಹೊರಗೆ ಕರೆದು, ನಂತರ ಲಿಫ್ಟ್ ಕೊಡುವುದಾಗಿ ಹೇಳಿ ಬಾಲಕಿಯನ್ನು ಪುಸಲಾಯಿಸಿ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯವೆಸಗಿದ್ದಾನೆ.

ಪ್ರಕರಣ ಕುರಿತಂತೆ ದೂರು ದಾಖಲಾದ ನಂತರ 354(ಡಿ), 366, 378(ಎಬಿ), 376 (2) (ಎನ್) ಐಪಿಸಿ ಮತ್ತು ಕಲಂ 6, 12 ಪೋಕ್ಸೋ ಕಾಯ್ದೆ ಅಡಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ನಡೆಸಿದ ಅಂದಿನ ಇನ್ಸ್‌ಪೆಕ್ಟರ್ ಎಸ್.ಕೆ.ಕೃಷ್ಣ ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾ ರೋಪಣಾ ಪಟ್ಟಿ ಸಲ್ಲಿಸಿದ್ದರು.

ವಿಶೇಷ ಪ್ರಕರಣ ಕುರಿತಂತೆ ಮಂಡ್ಯದ ಅಧಿಕ ಸತ್ರ ಮತ್ತು ತ್ವರಿತಗತಿ 2ನೇ ನ್ಯಾಯಾಲಯದ ವಿಶೇಷ ನ್ಯಾಯಾಧೀಶೆ ನಾಗಜ್ಯೋತಿ ಅವರ ಮುಂದೆ ವಿಚಾರಣೆ ನಡೆದು, ಅಪರಾಧ ಸಾಭೀತಾದ ಹಿನ್ನೆಲೆಯಲ್ಲಿ ಸಲ್ಮಾನ್ ಪಾಷನಿಗೆ ಕಲಂ 354(ಡಿ) ಮತ್ತು ಪೋಕ್ಸೋ ಕಾಯ್ದೆ ಕಲಂ 12 ಅಡಿ ಅಪರಾಧಕ್ಕೆ 2ವರ್ಷಗಳ ಕಠಿಣ ಶಿಕ್ಷೆ ಮತ್ತು 5 ಸಾವಿರ ರೂ. ದಂಡ, ದಂಡ ಪಾವತಿಸಲು ತಪ್ಪಿದಲ್ಲಿ 3 ತಿಂಗಳ ಸಾದಾ ಶಿಕ್ಷೆ, ಕಲಂ 363 ಮತ್ತು 366 ಕಾಯ್ದೆ ಅಡಿಯಲ್ಲಿನ ಅಪರಾಧಕ್ಕೆ 5 ವರ್ಷಗಳ ಕಠಿಣ ಶಿಕ್ಷೆ ಮತ್ತು 10 ಸಾವಿರ ರೂ. ದಂಡ, ದಂಡ ಪಾವತಿಸಲು ತಪ್ಪಿದಲ್ಲಿ 3 ತಿಂಗಳ ಸಾದಾ ಶಿಕ್ಷೆ, ಕಲಂ 447 ಅಡಿಯಲ್ಲಿನ ಅಪರಾಧಕ್ಕೆ 3 ತಿಂಗಳ ಕಠಿಣ ಶಿಕ್ಷೆ ಮತ್ತು 500 ರೂ. ದಂಡ, ದಂಡ ಪಾವತಿಸಲು ತಪ್ಪಿದಲ್ಲಿ 15 ದಿನಗಳ ಸಾದಾ ಶಿಕ್ಷೆ ಹಾಗೂ ಕಲಂ 376ಎಬಿ ಮತ್ತು ಪೋಕ್ಸೋ ಕಾಯ್ದೆ ಕಲಂ 6 ಅಡಿಯಲ್ಲಿನ ಅಪರಾಧಕ್ಕೆ 21 ವರ್ಷಗಳ ಕಠಿಣ ಶಿಕ್ಷೆ ಮತ್ತು 50 ಸಾವಿರ ರೂ.ಗಳ ದಂಡ, ದಂಡ ಪಾವತಿಸಲು ತಪ್ಪಿದಲ್ಲಿ 5 ವರ್ಷ ಕಠಿಣ ಸಾದಾ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ವಿಶೇಷ ಸರ್ಕಾರಿ ಅಭಿಯೋಜಕ ಹೆಬ್ಬಕವಾಡಿ ನಾಗರಾಜು ಸಂತ್ರಸ್ತ ಯುವತಿಯ ಪರ ವಾದ ಮಂಡಿಸಿದರು.

ಪಿಎಚ್.ಡಿ ಪದವಿ

ಮೈಸೂರು; ಡಾ. ಪುಟ್ಟಸ್ವಾಮಿ ಅವರ ಮಾರ್ಗ ದರ್ಶನದಲ್ಲಿ ಹೆಚ್.ಎ. ಶ್ವೇತಾ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.



ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ: ಮೂವರಿಗೆ ಕಠಿಣ ಶಿಕ್ಷೆ

ಮಂಡ್ಯ,ಮಾ.21– ಯುವತಿ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿದ ಆರೋಪಿಗಳಲ್ಲಿ ಮೂವರಿಗೆ ಜೀವಾವಧಿ ಶಿಕ್ಷೆ ಮತ್ತು ದಂಡ ವಿಧಿಸಿ ಮಂಡ್ಯದ ಐದನೇ ಅಪರ ಜಿಲ್ಲಾ ಮತ್ತು ಸತ್ರ್ಯಾಯಾಲಯದ ನ್ಯಾಯಾಧೀಶೆ ಕೆ.ನಿರ್ಮಲಾ ಆದೇಶ ನೀಡಿದ್ದಾರೆ.

2015ರಲ್ಲಿ ಈ ಘಟನೆ ನಡೆದಿದ್ದು ಸಂತ್ರಸ್ತೆಯು, ಮೈಸೂರು ಜಿಲ್ಲೆಯ ಕೆ.ಆರ್.ಮಿಲ್ ಕಾಲೋನಿ ನಿವಾಸಿ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ದ್ವಿತೀಯ ಬಿ.ಎ. ವ್ಯಾಸಂಗ ಮಾಡುತ್ತಿದ್ದರು ಎನ್ನಲಾಗಿದೆ.

ಈ ಸಂದರ್ಭದಲ್ಲಿ ಕೀರ್ತಿಗೌಡ ಎಂಬುವನು ಪ್ರೀತಿಸುತ್ತಿದ್ದ ಪ್ರೀತಿಯನ್ನೇ ಬಂಡವಾಳವಾಗಿಸಿಕೊಂಡು ಕೀರ್ತಿಗೌಡ ಮೊದಲು ಸಂತ್ರಸ್ಥೆಯನ್ನು ಪುಸಲಾಯಿಸಿ ಕೆ.ಆರ್.ಎಸ್‌ಗೆ ಕರೆದೊಯ್ದು, ನಂತರ ಪಾಂಡವಪುರ ತಾಲ್ಲೂಕಿನ ಚಿನಕುರುಳಿ ಹೋಬಳಿಯ ಬೇಬಿ ಬೆಟ್ಟಕ್ಕೆ ಕರೆದೊಯ್ದು ನಿರ್ಜನ ಪ್ರದೇಶದಲ್ಲಿ ಮೊದಲು ಅತ್ಯಾಚಾರ ಮಾಡಿದ್ದಾನೆ. ನಂತರ ಎರಡನೇ ಆರೋಪಿ ಕಿರಣ್‌ಗೌಡ ಮತ್ತು ಮೂರನೇ ಆರೋಪಿ ಮೋಹನ್ ಮತ್ತು ನಾಲ್ಕನೇ ಆರೋಪಿ ಮಂಜುನಾಥ್ ರಸ್ತೆಯಲ್ಲಿ ನಿಂತಿದ್ದು, ನಂತರ ಎರಡನೇ ಆರೋಪಿ ಮತ್ತು ಮೂರನೇ ಆರೋಪಿ ಸಂತ್ರಸ್ಥೆ ಜೊತೆ ಮಾತನಾಡುವುದಾಗಿ ಕರೆದುಕೊಂಡ ಹೋಗಿ ಅತ್ಯಾಚಾರ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಅಳುತ್ತಿರುವ ಸಂತ್ರೆಸ್ಥೆಯನ್ನು ನೋಡಿದ ನಾಲ್ಕನೇ ಆರೋಪಿಯು ಶ್ರೀರಂಗಪಟ್ಟಣಕ್ಕೆ ಬಿಟ್ಟು ಹೋಗಿರುತ್ತಾನೆ. ಈ ಪ್ರಕರಣವು ಪಾಂಡವಪುರ ಠಾಣೆಯಲ್ಲಿ ದಾಖಲಾಗಿದ್ದು, ಶ್ರೀರಂಗಪಟ್ಟಣದ ಉಪ ವಿಭಾಗದ ಡಿವೈಎಸ್‌ಪಿ ಎನ್.ಸಿದ್ದೇಶ್ವರ್ ಆರೋಪಿಗಳ ವಿರುದ್ಧ ಮಂಡ್ಯ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ನಂತರ ಸದರಿ ಮೊಕದ್ದಮೆಯು ಸಾಬೀತಾದ ಹಿನ್ನೆಲಯಲ್ಲಿ ಮೂವರು ಆರೋಪಿಗಳಿಗೆ ಜೀವಾವಧಿ ಶಿಕ್ಷೆ ತಲಾ 50 ಸಾವಿರ ರೂ.ದಂಡ, ಪಿಒಎ ಕಾಯ್ದೆಯಡಿ ಕಠಿಣ ಶಿಕ್ಷೆ ಮತ್ತು ಭಾದಂಸಂ ಕಾಯಿದೆ 376ರಡಿಯಲ್ಲಿ 20 ವರ್ಷ ಕಠಿಣ ಶಿಕ್ಷೆ ಮತ್ತು 40 ಸಾವಿ ರೂ. ದಂಡ ಹಾಗೂ ಭಾದಂಸಂ ಕಾಯಿದೆ 506 ಅಡಿಯಲ್ಲಿ 5 ಸಾವಿರ ರೂ ದಂಡ ಮತ್ತು ಕಠಿಣ ಶಿಕ್ಷೆ ನೀಡಲಾಗಿದೆ.

ನೊಂದ ಸಂತ್ರಸ್ತೆಗೆ 2.80 ಲಕ್ಷ ರೂ. ಪರಿಹಾರ ನೀಡಬೇಕು ಎಂದು ತೀರ್ಪು ನೀಡಿ ಆದೇಶಿಸಲಾಗಿದೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ಎಸ್.ಸಿ.ರಾಮಲಿಂಗೇಗೌಡ ವಾದ ಮಂಡಿಸಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಮೂರನೇ ಪುಟದಿಂದ

ಮೈಸೂರು–ಕೊಡಗು ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್

ಲಕ್ಷ್ಮೀ ಹೆಬ್ಬಾಳ್ಕರ್ ಪುತ್ರ ಮೃಣಾಳ್ ರವೀಂದ್ರ ಹೆಬ್ಬಾಳ್ಕರ್, ಬಾಗಲಕೋಟೆಯಲ್ಲಿ ಶಿವಾನಂದ ಪಾಟೀಲ್ ಪುತ್ರಿ ಸಂಯುಕ್ತಾ ಪಾಟೀಲ್, ರಾಯಚೂರಿನಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಜಿ.ಕುಮಾರ ನಾಯಕ್, ಬೀದರ್‌ನಲ್ಲಿ ಸಚಿವ ಈಶ್ವರ್ ಖಂಡ್ರೆ ಪುತ್ರ ಸಾಗರ್ ಖಂಡ್ರೆ, ಕೊಪ್ಪಳದಲ್ಲಿ ರಾಜಶೇಖರ ಹಿಟ್ನಾಳ್, ಧಾರವಾಡದಲ್ಲಿ ವಿನೋದ್ ಅಸುಟಿ, ಉತ್ತರ ಕನ್ನಡದಲ್ಲಿ ಮಾಜಿ ಶಾಸಕಿ ಡಾ.ಅಂಜಲಿ ನಿಂಬಾಳ್ಕರ್, ದಾವಣಗೆರೆಯಲ್ಲಿ ಎಸ್.ಎಸ್.ಮಲ್ಲಿಕಾರ್ಜುನ್ ಪತ್ನಿ ಪ್ರಭಾ ಮಲ್ಲಿಕಾರ್ಜುನ್, ಉಡುಪಿ–ಚಿಕ್ಕಮಗಳೂರು ಕ್ಷೇತ್ರದಲ್ಲಿ ಮಾಜಿ ಸಚಿವ ಜಯಪ್ರಕಾಶ್ ಹೆಗ್ಗಡೆ, ದಕ್ಷಿಣ ಕನ್ನಡದಲ್ಲಿ ಪದ್ಮರಾಜ್, ಚಿತ್ರದುರ್ಗದಲ್ಲಿ ಬಿ.ಎನ್.ಚಂದ್ರಪ್ಪ, ಬೆಂಗಳೂರು ಉತ್ತರದಲ್ಲಿ ಪ್ರೊ. ಎಂ.ಜಿ. ರಾಜೀವ್‌ಗೌಡ, ಬೆಂಗಳೂರು ಕೇಂದ್ರದಲ್ಲಿ ಮನ್ಸೂರ್ ಅಲಿಖಾನ್, ಬೆಂಗಳೂರು ದಕ್ಷಿಣದಲ್ಲಿ ಸಚಿವ ರಾಮಲಿಂಗಾರೆಡ್ಡಿ ಪುತ್ರಿ ಸೌಮ್ಯಾ ರೆಡ್ಡಿ ಅವರಿಗೆ ಟಿಕೆಟ್ ನೀಡಲಾಗಿದೆ. ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರನ್ನು ಕಣಕ್ಕಿಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಇಚ್ಛಿಸಿದ್ದರು. ಆದರೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಒಪ್ಪದ ಡಾ. ಮಹದೇವಪ್ಪ, ತಮ್ಮ ಪುತ್ರ ಸುನೀಲ್ ಬೋಸ್ ಅವರಿಗೆ ಟಿಕೆಟ್ ನೀಡುವಂತೆ ಒತ್ತಡ ಹೇರುತ್ತಿದ್ದಾರೆ. ಮತ್ತೊಂದೆಡೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶಿಷ್ಯನಾಗಿರುವ ಕೊಳ್ಳೇಗಾಲ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ಅವರನ್ನು ಕಣಕ್ಕಿಳಿಸುವಂತೆ ಖರ್ಗೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಮತ್ತೊಂದೆಡೆ ಮಾಜಿ ಸಂಸದ ದಿವಂಗತ ಧ್ರುವನಾರಾಯಣ್ ಪುತ್ರ, ನಂಜನಗೂಡು ಶಾಸಕರಾಗಿರುವ ದರ್ಶನ್ ಧ್ರುವನಾರಾಯಣ್ ಅವರ ಬಗ್ಗೆಯೂ ಪಕ್ಷದ ನಾಯಕರಲ್ಲಿ ಒಲವಿದೆಯಾದರೂ, ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ಹಿಂದೇಟು ಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ. ಒಟ್ಟಾರೆ ಚಾಮರಾಜನಗರ ಕ್ಷೇತ್ರದ ಟಿಕೆಟ್‌ಗಾಗಿ ಸುನೀಲ್ ಬೋಸ್ ಮತ್ತು ಜಿ.ಎನ್.ನಂಜುಂಡಸ್ವಾಮಿ ನಡುವೆ ತೀವ್ರ ಪೈಪೋಟಿ ಉಂಟಾಗಿದೆ. ಕೋಲಾರದಲ್ಲಿ ಮಾಜಿ ಸಂಸದ ಹಾಗೂ ಹಾಲಿ ಶಾಸಕರಾಗಿರುವ ಕೆ.ಹೆಚ್.ಮುನಿಯಪ್ಪ ಅವರು ತಮ್ಮ ಸಂಬಂಧಿಗೆ ಟಿಕೆಟ್ ನೀಡಬೇಕೆಂದು ಒತ್ತಡ ಹೇರುತ್ತಿದ್ದಾರೆ. ಆದರೆ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಅವರು ತಮ್ಮ ಬೆಂಬಲಿಗರಾದ ರಾಜ್ಯಸಭಾ ಮಾಜಿ ಸದಸ್ಯ ಹನುಮಂತಯ್ಯ ಅವರಿಗೆ ಟಿಕೆಟ್ ನೀಡಬೇಕೆಂದು ಪಟ್ಟು ಹಿಡಿದಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ ರಾಜ್ಯ ಯುವ ಕಾಂಗ್ರೆಸ್‌ನ ರಕ್ಷಾ ರಾಮಯ್ಯ ಅವರಿಗೆ ಟಿಕೆಟ್ ನೀಡುವಲ್ಲಿ ರಾಜ್ಯ ನಾಯಕರು ಒಲವು ತೋರಿದ್ದರೆ, ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿಯವರು ಈ ಕ್ಷೇತ್ರದಲ್ಲಿ ತಮಗೇ ಟಿಕೆಟ್ ನೀಡಬೇಕೆಂದು ಎಐಸಿಸಿ ಮಟ್ಟದಲ್ಲಿ ಲಾಬಿ ನಡೆಸುತ್ತಿದ್ದಾರೆ. ಅತ್ತ ಬಳ್ಳಾರಿಯಲ್ಲಿ ಶಾಸಕ ತುಕಾರಾಂ ಕಣಕ್ಕಿಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ಸುಕರಾಗಿದ್ದಾರೆ.

ಪಿಎಸ್‌ಐ ಲಿಖಿತ ಪರೀಕ್ಷೆ ಮುಂದೂಡಿಕೆ

ಬೆಂಗಳೂರು, ಮಾ.21(ಕೆಎಂಶಿ)– ರಾಜ್ಯದಲ್ಲಿ ಲೋಕಸಭಾ ಚುನಾವಣೆ ದಿನಾಂಕಗಳ ಘೋಷಣೆ ಹಿನ್ನೆಲೆಯಲ್ಲಿ ಮೇ 8ರಂದು ನಡೆಸಲು ನಿಗದಿಯಾಗಿದ್ದ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ (ಪಿಎಸ್‌ಐ) ಹುದ್ದೆಗಳ ಲಿಖಿತ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಈ ಸಂಬಂಧ ಇಂದಿಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಣೆ ನೀಡಿದ್ದು, ಪಿಎಸ್‌ಐ ಪರೀಕ್ಷೆಗಳ ಪರಿಷ್ಕೃತ ದಿನಾಂಕವನ್ನು ಚುನಾವಣೆ ಮುಗಿದ ನಂತರ ತಿಳಿಸಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ತಿಳಿಸಿದ್ದಾರೆ.

ಸೆಣಸಾಟಕ್ಕೆ ಸಜ್ಜಾದವರು

ಮೈಸೂರು	:	ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ (ಬಿಜೆಪಿ) V/s ಎಂ. ಲಕ್ಷ್ಮಣ್ (ಕಾಂಗ್ರೆಸ್)
ಹಾಸನ	:	ಪ್ರಜ್ವಲ್ ರೇವಣ್ಣ (ಜೆಡಿಎಸ್) V/s ಶ್ರೇಯಸ್ ಪಟೇಲ್ (ಕಾಂಗ್ರೆಸ್)
ಬೆಂಗಳೂರು ಗ್ರಾ.	:	ಡಾ. ಸಿ.ಎನ್.ಮಂಜುನಾಥ್ (ಬಿಜೆಪಿ) V/s ಡಿ.ಕೆ.ಸುರೇಶ್ ಕಾಂಗ್ರೆಸ್
ಬೆಂಗಳೂರು ಉತ್ತರ	:	ಶೋಭಾ ಕರಂದ್ಲಾಜೆ (ಬಿಜೆಪಿ) V/s ಪ್ರೊ. ಎಂ.ವಿ.ರಾಜೀವ್‌ಗೌಡ (ಕಾಂಗ್ರೆಸ್)
ಬೆಂಗಳೂರು ದಕ್ಷಿಣ	:	ತೇಜಸ್ವಿ ಸೂರ್ಯ (ಬಿಜೆಪಿ) V/s ಸೌಮ್ಯ ರೆಡ್ಡಿ (ಕಾಂಗ್ರೆಸ್)
ಬೆಂಗಳೂರು ಕೇಂದ್ರ	:	ಪಿ.ಸಿ.ಮೋಹನ್ (ಬಿಜೆಪಿ) V/s ಮನ್ಸೂರ್ ಅಲಿ ಖಾನ್ (ಕಾಂಗ್ರೆಸ್)
ವಿಜಯಪುರ	:	ರಮೇಶ್ ಜಿಗಜಿಣಗಿ (ಬಿಜೆಪಿ) V/s ರಾಜು ಆಲಗೂರು (ಕಾಂಗ್ರೆಸ್)
ತುಮಕೂರು	:	ವಿ.ಸೋಮಣ್ಣ (ಬಿಜೆಪಿ) V/s ಮುದ್ದ ಹನುಮೇಗೌಡ (ಕಾಂಗ್ರೆಸ್)
ಹಾವೇರಿ	:	ಬಸವರಾಜ ಬೊಮ್ಮಾಯಿ (ಬಿಜೆಪಿ) V/s ಆನಂದಸ್ವಾಮಿ ಗಡ್ಡದೇವರಮಠ (ಕಾಂಗ್ರೆಸ್)
ಶಿವಮೊಗ್ಗ	:	ಬಿ.ವೈ.ರಾಘವೇಂದ್ರ (ಬಿಜೆಪಿ) V/s ಗೀತಾ ಶಿವರಾಜ್ ಕುಮಾರ್ (ಕಾಂಗ್ರೆಸ್)
ಉಡುಪಿ–ಚಿಕ್ಕಮಗಳೂರು	:	ಕೋಟಾ ಶ್ರೀನಿವಾಸ ಪೂಜಾರಿ (ಬಿಜೆಪಿ) V/s ಡಾ. ಜಯಪ್ರಕಾಶ್ ಹೆಗ್ಗಡೆ (ಕಾಂಗ್ರೆಸ್)
ದಾವಣಗೆರೆ	:	ಗಾಯಿತ್ರಿ ಸಿದ್ಧೇಶ್ವರ್ (ಬಿಜೆಪಿ) V/s ಪ್ರಭಾ ಮಲ್ಲಿಕಾರ್ಜುನ್ (ಕಾಂಗ್ರೆಸ್)
ಚಿಕ್ಕೋಡಿ	:	ಅಣ್ಣಾ ಸಾಹೇಬ್ ಜೊಲ್ಲೆ (ಬಿಜೆಪಿ) V/s ಪ್ರಿಯಾಂಕ ಜಾರಕಿಹೊಳಿ (ಕಾಂಗ್ರೆಸ್)
ಬಾಗಲಕೋಟೆ	:	ಪಿ.ಸಿ.ಗದ್ದಿಗೌಡರ್ (ಬಿಜೆಪಿ) V/s ಸಂಯುಕ್ತ ಎಸ್.ಪಾಟೀಲ್ (ಕಾಂಗ್ರೆಸ್)
ಕಲಬುರಗಿ	:	ಡಾ. ಉಮೇಶ್ ಜಾಧವ್ (ಬಿಜೆಪಿ) V/s ರಾಧಾಕೃಷ್ಣ (ಕಾಂಗ್ರೆಸ್)
ಕೊಪ್ಪಳ	:	ಡಾ. ಬಸವರಾಜ್ ಕ್ಯಾವತೂರ್ (ಬಿಜೆಪಿ) V/s ಬಸವರಾಜ ಹಿಟ್ನಾಳ್ (ಕಾಂಗ್ರೆಸ್)
ಧಾರವಾಡ	:	ಪ್ರಹ್ಲಾದ್ ಜೋಷಿ (ಬಿಜೆಪಿ) V/s ವಿನೋದ್ ಅಸೂಟಿ (ಕಾಂಗ್ರೆಸ್)
ದಕ್ಷಿಣ ಕನ್ನಡ	:	ಕ್ಯಾಪ್ಟನ್ ಬ್ರಿಜೇಶ್ ಚೌಟಾ (ಬಿಜೆಪಿ) V/s ಪದ್ಮರಾಜ್ (ಕಾಂಗ್ರೆಸ್)
ಚಿತ್ರದುರ್ಗ	:	ನಾರಾಯಣ ಸ್ವಾಮಿ (ಬಿಜೆಪಿ) V/s ಬಿ.ಎಸ್.ಚಂದ್ರಪ್ಪ (ಕಾಂಗ್ರೆಸ್)
ಬೀದರ್	:	ಭಗವಂತ್ ಖೂಬಾ (ಬಿಜೆಪಿ) V/s ಸಾಗರ್ ಖಂಡ್ರೆ (ಕಾಂಗ್ರೆಸ್)

ಚಾಮರಾಜನಗರದಲ್ಲಿ ಬಿಜೆಪಿ ಅಭ್ಯರ್ಥಿ ಬಾಲರಾಜ್; **ಬಳ್ಳಾರಿಯಲ್ಲಿ** ಬಿಜೆಪಿ ಅಭ್ಯರ್ಥಿ ಶ್ರೀರಾಮುಲು;
ಮಂಡ್ಯದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು);
ಬೆಳಗಾಂ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ರವೀಂದ್ರ ಹೆಬ್ಬಾಳ್ಕರ್; **ಉತ್ತರ ಕನ್ನಡದಲ್ಲಿ** ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್ ಕಾಂಗ್ರೆಸ್ ಅಭ್ಯರ್ಥಿ; **ರಾಯಚೂರು** ಕಾಂಗ್ರೆಸ್ ಅಭ್ಯರ್ಥಿ ಕುಮಾರ್ ನಾಯಕ್.

ಸಿಎಂ ಸಿದ್ದರಾಮಯ್ಯ ಸರ್ಕಾರದ ಜನಪರ ಯೋಜನೆಗಳು ಕೈಹಿಡಿಯುವ ವಿಶ್ವಾಸವಿದೆ



ಮೈಸೂರು,ಮಾ.21(ಪಿಎಂ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಕಳೆದ 9 ತಿಂಗಳಿಂದ ಜನಸಾಮಾನ್ಯರ ಶ್ರೇಯೋಭಿವೃದ್ಧಿಗೆ ನೀಡಿದ ಯೋಜನೆಗಳು (ಗ್ಯಾರಂಟಿ ಯೋಜನೆಗಳು) ನನ್ನ ಕೈ ಹಿಡಿಯಲಿದೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ವಿಶ್ವಾಸ ವ್ಯಕ್ತಪಡಿಸಿದರು.

'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಕಾಂಗ್ರೆಸ್ ಪಕ್ಷ ನನ್ನಂತಹ ಸಾಮಾನ್ಯ ವ್ಯಕ್ತಿ ಹಾಗೂ ಕಾರ್ಯಕರ್ತನನ್ನು ಗುರುತಿಸಿ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟಿದೆ. ಇದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಾಂಗ್ರೆಸ್‌ನ ಎಲ್ಲಾ ಶಾಸಕರು, ಮುಖಂಡರು, ಜಿಲ್ಲಾಧ್ಯಕ್ಷರು ಮತ್ತು ಹೈಕಮಾಂಡ್‌ನವರಿಗೆ ಧನ್ಯವಾದ ಅರ್ಪಿಸುತ್ತೇನೆ. ಈ ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

ಮಹಾರಾಜರು ವರ್ಸಸ್ ಆಮ್ ಆದ್ಮಿ (ಜನಸಾಮಾನ್ಯ) ನಡುವೆ ಈ ಚುನಾವಣೆ ನಡೆಯಲಿದೆ. ನಾನೊಬ್ಬ ಸಾಮಾನ್ಯ ಮನುಷ್ಯ. ನಾನು ಕಳೆದ 30 ವರ್ಷಗಳಿಂದ ನಿರಂತರವಾಗಿ ಮೈಸೂರು ನಗರ ಮತ್ತು ಜಿಲ್ಲೆಯ ಜನಸಾಮಾನ್ಯರಿಗೆ ಸ್ಪಂದಿಸಿದ್ದೇನೆ. ನೀರು, ರಸ್ತೆ ಸೇರಿದಂತೆ ನಾಗರಿಕರ ಮೂಲಭೂತ ಸೌಲಭ್ಯ ಸಂಬಂಧ ಜನಪರ ಹೋರಾಟ ಮಾಡಿಕೊಂಡು ಬಂದಿದ್ದೇನೆ 3 ವಿಧಾನ ಪರಿಷತ್ ಚುನಾವಣೆಯಲ್ಲಿ ಸೋಲು ಕಂಡಿದ್ದೇನೆ. ಶಿಕ್ಷಕರ ಕ್ಷೇತ್ರದಲ್ಲಿ ಎರಡು ಬಾರಿ ಹಾಗೂ ಒಮ್ಮೆ ದಕ್ಷಿಣ ಪದವೀಧರರ ಕ್ಷೇತ್ರದಲ್ಲಿ ಸ್ಪರ್ಧಿಸಿ ಪರಾಭವಗೊಂಡಿದ್ದೇನೆ. 2018 ರಲ್ಲಿ ನಡೆದ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕೇವಲ 185 ಮತಗಳ ಅಂತರದಿಂದ ಸೋಲು ಕಾಣಬೇಕಾಯಿತು.

ಜನ ಸೇವೆಗೆ ಸಂವಿಧಾನದತ್ತ ಅಧಿಕಾರ ಸದ್ಯ ಈವರೆಗೆ ಸಿಗಲಿಲ್ಲ. ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕ್ಷೇತ್ರದ ಮತದಾರ ಬಂಧುಗಳು ಒಂದು ಅವಕಾಶ ನೀಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ನಾನು ಬಡ ರೈತ ಕುಟುಂಬದಿಂದ ಬಂದು ಇಂಜಿನಿಯರಿಂಗ್ ಪದವೀಧರನಾದೆ. ಬಳಿಕ ಇಂಜಿನಿಯ ರಿಂಗ್ ವಲಯದಲ್ಲಿ ಸಾಕಷ್ಟು ಕೆಲಸ ಕಾರ್ಯ ಮಾಡಿದ್ದೇನೆ. ನನ್ನ ಮೇಲೆ ಯಾವುದೇ ಕಳಂಕವಿಲ್ಲ, ಶುದ್ಧಹಸ್ತನಾಗಿದ್ದೇನೆ. ಮತದಾರ ಪ್ರಭುಗಳು ಕೈ ಹಿಡಿಯಬೇಕೆಂದು ಕೋರುತ್ತೇನೆ ಎಂದು ಅವರು ತಿಳಿಸಿದರು.

ಐಪಿಎಲ್‌ಗೆ ಕ್ಷಣಗಣನೆ

• ಉದ್ಘಾಟನಾ ಸಮಾರಂಭದಲ್ಲಿ ಆರ್‌ಸಿಬಿ–ಸಿಎಸ್‌ಕೆ ಮುಖಾಮುಖಿ • ಚೆನ್ನೈನಲ್ಲಿ ಅದ್ಧೂರಿ ಉದ್ಘಾಟನಾ ಸಮಾರಂಭ: ಬಾಲಿವುಡ್ ತಾರೆಯರು ಭಾಗಿ



ಚೆನ್ನೈ, ಮಾ.21– ಲೋಕಸಭೆ ಚುನಾವಣೆಗೆ ಅಖಾಡ ಸಿದ್ಧಗೊಳ್ಳುತ್ತಿರುವಾಗಲೇ ಬಹುನಿರೀಕ್ಷಿತ 2024ನೇ ಸಾಲಿನ 17ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್)ಗೆ ಕ್ಷಣಗಣನೆ ಶುರುವಾಗಿದೆ.

ಶುಕ್ರವಾರ(ಮಾ.22) ಚೆನ್ನೈನ ಎಂ.ಎ.ಚಿದಂಬರಂ ಮೈದಾನದಲ್ಲಿ ವಿಶ್ವದ ಅತ್ಯಂತ ಶ್ರೀಮಂತ ಲೀಗ್‌ಗೆ ಅದ್ಧೂರಿ ಉದ್ಘಾಟನಾ ಸಮಾರಂಭದೊಂದಿಗೆ ವರ್ಣರಂಜಿತ ಚಾಲನೆ ದೊರೆಯಲಿದ್ದು, ಇನ್ನೆರಡು ತಿಂಗಳು ಕ್ರಿಕೆಟ್ ಅಭಿಮಾನಿಗಳಿಗೆ ಭರ್ಜರಿ ರಸದೌತಣ ಸಿಗಲಿದೆ.

ಚುನಾವಣೆ ಹೊರತಾಗಿಯೂ ಭಾರತದಲ್ಲೇ ಐಪಿಎಲ್ ಆಯೋಜಿಸುವುದಾಗಿ ಬಿಸಿಸಿಐ ಈಗಾಗಲೇ ಸ್ಪಷ್ಟಪಡಿಸಿದ್ದರೂ, ಮೊದಲ ಚರಣದ ಅಂದರೆ 15 ದಿನಗಳ ವೇಳಾಪಟ್ಟಿ ಮಾತ್ರ ಪ್ರಕಟಿಸಿದೆ. ಈ ಅವಧಿಯಲ್ಲಿ 21 ಪಂದ್ಯಗಳು ಆಯೋಜನೆಗೊಳ್ಳಲಿದ್ದು, ಉಳಿದ ಪಂದ್ಯಗಳ ವೇಳಾಪಟ್ಟಿ ಶೀಘ್ರ ಪ್ರಕಟಗೊಳ್ಳುವ ನಿರೀಕ್ಷೆಯಿದೆ.

ಟೂರ್ನಿಯಲ್ಲಿ ಒಟ್ಟು 74 ಪಂದ್ಯಗಳು ನಡೆಯಲಿದ್ದು, ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣ, ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ, ಹೈದರಾಬಾದ್‌ನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣ, ಜೈಪುರದ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣ, ಲಕ್ನೋನ ಭಾರತ್ ರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣ, ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ, ವಿಶಾಖಪಟ್ಟಣದ ಡಾ.ವೈ ಎಸ್.ರಾಜಶೇಖರ ರೆಡ್ಡಿ ಕ್ರೀಡಾಂಗಣ, ಮುಂಬೈನ ವಾಂಖೇಡೆ ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿವೆ.

ಚೆನ್ನೈ ಸೂಪರ್ ಕಿಂಗ್ಸ್

ರುತುರಾಜ್ ಗಾಯಕ್ವಾಡ್ (ನಾಯಕ), ಎಂಎಸ್ ಧೋನಿ, ರಚಿನ್ ರವೀಂದ್ರ, ಅಜಿಂಕ್ಯ ರಹಾನೆ, ಸಮೀರ್ ರಿಜ್ವಿ, ಡ್ಯಾರಿಲ್ ಮಿಚೆಲ್, ಶಿವಂ ದುಬೆ, ರವೀಂದ್ರ ಜಡೇಜಾ, ಶಾರ್ದೂಲ್ ಠಾಕೂರ್, ದೀಪಕ್ ಚಹಾರ್, ಮಹೇಶ್ ತೀಕ್ಷಣ, ಮೊಯಿನ್ ಅಲಿ, ಡೆವೊನ್ ಕಾನ್ವೇ, ಮುಸ್ತಾಫಿಝೂರ್, ಮಿಚ್‌ಮನ್, ತುಷಾರ್ ದೇಶಪಾಂಡೆ, ಅಜಯ್ ಜಾದವ್ ಮಂಡಲ್, ಪ್ರಶಾಂತ್ ಸೋಲಂಕಿ, ಮುಖೇಶ್ ಚೌಧರಿ, ಸಿಮರ್ಜೀತ್ ಸಿಂಗ್, ಆರ್.ಎಸ್.ಹಂಗರ್ಗೇಕರ್, ಶೇಕ್ ರಶೀದ್, ನಿಶಾಂತ್ ಸಿಂಧು, ಅರವೆಲ್ಲಿ ಅವನೀಶ್

ರಾಯಲ್ ಚಾಲೆಂಜರ್ಸ್ ಬೆಂಗಳೂರು

ಫಾಫ್ ಡು ಪ್ಲೆಸಿಸ್ (ನಾಯಕ), ದಿನೇಶ್ ಕಾರ್ತಿಕ್, ವಿರಾಟ್ ಕೊಹ್ಲಿ, ರಜತ್ ಪಾಟಿದಾರ್, ಗ್ಲೆನ್ ಮ್ಯಾಕ್ಸ್‌ವೆಲ್, ಕ್ಯಾಮೆರಾನ್ ಗ್ರೀನ್, ಮಹಿಪಾಲ್ ಲೊಮ್ರೋರ್, ಅಲ್ಜಾರಿ ಜೋಸೆಫ್, ಕರ್ಣ್ ಶರ್ಮಾ, ಮೊಹಮ್ಮದ್ ಸಿರಾಜ್, ಆಕಾಶ್ ದೀಪ್, ರೀಸ್ ಟೋಪ್ಲಿ, ಟಾಮ್ ಕರ್‍ರಾನ್, ಸ್ವಪ್ನಿಲ್ ಸಿಂಗ್, ವಿಜಯಕುಮಾರ್ ವೈಶಾಕ್, ಲಾಕಿ ಫರ್ಗುಸನ್, ಮಯಾಂಕ್ ಡಾಗರ್, ವಿಲ್ ಜ್ಯಾಕ್ಸ್, ಸುಯಶ್ ಪ್ರಭುದೇಸಾಯಿ, ಅನುಜ್ ರಾವತ್, ಮನೋಜ್ ಭಾಂಡಗೆ, ಯಶ್ ದಯಾಳ್, ಸೌರವ್ ಚೌಹಾಣ್, ರಾಜನ್ ಕುಮಾರ್, ಹಿಮಾಂಶು ಶರ್ಮಾ

ಉದ್ಘಾಟನಾ ಸಮಾರಂಭ: 17ನೇ ಆವೃತ್ತಿಯ ಐಪಿಎಲ್ ಮಹಾ ಸಂಗ್ರಾಮದ ಆರಂಭಕ್ಕೂ ಮುನ್ನಾ ಬಿಸಿಸಿಐ ವರ್ಣರಂಜಿತ ಉದ್ಘಾಟನಾ ಸಮಾರಂಭ ಆಯೋಜಿಸಿದ್ದು, ಬಾಲಿವುಡ್ ನಟರಾದ ಅಕ್ಷಯ್ ಕುಮಾರ್, ಟೈಗರ್ ಶ್ರಾಫ್, ಸಂಗೀತ ದಿಗ್ಗಜ ಎಆರ್ ರೆಹಮಾನ್ ಹಾಗೂ ಸೋನು ನಿಗಮ್ ಅವರು ಅಭಿಮಾನಿಗಳನ್ನು ರಂಜಿಸಲಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ತನ್ನ ಅಧಿಕೃತ ಟ್ವಿಟರ್ ಖಾತೆಯಲ್ಲಿ ಈ ವಿಷಯವನ್ನು ತಿಳಿಸಿದ್ದು, '2024ರ ಟಾಟಾ ಐಪಿಎಲ್ ಟೂರ್ನಿಯ ಉದ್ಘಾಟನಾ ಸಮಾರಂಭದ ನಿಮಿತ್ತ ವೇದಿಕೆ ಸಿದ್ಧವಾಗಿದೆ, ದೀಪಗಳು ಅಂಟಿವೆ, ಸ್ಟಾರ್‌ಗಳು ಮಿಂಚಲು ಸಜ್ಜಾಗಿದ್ದಾರೆ. ಕ್ರಿಕೆಟ್ ಮತ್ತು ಮನರಂಜನೆಯ ಮರೆಯಲಾಗದ ಸಮ್ಮಿಲನಕ್ಕೆ ಸಿದ್ಧರಾಗಿ. ಮಾರ್ಚ್ 22, 6.30ಕ್ಕೆ' ಎಂದು ಟ್ವೀಟ್ ಮಾಡಿದೆ.

ಬಾಲಿವುಡ್ ಹಾಡುಗಳ ಜೊತೆಗೆ ದೇಶಭಕ್ತಿ ಗೀತೆಗಳ ಗಾಯನ: ಎಆರ್ ರೆಹಮಾನ್ ಹಾಗೂ ಸೋನು ನಿಗಮ್ ಅವರು ಉದ್ಘಾಟನಾ ಕಾರ್ಯಕ್ರಮದಲ್ಲಿ ಬಾಲಿವುಡ್ ಹಾಡುಗಳ ಜೊತೆಗೆ ದೇಶಭಕ್ತಿ ಗೀತೆಗಳನ್ನು ಕೂಡ ಹಾಡಲಿದ್ದಾರೆ. ಒಬ್ಬೊಬ್ಬ ಕಲಾವಿದರಿಗೆ ನಿಗದಿತ ಸಮಯವನ್ನು ನೀಡಲಾಗಿದೆ. ಅಕ್ಷಯ್ ಕುಮಾರ್, ಟೈಗರ್ ಶ್ರಾಫ್ ಅವರ ನೃತ್ಯ ಸೇರಿದಂತೆ ಇಡೀ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅರ್ಧ ಗಂಟೆ ಸಮಯ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ

ಸಿಎಸ್‌ಕೆ, ಆರ್‌ಸಿಬಿ ನಡುವೆ ಉದ್ಘಾಟನಾ ಪಂದ್ಯ: ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ 3 ಬಾರಿ ರನ್ನರ್–ಅಪ್ ರಾಯಲ್ ಚಾಲೆಂಜರ್ಸ್ ಬೆಂಗಳೂರು(ಆರ್‌ಸಿಬಿ) ಮಾ.22 ರಂದು ಇಲ್ಲಿನ ಚೆಪಾಕ್ ಮೈದಾನದಲ್ಲಿ ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಸೆಣಸಾಡಲಿವೆ.

ಈ ಬಾರಿಯಾದರೂ ಟ್ರೋಫಿ ಗೆಲ್ಲುವ ತವಕದೊಂದಿಗೆ ಕಣಕ್ಕಿಳಿಯುತ್ತಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸೋಲಿನ ರುಚಿ ಸೋಲಿನ ರುಚಿ ತೋರಿಸಲು ಸನ್ನದ್ಧವಾಗಿದ್ದು, ಆ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡುವ ತವಕದಲ್ಲಿದೆ.

ಸಿಎಸ್‌ಕೆ ನಾಯಕ ಸ್ಥಾನದಿಂದ ಕೆಳಗಿಳಿದ ಧೋನಿ

ಐಪಿಎಲ್‌ನ ಅತ್ಯಂತ ಯಶಸ್ವಿ ತಂಡಗಳಲ್ಲಿ ಒಂದಾದ ಚೆನ್ನೈ ಸೂಪರ್ ಕಿಂಗ್ಸ್‌ನ ನಾಯಕ ಸ್ಥಾನದಿಂದ ಅನುಭವಿ ಆಟಗಾರ ಎಂಎಸ್ ಧೋನಿ ಕೆಳಗಿಳಿದಿದ್ದಾರೆ. ಅವರ ಬದಲಿಗೆ ರುತುರಾಜ್ ಗಾಯಕ್ವಾಡ್ ತಂಡದ ನಾಯಕರಾಗಿ ನೇಮಕವಾಗಿದ್ದಾರೆ. 2024ರ ಟಾಟಾ ಐಪಿಎಲ್ ಆರಂಭಕ್ಕೂ ಮುನ್ನ ಎಂಎಸ್ ಧೋನಿ ಚೆನ್ನೈ ಸೂಪರ್ ಕಿಂಗ್ಸ್ ನಾಯಕತ್ವವನ್ನು ರುತುರಾಜ್ ಗಾಯಕ್ವಾಡ್‌ಗೆ ಹಸ್ತಾಂತರಿಸಿದ್ದಾರೆ. ರುತುರಾಜ್ 2019 ರಿಂದ ಚೆನ್ನೈ ಸೂಪರ್ ಕಿಂಗ್ಸ್‌ನ ಅವಿಭಾಜ್ಯ ಅಂಗವಾಗಿದ್ದಾರೆ ಮತ್ತು ಈ ಅವಧಿಯಲ್ಲಿ ಐಪಿಎಲ್‌ನಲ್ಲಿ 52 ಪಂದ್ಯಗಳನ್ನು ಆಡಿದ್ದಾರೆ. ಮುಂಬರುವ ಋತುವಿನಲ್ಲಿ ಇವರ ನಾಯಕತ್ವದಲ್ಲಿ ಆಡುವುದನ್ನು ತಂಡ ಎದುರು ನೋಡುತ್ತಿದೆ ಎಂದು ಚೆನ್ನೈ ಸೂಪರ್ ಕಿಂಗ್ಸ್ ತಂಡ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ. ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕತ್ವದಿಂದ ಎಂಎಸ್ ಧೋನಿ ಕೆಳಗಿಳಿಯುತ್ತಿರುವುದು ಇದು 2ನೇ ಬಾರಿ.



ಗೋದಾಮಿನಿಂದ ಮಸ್ಟರಿಂಗ್ ಸೆಂಟರ್‌ಗಳಿಗೆ ಇವಿಎಂ ಶಿಫ್ಟ್



ಮೈಸೂರಿನ ಬೇಡನ್ ಪೋವೆಲ್ ಶಾಲೆಯಲ್ಲಿ ಇವಿಎಂಗಳನ್ನಿರಿಸಲು ನಡೆಸಿದ ಸಿದ್ಧತೆಯನ್ನು ಪಾಲಿಕೆ ಆಯುಕ್ತರಾದ ಡಾ.ಎನ್ ಎನ್.ಮಧು ಪರಿಶೀಲಿಸಿದರು.

ಮೈಸೂರು,ಮಾ21(ಆರ್‌ಕೆ)– ಏಪ್ರಿಲ್ 26ರಂದು ರಾಜ್ಯದಲ್ಲಿ ನಡೆಯಲಿರುವ ಮೊದಲ ಹಂತದ ಲೋಕಸಭಾ ಚುನಾವಣೆಗೆ ಜಿಲ್ಲಾಡಳಿತ ಸಿದ್ಧತೆ ನಡೆಸುತ್ತಿದೆ.

ಮೈಸೂರಿನ ಸಿದ್ದಾರ್ಥನಗರ ಬಳಿ ಹೊಸ ಜಿಲ್ಲಾಧಿಕಾರಿಗಳ ಕಚೇರಿ ಸಮುಚ್ಛಯದ ಪಕ್ಕದಲ್ಲಿರುವ ಗೋದಾಮಿನಲ್ಲಿ ಸಂಗ್ರಹಿಸಲಾಗಿದ್ದ ಇವಿಎಂ ಮತ್ತು ವಿವಿ.ಪ್ಯಾಟ್‌ಗಳನ್ನು ಹಂಚಿಕೆಯಾಗಿರುವ ವಿಧಾನ ಸಭಾ ಕ್ಷೇತ್ರವಾರು ಚುನಾವಣಾಧಿಕಾರಿಗಳಿಗೆ ಇಂದು ಹಂಚಿಕೆ ಮಾಡಲಾಯಿತು.

ನೋಡಲ್ ಅಧಿಕಾರಿಗಳಿಂದ ಪಡೆದ ಇವಿಎಂ(ಎಲೆಕ್ಟ್ರಾನಿಕ್ ವೋಟಿಂಗ್ ಮಷಿನ್) ಹಾಗೂ ವಿವಿಪ್ಯಾಟ್(ವೋಟರ್ ವೆರಿಫೈಡ್ ಪೇಪರ್ ಆಡಿಟ್ ಟ್ರಯಲ್), ಕಂಟ್ರೋಲ್ ಯುನಿಟ್ ಹಾಗೂ ಇನ್ನಿತರ ಚುನಾವಣಾ ಸಲಕರಣೆಗಳನ್ನು ನಿಯೋಜಿತ ಮಸ್ಟರಿಂಗ್ ಕೇಂದ್ರಗಳಿಗೆ ಸ್ಥಳಾಂತರಿಸಲಾಯಿತು. ಪ್ರತೀ ವಿಧಾನಸಭಾ ಕ್ಷೇತ್ರಕ್ಕೊಂದರಂತೆ ಮಸ್ಟರಿಂಗ್ ಸೆಂಟರ್ ಸ್ಥಾಪಿಸಿ, ಅಲ್ಲಿ ಇವಿಎಂ, ವಿವಿಪ್ಯಾಟ್‌ಗಳನ್ನಿರಿಸಲಾಗುವುದಲ್ಲದೆ, ಏಪ್ರಿಲ್ 25ರಂದು ಬೆಳಿಗ್ಗೆ ಮತಗಟ್ಟೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ಪೊಲೀಸ್ ಸಿಬ್ಬಂದಿಗೆ ಅವುಗಳನ್ನು ಹಸ್ತಾಂತರಿಸಿ ಕಳುಹಿಸಲಾಗುವುದು. ಮೈಸೂರಿನ ಹಳೇ ಡಿಸಿ ಆಫೀಸ್ ಹಿಂಭಾಗವಿರುವ ಬೇಡನ್ ಪೊವೆಲ್ ಶಾಲೆಯ ಮಸ್ಟರಿಂಗ್ ಸೆಂಟರ್‌ಗೆ ಮೈಸೂರು ಮಹಾನಗರಪಾಲಿಕೆ ಆಯುಕ್ತರಾದ ಡಾ.ಎನ್‌ಎನ್.ಮಧು, ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ ಅವರು ಭೇಟಿ ನೀಡಿ ಕೈಗೊಂಡಿರುವ ಸಿದ್ಧತೆ ಪರಿಶೀಲಿಸಿದರು. ನಾಳೆ (ಮಾ.22)ಮಸ್ಟರಿಂಗ್ ಕೇಂದ್ರಗಳಲ್ಲಿ ಸಿದ್ಧತೆ ಪೂರ್ಣಗೊಳ್ಳಲಿದ್ದು, ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಮಾಸ್ಟರ್ ಮೈನರ್‌ಗಳು ಕೇಂದ್ರಗಳಲ್ಲಿ ತರಬೇತಿ ನೀಡಲಿದ್ದಾರೆ.

ಬಿಜೆಪಿಯಲ್ಲಿ ತಿರಸ್ಕೃತರು... ಕಾಂಗ್ರೆಸ್‌ನಲ್ಲಿ ಪುರಸ್ಕೃತರಾಗುತ್ತಾರೆ...!

ಕಾಂಗ್ರೆಸ್ ಮುಳುಗುತ್ತಿರುವ ಹಡಗು, ಅಭ್ಯರ್ಥಿಗಳಿಲ್ಲ, ಜನ ಬೆಂಬಲವಿಲ್ಲ: ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವಥ್‌ನಾರಾಯಣ್ ಗೇಲಿ

● ಬಿಜೆಪಿಯಲ್ಲಿ ಓವರ್ ಫ್ಲೋ ಆಗಿದೆ ● ಟಿಕೆಟ್ ವಂಚಿತರು ತಾಳ್ಮೆ ವಹಿಸಬೇಕು ● ಸುಮಲತಾ ವರಿಷ್ಠರ ತೀರ್ಮಾನಕ್ಕೆ ಬದ್ಧರಾಗಿದ್ದಾರೆ

ಮೈಸೂರು, ಮಾ.21(ಬಿಎಲ್‌ಯು)– ಮುಳುಗುವ ಹಡಗಿನಂತಿರುವ ಕಾಂಗ್ರೆಸ್‌ಗೆ ಅಭ್ಯರ್ಥಿಗಳು ಇಲ್ಲ, ಜನರ ಬೆಂಬಲವೂ ಇಲ್ಲ ಎಂದು ಮಾಜಿ ಉಪ ಮುಖ್ಯಮಂತ್ರಿ ಹಾಗೂ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಉಸ್ತುವಾರಿ ಡಾ.ಅಶ್ವಥ್‌ನಾರಾಯಣ್ ವ್ಯಂಗ್ಯವಾಡಿದರು.

ಮೈಸೂರಿನ ಚಾಮುಂಡಿಬೆಟ್ಟದ ಪಾದದ ಬಳಿ ಇರುವ ಸುತ್ತೂರು ಶಾಖಾ ಮಠದಲ್ಲಿ ಗುರುವಾರ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಭೇಟಿ ಮಾಡಿದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ವೀಕ್ ಸಿಎಂ, ವೀಕ್ ಪಾರ್ಟಿಯಾಗಿರುವ ಕಾಂಗ್ರೆಸ್ ಸರ್ಕಾರದಲ್ಲಿ ಸೌಂಡ್ ಇಲ್ಲ. ಬದಲಿಗೆ ಬರೀ ಭ್ರಷ್ಟಾಚಾರ, ಲೂಟಿ ಮಾತ್ರ ನಡೆಯುತ್ತಿದೆ ಎಂದು ಆರೋಪಿಸಿದರು.

ಕೆಲವು ರಾಜಕೀಯ ಬೆಳವಣಿಗೆಯಲ್ಲಿ ಬಿಜೆಪಿಯಲ್ಲಿ ತಿರಸ್ಕಾರಗೊಂಡವರು ಕಾಂಗ್ರೆಸ್‌ನಲ್ಲಿ ಪುರಸ್ಕಾರಗೊಳ್ಳಬಹುದು. ಆದರೆ ಕಾಂಗ್ರೆಸ್‌ನಲ್ಲಿ ತಿರಸ್ಕಾರಗೊಂಡವರು ಬಿಜೆಪಿಯಲ್ಲಿ ಪುರಸ್ಕಾರಗೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಈಗಾಗಲೇ ಬಿಜೆಪಿಯಲ್ಲಿ ಓವರ್ ಫ್ಲೋ ಆಗಿದೆ. ಇದರಿಂದ ಬಿಜೆಪಿ ಬಿಟ್ಟು ಯಾರು ಬರುತ್ತಾರೋ ಅವರನ್ನು ಸೇರಿಸಿಕೊಳ್ಳಲು ಕಾಂಗ್ರೆಸ್‌ನವರು ಬಾಗಿಲಲ್ಲಿ ನಿಂತು ಕಾಯುತ್ತಿದ್ದಾರೆ ಎಂದು ಡಾ.ಅಶ್ವಥ್ ನಾರಾಯಣ್ ಲೇವಡಿ ಮಾಡಿದರು.



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಗುರುವಾರ ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ್ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಭೇಟಿ ಮಾಡಿ, ಆಶೀರ್ವಾದ ಪಡೆದರು.

ಟಿಕೆಟ್ ಸಿಗದ ಕಾರಣ ರಾಜ್ಯದ ಮೂರ್ನಾಲ್ಕು ಕ್ಷೇತ್ರಗಳಲ್ಲಿ ಗೊಂದಲ ಇರಬಹುದು. ಇಂತಹ ಸಂದರ್ಭದಲ್ಲಿ ಅಪಸ್ವರ, ನೋವು, ಬೇಜಾರು ಎಲ್ಲವೂ ಸಹಜ. ಆದರೆ ಯಾರೂ ದುಡುಕಬಾರದು, ಪಕ್ಷ ತಾಯಿ ಇದ್ದಂತೆ. ತಾಯಿಯಂತೆ ಪಕ್ಷವನ್ನು ಪೂಜಿಸಿ, ಗೌರವಿಸಬೇಕು. ಯಾರೂ ಕೋಪ ತಾಪ ಪ್ರದರ್ಶಿಸಬಾರದು, ಆವೇಶಕ್ಕೆ ಒಳಗಾಗಬಾರದು ಎಂದು ಸಲಹೆ ನೀಡಿದರು.

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ವಿಜಯೇಂದ್ರ ಅವರಿಗೆ ಸುಲಭವಾಗಿ ದಕ್ಕಿಲ್ಲ. ಅವರು ಕೂಡ ಬಹಳಷ್ಟು ಶ್ರಮಪಟ್ಟಿದ್ದಾರೆ. ಕಳೆದ ಬಾರಿ ವರುಣ ವಿಧಾನಸಭಾ ಕ್ಷೇತ್ರದಲ್ಲಿ ಟಿಕೆಟ್ ಕೈ ತಪ್ಪಿತ್ತು. ತರುವಾಯ ಅವಕಾಶಕ್ಕಾಗಿ ವಿಜಯೇಂದ್ರ ಪ್ರಯತ್ನಪಡುತ್ತಿದ್ದರು. ಇದರ ಪರಿಣಾಮ ಈಗ ರಾಜ್ಯಾಧ್ಯಕ್ಷ ಸ್ಥಾನ ಸಿಕ್ಕಿದೆ. ಇದೇ ರೀತಿ ಆಕಾಂಕ್ಷಿಗಳು ತಾಳ್ಮೆಯಿಂದ ಕಾಯಬೇಕು ಎಂದು ಸಲಹೆ ನೀಡಿದರು.

ಮಂಡ್ಯ ಟಿಕೆಟ್ ವಿಚಾರವಾಗಿ ಬಿಜೆಪಿ ಮತ್ತು ಜೆಡಿಎಸ್ ನಡುವೆ ಯಾವುದೇ ಕಗ್ಗಂಟು ಉಂಟಾಗಿಲ್ಲ. ಬಿಜೆಪಿ ವರಿಷ್ಠರು ಏನೇ ತೀರ್ಮಾನ ಕೈಗೊಂಡರೂ ಅದಕ್ಕೆ ಬದ್ಧ ಎಂದು ಸಂಸದೆ ಸುಮಲತಾ ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮೈತ್ರಿ ಪರವಾಗಿದ್ದಾರೆ. ಎರಡು ಪಕ್ಷಗಳು ಜೊತೆಯಾಗಿ ಸಾಗುತ್ತವೆ ಎಂದು ಒಗ್ಗಟ್ಟಿಗೆ ಬೆಂಬಲ ಸೂಚಿಸಿದ್ದಾರೆ. ಹಾಗಾಗಿ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂದು ಹೇಳಿದರು.

ಒಂದು ಕೋಟಿ ರೂಪಾಯಿ ಮೇಲ್ಪಟ್ಟು ಆದಾಯವಿರುವ ದೇವಸ್ಥಾನಗಳ ಹಣವನ್ನು ಇತರೆ ದೇವಸ್ಥಾನಗಳಿಗೆ ಬಳಕೆ ಮಾಡಿಕೊಳ್ಳುವ ಧಾರ್ಮಿಕ ದತ್ತಿ ಕಾಯ್ದೆಯನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ವಾಪಸು ಕಳುಹಿಸಿರುವುದನ್ನು ಇದೇ ವೇಳೆ ಸಮರ್ಥನೆ ಮಾಡಿಕೊಂಡ ಡಿಸಿಎಂ ಡಾ.ಅಶ್ವಥ್ ನಾರಾಯಣ್, ಆಯಾ ದೇವಸ್ಥಾನಗಳ ಆದಾಯ ಆದೇ ದೇವಸ್ಥಾನಗಳಿಗೆ ಬಳಕೆ ಆಗಬೇಕು ಎಂದು ಹೇಳಿದರು.

ಉಳಿದ ದೇವಸ್ಥಾನಗಳ ನಿರ್ವಹಣೆಗೆ ಸರ್ಕಾರ ಹಣ ನೀಡಲಿ. ಅದು ಬಿಟ್ಟು ಬೇರೆ ದೇವಸ್ಥಾನದ ಆದಾಯ ಪಡೆಯುವುದು ಸರಿಯಲ್ಲ. ಈ ಸಂಬಂಧ ರಾಜ್ಯಪಾಲರು ಒಳ್ಳೆಯ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಡಾ.ಅಶ್ವಥ್ ನಾರಾಯಣ್ ಅಭಿಪ್ರಾಯಪಟ್ಟರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದ ನಂತರ ಡಾ.ಅಶ್ವಥ್‌ನಾರಾಯಣ್ ಅರ್ಧ ಗಂಟೆ ಕಾಲ ಶ್ರೀಗಳ ಜೊತೆ ಮಾತುಕತೆ ನಡೆಸಿದರು.

ಬಿಜೆಪಿ ಕೇಂದ್ರ ಚುನಾವಣಾ ಸಮಿತಿ ಸದಸ್ಯರಾಗಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಟಿಕೆಟ್ ಹಂಚಿಕೆಯಲ್ಲಿ ಮೇಲ್ಗೈ ಸಾಧಿಸಿದ್ದಾರೆ. ಬಿಜೆಪಿ ಒಂದು ಕುಟುಂಬದ ಹಿಡಿತದಲ್ಲಿದೆ ಎಂಬ ಈಶ್ವರಪ್ಪ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಡಾ. ಅಶ್ವಥ್ ನಾರಾಯಣ್, ಚುನಾವಣಾ ಸಮಿತಿಯಲ್ಲಿ ಸೂಕ್ತ ಅಭ್ಯರ್ಥಿ ಆಯ್ಕೆ ಮಾಡಲಾಗುತ್ತದೆ. ಒಂದು ಕುಟುಂಬದ ಹಿಡಿತದಲ್ಲಿ ಪಕ್ಷವಿದೆ ಎಂಬ ಆಪಾದನೆ ಸತ್ಯಕ್ಕೆ ದೂರ ಎಂದರು.

ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಬೆಳದಿಂಗಳ ಸಂಗೀತ



ಸರ್ಫರಾಜ್ ಖಾನ್ ಫರಾಜ್ ಖಾನ್ ಸುಮಿತ್ ನಾಯಕ್ ಹಿರೇಮಠ

ಮೈಸೂರು,ಮಾ.21–ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಮಾ.25ರಂದು ಸೋಮವಾರ ಸಂಜೆ 6 ಗಂಟೆಗೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–265ರ ಅಂಗವಾಗಿ ಉಸ್ತಾದ್ ಸರ್ಫರಾಜ್ ಖಾನ್ ಮತ್ತು ಉಸ್ತಾದ್ ಫರಾಜ್ ಖಾನ್ ಅವರಿಂದ ದ್ವಂದ್ವ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಉಸ್ತಾದ್ ಸರ್ಫರಾಜ್ ಖಾನ್ ಮತ್ತು ಉಸ್ತಾದ್ ಫರಾಜ್ ಖಾನ್‌ರವರು ಸಂಗೀತದ ಕೌಟುಂಬಿಕ ಹಿನ್ನೆಲೆಯುಳ್ಳವರು. ಸಾರಂಗಿ ನುಡಿಸುವುದರಲ್ಲಿ ನಿಷ್ಣಾತರಾಗಿದ್ದ ಇವರ ತಾತ ಉಸ್ತಾದ್ ಅಬ್ದುಲ್ ಖಾದರ್ ಖಾನ್‌ರವರು ಧಾರವಾಡ ಆಕಾಶವಾಣಿಯಲ್ಲಿದ್ದರು. ಮುತ್ತಾತ ಉಸ್ತಾದ್ ಷೇಕ್ ಅಬ್ದುಲ್ಲಾ ಖಾನ್‌ರವರು ಸಾರಂಗಿ ವಾದನದಲ್ಲಿ ಪರಿಣತರಾಗಿದ್ದರಲ್ಲದೆ, ಮೈಸೂರು ಅರಮನೆ ಮತ್ತು ಹೈದರಾಬಾದ್ ನವಾಬರ ಆಸ್ಥಾನಗಳಲ್ಲಿ ವಿದ್ವಾಂಸರಾಗಿದ್ದರು. ತಂದೆ ಉಸ್ತಾದ್ ಫಯ್ಯಾಜ್ ಖಾನ್‌ರವರು ಉತ್ತಮ ಹಿಂದೂಸ್ತಾನಿ ಸಂಗೀತಗಾರರು ಮತ್ತು ಸಾರಂಗಿ ಕಲಾವಿದರು; ಅಂತಾರಾಷ್ಟ್ರೀಯ ಮಟ್ಟದ ಖ್ಯಾತರು.

ಸರ್ಫರಾಜ್ ಮತ್ತು ಫರಾಜ್ ಇಬ್ಬರೂ ತಮ್ಮ ತಂದೆಯವರ ಬಳಿ ಚಿಕ್ಕ ವಯಸ್ಸಿನಿಂದಲೇ ಸಂಗೀತಾಭ್ಯಾಸವನ್ನು ಪ್ರಾರಂಭಿಸಿದರು. ಪದ್ಮವಿಭೂಷಣ ಪಂ.ರಾಮ್ ನಾರಾಯಣ್ ಅವರಲ್ಲಿ ಸರ್ಫರಾಜ್ 2011ರಿಂದ ಸಾರಂಗಿಯನ್ನು ಕಲಿಯುತ್ತಿದ್ದಾರೆ. ಡಾ.ರಾಜೀವ್ ತಾರಾನಾಥ್ ಬಳಿ ಫರಾಜ್‌ರವರು ಸರೋದ್ ವಾದನ ಕಲಿಯುತ್ತಿದ್ದಾರೆ.

ಹಾರ್ಮೋನಿಯಂ ಸಹಕಾರ ನೀಡಲಿರುವ ಪಂ. ವೀರಭದ್ರಯ್ಯ ಹಿರೇಮಠ ಅವರು ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದ ಡಾ.ಪಂ.ಪುಟ್ಟರಾಜ ಗವಾಯಿಗಳ ಶಿಷ್ಯರು. ಗುರುಕುಲ ಪದ್ಧತಿಯಲ್ಲಿ ಸಂಗೀತವನ್ನು ಅಭ್ಯಾಸ ಮಾಡಿರುವರು. ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯ ಮಂಡಲದ 'ಸಂಗೀತ ವಿಶಾರದ' ಪದವೀಧರರು. ಅತ್ಯುತ್ತಮ ಹಾರ್ಮೋನಿಯಂ ವಾದಕರು. ಗದುಗಿನ ಗಾನಗಂಧರ್ವ ಕಲಾ ಟ್ರಸ್ಟ್ ಇವರಿಗೆ 'ಗಾನಶ್ರೀ' ಬಿರುದನ್ನು ನೀಡಿ ಸನ್ಮಾನಿಸಿದೆ. ಮೈಸೂರಿನಲ್ಲಿ ಸ್ವರಸಂಕುಲ ಸಂಗೀತ ಶಾಲೆಯನ್ನು ಪ್ರಾರಂಭಿಸಿ ಹಿಂದೂಸ್ತಾನಿ ಕಲಾವಿದರುಗಳನ್ನು ರೂಪಿಸುತ್ತಿದ್ದಾರೆ; ಹಿಂದೂಸ್ತಾನಿ ಸಂಗೀತದ ಪ್ರಸಾರಕ್ಕಾಗಿ ಅಹರ್ನಿಶಿ ಶ್ರಮಿಸುತ್ತಿದ್ದಾರೆ.

ತಬಲ ವಾದನ ಸಾಥ್ ನೀಡಲಿರುವ ಪಂ.ಸುಮಿತ್ ನಾಯಕ್ ಕೇರಳ ಮೂಲದವರು. ತಂದೆ ಶ್ರೀ ಸುಧಾಕರ್ ನಾಯಕ್ ಮತ್ತು ತಾಯಿ ಶ್ರೀಮತಿ ಮೀರಾ ಅವರಿಂದ ಸಂಗೀತದ ಪ್ರಾರಂಭಿಕ ಶಿಕ್ಷಣ. ಕೊಚ್ಚಿಯ ವಿದ್ವಾನ್ ನವೀನ್ ಪೈಯವರಿಂದ ತಬಲ ವಾದನದ ಆರಂಭಿಕ ಕಲಿಕೆ. ಬಳಿಕ ಬೆಂಗಳೂರಿನ ಹಿರಿಯ ತಬಲಾ ಕಲಾವಿದರಾದ ಡಾ. ಉದಯರಾಜ್ ಕರ್ಪೂರ್‌ರವರಲ್ಲಿ ಮುಂದುವರಿದ ತಾಲೀಮು. ಏಕವ್ಯಕ್ತಿ ಕಾರ್ಯಕ್ರಮಗಳ ಜೊತೆಗೆ ಹಲವಾರು ಜನ ಹಿರಿಯ ವಿದ್ವಾಂಸರಿಗೆ ತಬಲ ಸಹಕಾರ ನೀಡಿರುವ ಅನುಭವ. ಯೂರೋಪ್ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ನಾದಯಾನ ತಮಿಳುನಾಡಿನ ಅಣ್ಣಾ ವಿಶ್ವವಿದ್ಯಾನಿಲಯದ ಬಿಇ (ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್) ಪದವೀಧರರು. ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಿಂದ ತಬಲದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಬೆಂಗಳೂರಲ್ಲಿ ಮೆಟ್ರೋ ಹಳಿ ಮೇಲೆ ಹಾರಿ ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು, ಮಾ.21–ಮೆಟ್ರೋ ಹಳಿ ಮೇಲೆ ಜಿಗಿದು ವಿದ್ಯಾರ್ಥಿಯೋರ್ವ ಆತ್ಮಹತ್ಯೆ ಮಾಡಿಕೊಂಡಿರುವ ಆತಂಕಕಾರಿ ಘಟನೆ ಗುರುವಾರ ನಡೆದಿದೆ. ಮಧ್ಯಾಹ್ನ 2.10 ನಿಮಿಷದಲ್ಲಿ ಅತ್ತಿಗುಪ್ಪೆ ಮೆಟ್ರೋ ನಿಲ್ದಾಣದ ಬಳಿ ಈ ಘಟನೆ ನಡೆದಿದ್ದು, ಮೆಟ್ರೋ ರೈಲಿನ ಅಡಿಯಲ್ಲಿ ಸಿಲುಕಿದ್ದ ಶವವನ್ನು ಹರಸಾಹಸದ ಬಳಿಕ ಹೊರಗೆ ತರಲಾಯಿತು.

ಮೃತ ವಿದ್ಯಾರ್ಥಿಯನ್ನು ನ್ಯಾಷನಲ್ ಲಾ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿ ಧ್ರುವ್ ಎಂದು ಗುರುತಿಸಲಾಗಿದೆ. ಆತನ ರುಂಡ, ಮುಂಡ ಬೇರ್ಪಟ್ಟಿದ್ದು, ದೇಹ ಛಿದ್ರಗೊಂಡಿತ್ತು. ಆದರೆ, ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ ಎಂದು ಮೆಟ್ರೋ ಪಿಆರ್‌ಒ ಯಶವಂತ್ ಚೌಹಾಣ್ ಮಾಹಿತಿ ನೀಡಿದ್ದಾರೆ. ಮೊಬೈಲ್‌ನಲ್ಲಿ ಮಾತನಾಡಿಕೊಂಡೆ ಹಳಿ ಮೇಲೆ ಜಿಗಿದು ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿ ರುವುದಾಗಿ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಇನ್ನು ಘಟನೆಯಿಂದಾಗಿ ವೈಟ್‌ಫೀಲ್ಡ್‌ನಿಂದ ಚಲ್ಲಘಟ್ಟ ಮಾರ್ಗದಲ್ಲಿ ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು. ಕೆಲಕಾಲ ಮಾಗಡಿ ರಸ್ತೆ ಮತ್ತು ವೈಟ್‌ಫೀಲ್ಡ್ ನಡುವಣ ಮಾತ್ರ ರೈಲು ಸಂಚಾರವಿತ್ತು. ಮಾಗಡಿ ರಸ್ತೆ ಮತ್ತು ಚಲ್ಲಘಟ್ಟ ನಡುವೆ ತಾತ್ಕಾಲಿಕವಾಗಿ ರೈಲು ಸಂಚಾರ ಸ್ಥಗಿತವಾಗಿತ್ತು. ಬಳಿಕ ಈ ಮಾರ್ಗದಲ್ಲಿ ರೈಲು ಸಂಚಾರ ಪುನರ್ ಆರಂಭವಾಗಿದೆ.



ಚಂದ್ರ ಲೇಔಟ್ ಪೊಲೀಸರು ಸ್ಥಳಕ್ಕೆ ಧಾವಿಸಿದ್ದು, ಪರಿಶೀಲನೆ ನಡೆಸುತ್ತಿದ್ದಾರೆ. ಬಿಎಂಆರ್‌ಸಿಎಲ್ ಹಾಗೂ ವಿಧಿ–ವಿಜ್ಞಾನ ಪ್ರಯೋಗಾಲಯ ಅಧಿಕಾರಿಗಳು ಕೂಡಾ ಸ್ಥಳಕ್ಕೆ ಭೇಟಿ ನೀಡಿದ್ದು, ಮಹಜರು ನಡೆಸುತ್ತಿರುವುದರಿಂದ ಮಾಗಡಿ ರಸ್ತೆಯಿಂದ ಚಲ್ಲಘಟ್ಟ ನಡುವಿನ ಮಾರ್ಗದಲ್ಲಿ ತಾತ್ಕಾಲಿಕವಾಗಿ ರೈಲ್ವೆ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ತಿಳಿದುಬಂದಿದೆ.



ದ್ವೇಷ ಭಾಷಣ: ಸಚಿವೆ ಶೋಭಾ ಕರಂದ್ಲಾಜೆ, ಸಂಸದ ತೇಜಸ್ವಿ ಸೂರ್ಯ ವಿರುದ್ಧ ಕೇಸ್

ಬೆಂಗಳೂರು, ಮಾ.21– ಚುನಾವಣಾಧಿಕಾರಿಗಳ ದೂರಿನ ಮೇರೆಗೆ ಬೆಂಗಳೂರಿನ ಕಾಟನ್‌ಪೇಟೆ ಪೊಲೀಸರು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧ ದ್ವೇಷಪೂರಿತ ಭಾಷಣ ಮಾಡಿದ ಆರೋಪದಡಿ ಪ್ರಕರಣ ದಾಖಲಿಸಿದ್ದಾರೆ.

ಈ ನಡುವೆ ಬೆಂಗಳೂರು ದಕ್ಷಿಣ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರ ವಿರುದ್ಧವೂ ಹಲಸೂರು ಗೇಟ್ ಪೊಲೀಸರು ದ್ವೇಷ ಭಾಷಣದ ಆರೋಪದಡಿ ಪ್ರಕರಣ ದಾಖಲಿಸಿದ್ದಾರೆ.

ಮಾರ್ಚ್ 1ರಂದು ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ನಡೆದ ಸ್ಫೋಟಕ್ಕೆ ತಮಿಳುನಾಡಿನ ವ್ಯಕ್ತಿಯೊಬ್ಬರು ಕಾರಣ ಎಂದು ಆರೋಪಿಸಿ ಶೋಭಾ ಕರಂದ್ಲಾಜೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಡಿಎಂಕೆ ಮನವಿ ಮಾಡಿತ್ತು. ಬೆಂಗಳೂರು ಉತ್ತರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕರಂದ್ಲಾಜೆ, ತಮ್ಮ ಹೇಳಿಕೆಯನ್ನು ಹಿಂತೆಗೆದುಕೊಂಡಿದ್ದಾರೆ ಮತ್ತು ಅದಕ್ಕಾಗಿ ಕ್ಷಮೆಯಾಚಿಸಿದ್ದಾರೆ. ಆದರೆ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ ಡಿಎಂಕೆ ನೀಡಿದ ದೂರಿನ ಕುರಿತು ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಂದ್ರ ಚುನಾವಣಾ ಆಯೋಗ ಬುಧವಾರ ಕರ್ನಾಟಕ ಮುಖ್ಯ ಚುನಾವಣಾ ಅಧಿಕಾರಿ(ಸಿಇಒ)ಗೆ ಸೂಚಿಸಿತ್ತು.



ಗುರುವಾರ, ಚುನಾವಣಾ ಅಧಿಕಾರಿಗಳು ನೀಡಿದ ದೂರಿನ ಆಧಾರದ ಮೇಲೆ, ಕಾಟನ್‌ಪೇಟೆ ಪೊಲೀಸರು ಕೇಂದ್ರ ಸಚಿವೆ ವಿರುದ್ಧ ಧರ್ಮ, ಜನಾಂಗ, ಜಾತಿ ಆಧಾರದ ಮೇಲೆ ಜನರ ನಡುವೆ ದ್ವೇಷ ಉತ್ತೇಜಿಸಿದ ಆರೋಪದ ಮೇಲೆ ಸೆಕ್ಷನ್ 123 (3ಎ), 123 (3), ಮತ್ತು 125 ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಕಳೆದ ಭಾನುವಾರ ನಗರತ್‌ಪೇಟೆಯಲ್ಲಿ 'ಅಜಾನ್' ಸಂದರ್ಭದಲ್ಲಿ 'ಹನುಮಾನ್ ಚಾಲೀಸಾ' ಹಾಕಿದ್ದಕ್ಕಾಗಿ ಅಂಗಡಿಯವನ ಮೇಲೆ ಹಲ್ಲೆ ನಡೆಸಿದ್ದನ್ನು ಖಂಡಿಸಿ ನಡೆದ ಪ್ರತಿಭಟನೆಯಲ್ಲಿ ದ್ವೇಷ ಭಾಷಣ ಮಾಡಿದ ಆರೋಪದ ಮೇಲೆ ತೇಜಸ್ವಿ ಸೂರ್ಯ ವಿರುದ್ಧ ಹಲಸೂರು ಗೇಟ್ ಪೊಲೀಸರು ಕೇಸ್ ದಾಖಲಿಸಿದ್ದಾರೆ.

ಮಹಿಳೆಯರು ಕಾನೂನು ರಕ್ಷಣೆ ಪಡೆಯಬೇಕು

ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಕೇಂದ್ರದ ಪ್ರಸೂತಿ ತಜ್ಞೆ, ಡಾ.ವಿದ್ಯಾ ನಾರಾಯಣ್ ಸಲಹೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್ ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಜೆಎಸ್ ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಕೇಂದ್ರ ಪ್ರಸೂತಿ ತಜ್ಞೆ, ಹಾಗೂ ಸ್ತ್ರೀರೋಗ ವಿಭಾಗದ ಮುಖ್ಯಸ್ಥೆ ಡಾ.ವಿದ್ಯಾ ನಾರಾಯಣ್ ಉದ್ಘಾಟಿಸಿದರು.

ಮೈಸೂರು, ಮಾ.21(ಎಂಟಿವೈ)– ಮಹಿಳೆಯರು ಬೆದರಿಕೆ ಹಾಗೂ ದೌರ್ಜನ್ಯಕ್ಕೆ ಹೆದರದೆ ಕಾನೂನಿನ ಮೂಲಕ ರಕ್ಷಣೆ ಪಡೆದುಕೊಳ್ಳಲು ಮುಂದಾಗಬೇಕು ಎಂದು ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ಕೇಂದ್ರದ ಪ್ರಸೂತಿ ತಜ್ಞೆ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥೆ ಡಾ. ವಿದ್ಯಾ ನಾರಾಯಣ್ ಸಲಹೆ ನೀಡಿದ್ದಾರೆ.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಉದ್ಯೋಗ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನಡೆದರೆ, ಅದನ್ನು ಮಹಿಳೆಯರು ಧೈರ್ಯವಾಗಿ ಪ್ರಶ್ನಿಸಿ ದೂರು ನೀಡಬೇಕು. ಇಲ್ಲದಿದ್ದರೆ ಪ್ರಕರಣಗಳ ಸಂಖ್ಯೆ ಹೆಚ್ಚುತ್ತವೆ. 2013ರಲ್ಲಿ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆ, ನಿಷೇಧ ಮತ್ತು ಪರಿಹಾರ ಕಾಯ್ದೆ ಜಾರಿಗೆ ಬಂದಿದೆ. ಈ ಕಾಯ್ದೆಯ ಬಗ್ಗೆ ಎಲ್ಲರಿಗೂ ಮನವರಿಕೆ ಮಾಡಿಕೊಡಬೇಕು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುವ ಎಲ್ಲಾ ಸಂಸ್ಥೆಗಳಲ್ಲೂ ಆಂತರಿಕ ದೂರು ಸಮಿತಿ ರಚಿಸಬೇಕು. ಕಿರುಕುಳ, ದೌರ್ಜನ್ಯ ನಡೆದರೆ ಆಂತರಿಕ ದೂರು ಸಮಿತಿ ಗಮನಕ್ಕೆ ತರಬೇಕು. ಇಲ್ಲದಿದ್ದರೆ ಮಹಿಳಾ ಘಟಕ ಅಥವಾ ಪೊಲೀಸ್ ಠಾಣೆಗೆ ದೂರು ನೀಡಬೇಕು ಎಂದು ತಿಳಿಸಿದರು.

ದೂರು ನೀಡದೇ ಇದ್ದರೆ ಆರೋಪಿಯನ್ನು ಬೆಂಬಲಿಸಿದಂತಾಗುತ್ತದೆ. ದೌರ್ಜನ್ಯ ಮುಂದುವರಿಯುತ್ತದೆ. ಸಂತ್ರಸ್ತರು ಹೆಚ್ಚಾಗುತ್ತಲೇ ಹೋಗುತ್ತಾರೆ. ಅದರಿಂದ ಉದ್ಯೋಗ ಸ್ನೇಹಿ ವಾತಾವರಣ ನಿರ್ಮಾಣವಾಗದು. ಮಹಿಳಾ ಸಬಲೀಕರಣವೂ ಅಸಾಧ್ಯ. ಎರಡು ದಶಕದ ಹಿಂದೆಯೇ ವಿಶಾಖ ಮಾರ್ಗದರ್ಶಿ ಸೂತ್ರವನ್ನು ಸುಪ್ರೀಂ ಕೋರ್ಟ್ ರೂಪಿಸಿದೆ. ಅದರಿಂದ ದೇಶದಲ್ಲಿ ಮಹಿಳೆಯರ ಹಕ್ಕುಗಳ ರಕ್ಷಣೆ ಸಾಧ್ಯವಾಗಿದೆ. ಆದರೂ, ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿರುವುದು ವಿಪರ್ಯಾಸ. ಮಹಿಳೆಯ ಮೇಲೆ ದೌರ್ಜನ್ಯ ನಿರಂತರವಾಗಿ ನಡೆಯುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಪ್ರಕರಣಗಳಲ್ಲಿ ಶೇ.52ರಷ್ಟು ದೂರು ದಾಖಲಾಗುವುದೇ ಇಲ್ಲ. ಕಿರುಕುಳ ಪ್ರಕರಣಗಳಲ್ಲಿ ಶೇ.80ರಷ್ಟು ಸಂತ್ರಸ್ತರು ಬಡವರೇ ಆಗಿರುತ್ತಾರೆ. ಮಹಿಳೆಯರ ಹಕ್ಕುಗಳ ರಕ್ಷಣೆಗೆ ಹೋರಾಟವನ್ನು ನಡೆಸಬೇಕು ಎಂದು ತಿಳಿಸಿದರು.

ಮಹಿಳೆಯರು ತಮ್ಮ ಮೇಲೆ ನಡೆಯುವ ದೌರ್ಜನ್ಯ ತಡೆಗಟ್ಟಬೇಕಾದರೆ, ಸಂಘಟಿತರಾಗಬೇಕು. ಎಲ್ಲಾ ಕ್ಷೇತ್ರಗಳಲ್ಲೂ ಸಬಲರಾಗಬೇಕು. ಆ ಮೂಲಕ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತಬೇಕು. ಆಗ ಮಾತ್ರ ಸುಸ್ಥಿರ ಸಮಾಜದ ನಿರ್ಮಾಣ ಸಾಧ್ಯ. ಇಂದು ಮಹಿಳೆಯರು ವಿವಿಧ ಬಗೆಯ ಅನಾರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಸಕಾಲದಲ್ಲಿ ಚಿಕಿತ್ಸೆ ದೊರೆಯದೇ ಸಾವು ನೋವುಗಳು ಹೆಚ್ಚುತ್ತಿವೆ. ಹಾಗಾಗಿ ಮಹಿಳೆಯರು ತಮ್ಮ ಆರೋಗ್ಯದ ಕಡೆ ಹೆಚ್ಚಿನ ಗಮನಹರಿಸಬೇಕು. ಆರೋಗ್ಯವೇ ಭಾಗ್ಯ ಎಂಬ ನಾಣ್ಣುಡಿ ನೆನಪಿಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ.ಎಂ.ಪೂರ್ಣಿಮಾ ವಹಿಸಿದ್ದರು. ಕಾಲೇಜಿನ ಶೈಕ್ಷಣಿಕ ಮುಖ್ಯಸ್ಥ ಡಾ.ರೇಚಣ್ಣ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶುಕ್ರವಾರ 22 ಮಾರ್ಚ್ 2024

ಸಾಧನೆಗೆ ವಿದ್ಯೆ ಇದ್ದರೆ ಸಾಲದು ಛಲವಿರಬೇಕು

• ಕುಂಡ್ಯೋಳಂಡ ರಮೇಶ್ ಮುದ್ದಯ್ಯ ಅಭಿಮತ • ಕೂಪದಿ ಪುಸ್ತಕ ಬಿಡುಗಡೆ

ಮಡಿಕೇರಿ, ಮಾ.21– ಸಾಧನೆಗೆ ವಿದ್ಯೆ ಮತ್ತು ಹಣವಿದ್ದರೆ ಸಾಲದು, ಸಾಧಿಸುವ ಛಲವಿರಬೇಕು ಎಂದು ಕುಂಡ್ಯೋಳಂಡ ಹಾಕಿ ನಮ್ಮೆಯ ಅಧ್ಯಕ್ಷ ಕುಂಡ್ಯೋಳಂಡ ರಮೇಶ್ ಮುದ್ದಯ್ಯ ಅಭಿಪ್ರಾಯಪಟ್ಟರು.


ಮಡಿಕೇರಿಯ ಪತ್ರಿಕಾ ಭವನದಲ್ಲಿ ಕೊಡವ ಮಕ್ಕಡ ಕೂಟ ಹಾಗೂ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ ಅವರ 'ಕೂಪದಿ' ಪುಸ್ತಕವನ್ನು ಕುಂಡ್ಯೋಳಂಡ ರಮೇಶ್ ಮುದ್ದಯ್ಯ ಬಿಡುಗಡೆಗೊಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಕೊಡವ ಮಕ್ಕಡ ಕೂಟದ 87ನೇ ಪುಸ್ತಕ ಹಾಗೂ ಸಾಹಿತಿ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ ಅವರು ರಚಿಸಿರುವ 7ನೇ ಕೊಡವ ಪುಸ್ತಕ 'ಕೂಪದಿ'ಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಾಹಿತ್ಯ ಎನ್ನುವುದು ಓದುಗನ ಮನಸ್ಸಿನಾಳಕ್ಕೆ ಪ್ರಭಾವ ಬೀರಬಲ್ಲ ಕ್ಷೇತ್ರವಾಗಿದೆ. ಸಾಹಿತ್ಯ ರಚನೆ ಕಷ್ಟದ ಕೆಲಸವಾಗಿದ್ದು, ಸಾಹಿತಿಯ ಮನಸ್ಸಿನಿಂದ ಬರಹದ ರೂಪದಲ್ಲಿ ಹೊರ ಬರುವ ಅನುಭವ ಓದುಗನ ಮನಸ್ಸು ಸೇರುತ್ತದೆ. ಬರವಣಿಗೆಯನ್ನು ತಪಸ್ಸಿನಂತೆ ಕಾಣಬೇಕು ಮತ್ತು ಹಿಡಿತ ಸಾಧಿಸಬೇಕು ಎಂದರು.

ಕಣ್ಣು, ಕಿವಿ ಮತ್ತು ಹೃದಯಕ್ಕೆ ಕೆಲಸ ಕೊಡಬೇಕು. ಸಾಹಿತಿಗಳು ಯಾವುದೇ ಸಭೆ, ಸಮಾರಂಭ ಮತ್ತಿತರ ಪ್ರದೇಶಗಳಿಗೆ ತೆರಳಿದರೂ ಬರವಣಿಗೆಯ ಮೂಲಕ ತಮ್ಮ ಅನುಭವವನ್ನು ಓದುಗರಿಗೆ ಹಂಚಿಕೊಳ್ಳುವ ಪ್ರಯತ್ನದಲ್ಲಿರುತ್ತಾರೆ. ಅನುಭವಕ್ಕೆ ಬರವಣಿಗೆಯ ರೂಪ ನೀಡಿ ಓದುಗರನ್ನು ಸೆಳೆಯುವ ಪ್ರಯತ್ನ ಮಾಡುತ್ತಾರೆ. ಈ ಕಷ್ಟದ ಕಾಯಕ ಮಾಡುವ ಬರಹಗಾರರಿಗೆ ದಾನಿಗಳ ಸಹಕಾರ ಅಗತ್ಯವಿದೆ ಎಂದರು.

ಕೊಡವ ಮಕ್ಕಡ ಕೂಟದ ವತಿಯಿಂದ ಬೊಳ್ಳಜಿರ ಬಿ.ಅಯ್ಯಪ್ಪ ಅವರು ಸಾಕಷ್ಟು ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಕೆಲಸ ಮಾಡಿದ್ದಾರೆ. ಕೊಡಗಿನ ಸಾಹಿತ್ಯ, ಸಂಸ್ಕೃತಿ, ಆಚಾರ, ವಿಚಾರಗಳನ್ನು ಉಳಿಸಿ, ಬೆಳೆಸುವ ಕಾರ್ಯದಲ್ಲಿ ತೊಡಗಿದ್ದಾರೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಪುಸ್ತಕಗಳನ್ನು ಹೊರ ತರುವಂತಾಗಲಿ ಎಂದು ಶುಭ ಹಾರೈಸಿದರು.

ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿ, ಕೊಡವ ಮಕ್ಕಡ ಕೂಟದ ವತಿಯಿಂದ ದಾನಿಗಳ ಸಹಕಾರದಿಂದ ಈಗಾಗಲೇ 87 ಪುಸ್ತಕಗಳನ್ನು ಬಿಡುಗಡೆಗೊಳಿಸಲಾಗಿದೆ. 13 ಪುಸ್ತಕಗಳು ತಯಾರಿ ಹಂತದಲ್ಲಿದೆ. ಆ ಮೂಲಕ ಒಟ್ಟು 100 ಪುಸ್ತಕಗಳನ್ನು ಶೀಘ್ರದಲ್ಲೇ ಲೋಕಾರ್ಪಣೆಗೊಳಿಸುವ ಗುರಿ ಹೊಂದಲಾಗಿದೆ ಎಂದರು.

ಕೊಡವ ಮಕ್ಕಡ ಕೂಟದ ಸಲಹೆಗಾರ ಕುಲ್ಲೇಟಿರ ಅಜಿತ್ ನಾಣಯ್ಯ ಮಾತನಾಡಿದರು. ಸಮಾಜ ಸೇವಕರಾದ ಚೀಯಕ ಪೂವಂಡ ಸಚಿನ್ ಪೂವಯ್ಯ, ಪೊನ್ನಚೆಟ್ಟಿರ ಪ್ರದೀಪ್ ಉಪಸ್ಥಿತರಿದ್ದರು.

> 'ಕೂಪದಿ' ನನ್ನ ಕನಸಿನ 7ನೇ ಪುಸ್ತಕವಾಗಿದೆ. ಸಣ್ಣಕಥೆಗಳ ಸಂಗ್ರಹವಾಗಿದ್ದು, ಜೀವ, ಜೀವನ, ಕಣ್ಣಿಗೆ ಕಾಣುವ ಸಹಜತೆ ಇದರಲ್ಲಿದೆ. ಕಥೆಯ ಸಂಗ್ರಹ ಓದುವವರಿಗೆ ಖುಷಿ ನೀಡಲಿದೆ. ಬರಹಗಾರರಿಗೆ ದಾನಿಗಳ ಸಹಕಾರದ ಅಗತ್ಯವಿದೆ. ಪುಸ್ತಕಗಳನ್ನು ಓದಿ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ ಮಾತ್ರ ಸಾಹಿತಿಗಳಿಗೆ ಮತ್ತಷ್ಟು ಪುಸ್ತಗಳನ್ನು ಬರೆಯಲು ಸ್ಫೂರ್ತಿ ದೊರೆಯುತ್ತದೆ.
>
> – ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ, ಪುಸ್ತಕ ಬರಹಗಾತಿ

ಮುತ್ತಪ್ಪ ದೇವಸ್ಥಾನದ ತೆರೆ ಮಹೋತ್ಸವ


ಮೀನುಪೇಟೆಯ ಚೈತನ್ಯ ಮಠಪುರದ ಮುತ್ತಪ್ಪ ದೇವಸ್ಥಾನದಲ್ಲಿ ಕೋಲ ಉತ್ಸವ ಭಕ್ತರ ಸಮ್ಮುಖದಲ್ಲಿ ನಡೆಯಿತು.

ವಿರಾಜಪೇಟೆ: ಇಲ್ಲಿನ ಮೀನುಪೇಟೆಯ ಚೈತನ್ಯ ಮಠಪುರದ ಶ್ರೀ ಮುತ್ತಪ್ಪ ದೇವಸ್ಥಾನದ 80ನೇ ವರ್ಷದ ತೆರೆ ಮಹೋತ್ಸವ (ಕೋಲ)ವನ್ನು ಮೂರು ದಿನ ವಿಜೃಂಭಣೆಯಿಂದ ಆಚರಿಸಲಾಯಿತು.

ಮಂಗಳವಾರ ಸಂಜೆ 6ಕ್ಕೆ ಮುತ್ತಪ್ಪನ ವೆಳ್ಳಾಟಂ ಬಳಿಕ ಶ್ರೀ ಮುತ್ತಪ್ಪ ಮಲಯಾಳಿ ಸಮಾಜದ ಅಧ್ಯಕ್ಷ ಪಿ.ಜಿ.ಸುಮೇಶ್ ಪೂಜಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಾಜಿ ಶಾಸಕ ಕೆ.ಜಿ.ಬೋಪಯ್ಯ ದೇವಾಲಯದ ನೂತನ ಮಹಾದ್ವಾರ ಉದ್ಘಾಟಿಸಿದರು. ನಂತರ ಕೇರಳದ ವೇದಾಭ್ಯಾಸ ವಿದ್ಯಾಪೀಠ ವೇದಾಚಾರ್ಯ ಅಜಯಕುಮಾರ್ ಅವರು 'ಧನವು ಸಮೃದ್ಧಿಯು ಉಂಟಾಗಲು ಮಾರ್ಗದರ್ಶನ' ಕುರಿತು ಉಪನ್ಯಾಸ ನೀಡಿದರು. ಇದೇ ವೇಳೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಬುಧವಾರ ಸಂಜೆ ಮುತ್ತಪ್ಪನ ವೆಳ್ಳಾಟಂ ನಂತರ ನಗರದ ತೆಲುಗರ ಬೀದಿಯ ಮಾರಿಗುಡಿ ಬಳಿಯಿಂದ ಮಹಿಳೆಯರ ಚಂಡೆ ಮೇಳ, ಗೊಂಬೆ ಕುಣಿತ ಮಕ್ಕಳು, ಮಹಿಳೆಯರು ದೀಪಹಿಡಿದು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಇದೇ ವೇಳೆ ಸುಂಕದಕಟ್ಟೆ, ನೆಹರು ನಗರ, ಪಂಜಾರುಪೇಟೆ ಹಾಗೂ ಇತರಡೆಗಳಲ್ಲಿ ಕಳಸವನ್ನು ವಾದ್ಯಗೋಷ್ಠಿ ಮೂಲಕ ಬರಮಾಡಿಕೊಳ್ಳಲಾಯಿತು. ರಾತ್ರಿ ಕುಟ್ಟಿಚತನ್, ಗುಳಿಗನ್, ವಸೂರಿಮಾಲ, ಪೋದಿ, ವಿಷ್ಣುಮೂರ್ತಿ ತೆರೆ ವೆಳ್ಳಾಟಂ ಮುಂಜಾನೆವರೆಗೂ ನಡೆಯಿತು.

ಗುರುವಾರ ಪ್ರಾತಃಕಾಲ ಶಾಸ್ತಪ್ಪನ್ ಹಾಗೂ ಗುಳಿಗನ ಕೋಲ, ನಂತರ ತಿರುವಪ್ಪನ್, ಭಗವತಿ (ಪೋದಿ), ವಸೂರಿಮಾಲ, ಮಧ್ಯಾಹ್ನ ವಿಷ್ಣುಮೂರ್ತಿ ಕೋಲ ಹಾಗೂ ವಾರಣದೊಂದಿಗೆ ಮುತ್ತಪ್ಪನ ತೆರೆಮಹೋತ್ಸವ ನಡೆಯಿತು.

ನೆರೆ ರಾಜ್ಯ ಕೇರಳ, ವಿರಾಜಪೇಟೆ ಹಾಗೂ ಗ್ರಾಮೀಣ ಪ್ರದೇಶಗಳಿಂದ ಸಾವಿರಾರು ಭಕ್ತರು ಆಗಮಿಸಿದ್ದರು. ತೆರೆ ಮಹೋತ್ಸವದಲ್ಲಿ ದೇವಸ್ಥಾನ ಸಮಿತಿಯ ಪದಾಧಿಕಾರಿಗಳು ಹಾಜರಿದ್ದರು.

ಪೊನ್ನಂಪೇಟೆ ವಿವಿಧೆಡೆ ಅಕ್ರಮ ಮರಳು ದಂಧೆ

ಮಡಿಕೇರಿ, ಮಾ.21–ಪೊನ್ನಂಪೇಟೆ ತಾಲೂಕಿನ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿ ಅಕ್ರಮ ಮರಳು ದಂಧೆ ಎಗ್ಗಿಲ್ಲದೆ ನಡೆಯುತ್ತಿದ್ದು, ಕೀರೆಹೊಳೆಯಿಂದ ಲಕ್ಷ್ಮಣ ತೀರ್ಥ ನದಿವರೆಗೂ ಮರಳುಗಾರಿಕೆ ಅವ್ಯಾಹತವಾಗಿ ನಡೆಯುತ್ತಿದೆ.

ಕೆಲ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಜೆಸಿಬಿ ಸಹಾಯದಿಂದ ಕೀರೆಹೊಳೆಯ ಒಡಲು ಬಗೆಯುತ್ತಿರುವ ಮರಳು ದಂಧೆಕೋರರು ಟಿಪ್ಪರ್, ಟ್ರ್ಯಾಕ್ಟರ್, ಪಿಕ್‌ಅಪ್ ವಾಹನಗಳು ಸೇರಿದಂತೆ ಗೂಡ್ಸ್ ವಾಹನಗಳಲ್ಲಿ ಹಾಡಹಗಲೇ ರಾಜಾರೋಷವಾಗಿ ಅಕ್ರಮವಾಗಿ ಮರಳು ಸಾಗಿಸುತ್ತಿರುವ ಬಗ್ಗೆ ಸಾರ್ವಜನಿಕರು ಗಂಭೀರವಾಗಿ ಆರೋಪಿಸಿದ್ದಾರೆ.


ಮಾಯಮುಡಿ ಗ್ರಾಪಂ ವ್ಯಾಪ್ತಿಯ ರುದ್ರಬೀಡು ಪ್ರದೇಶದಲ್ಲಿ ಮರಳನ್ನು ಅಕ್ರಮವಾಗಿ ಸಂಗ್ರಹಿಸಿರುವುದು.

ಪೊಲೀಸರ ದಾಳಿ: ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿರುವ ಮಾಯಮುಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರುದ್ರಬೀಡು ಪ್ರದೇಶಕ್ಕೆ ಪೊನ್ನಂಪೇಟೆ ಪೊಲೀಸ್ ಠಾಣಾಧಿಕಾರಿ ಜಿ.ನವೀನ್, ಸಿಬ್ಬಂದಿ ಪ್ರಸನ್ನ ಕುಮಾರ್, ಚಾಲಕ ಬಾಳಪ್ಪ ನಾಯಕ ಹಾಗೂ ಗೋಣಿಕೊಪ್ಪಲು ಪೊಲೀಸ್ ಠಾಣಾಧಿಕಾರಿ ರೂಪಾದೇವಿ ಭೇಟಿ ನೀಡಿ, ಪರಿಶೀಲಿಸಿದರು. ಮಿನಿಟಿಪ್ಪರ್‌ನಲ್ಲಿ ಮರಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಬುಧವಾರ ರಾತ್ರಿ ಸುಮಾರು 9 ಗಂಟೆಯಲ್ಲಿ ದಾಳಿ ನಡೆಸಿದ ಗೋಣಿಕೊಪ್ಪಲು ಠಾಣಾಧಿಕಾರಿ ರೂಪಾದೇವಿ, ಸಿಬ್ಬಂದಿ ವೀರೇಶ್, ವಾಹನ ಚಾಲಕ ಬೀರಲಿಂಗ ಮತ್ತು ಪೊನ್ನಂಪೇಟೆ ಠಾಣೆಯ ಸಿಬ್ಬಂದಿ ಪ್ರಸನ್ನ ಕುಮಾರ್ ಅವರು ಅಕ್ರಮವಾಗಿ ಮರಳು ತುಂಬುತ್ತಿದ್ದ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಈ ಸಂಬಂಧ ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನದಿ ನೀರು ಬಳಸದ ಆದೇಶ ಹಿಂಪಡೆಯಲು ಒತ್ತಾಯ

ಮಡಿಕೇರಿ, ಮಾ.21– ನದಿ ಮತ್ತು ಜಲಮೂಲದ ನೀರನ್ನು ಬಳಸದಂತೆ ಜಿಲ್ಲಾಧಿಕಾರಿ ನೀಡಿರುವ ಆದೇಶವನ್ನು ಹಿಂಪಡೆಯಬೇಕು ಎಂದು ಬಹುಜನ ಸಮಾಜ ಪಾರ್ಟಿಯ ಜಿಲ್ಲಾಧ್ಯಕ್ಷ ದಿವಿಲ್ ಕುಮಾರ್ ಒತ್ತಾಯಿಸಿದರು.


ಸುದ್ದಿಗೋಷ್ಠಿಯಲ್ಲಿ ಬಿಎಸ್‌ಪಿ ಜಿಲ್ಲಾಧ್ಯಕ್ಷ ದಿವಿಲ್ ಕುಮಾರ್ ಮಾತನಾಡಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡಗಿನ ಆರ್ಥಿಕತೆ ಕಾಫಿ ಕೃಷಿಯನ್ನೇ ಅವಲಂಬಿಸಿದೆ. ಕಾಫಿ ಬೆಳೆಗಾರರು ಇಡೀ ವರ್ಷದಲ್ಲಿ ಕೇವಲ ಒಂದು ತಿಂಗಳ ಅವಧಿಯಲ್ಲಿ ಮಾತ್ರ ನೀರನ್ನು ತೋಟಕ್ಕೆ ಬಳಸುತ್ತಾರೆ. ಆದರೆ, ಜಿಲ್ಲಾಡಳಿತ ಇದಕ್ಕೆ ವ್ಯತಿರಿಕ್ತವಾಗಿ ಆದೇಶ ನೀಡಿದ್ದು, ಇದು ಸರಿಯಾದ ಕ್ರಮವಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಕಾಫಿ ಬೆಳೆಗೆ ಮಾರ್ಚ್‌ನಲ್ಲಿ ನೀರು ನೀಡದಿದ್ದರೆ ಮುಂದಿನ ವರ್ಷದ ಫಸಲಿನ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿ ಆರ್ಥಿಕತೆಯೇ ಬುಡಮೇಲಾಗಲಿದೆ. ಇದರಿಂದ ಬೆಳೆಗಾರರು ಮಾತ್ರವಲ್ಲ, ಕಾರ್ಮಿಕ ವರ್ಗವೂ ಸಮಸ್ಯೆಗೆ ಸಿಲುಕಲಿದೆ. ಭತ್ತದ ಗದ್ದೆಗಳು ಲೇಔಟ್‌ಗಳಾಗಿ ಭೂ ಪರಿವರ್ತನೆಯಾಗುತ್ತಿದ್ದು, ಪರಿಸರ ನಾಶದಿಂದ ನೀರಿನ ಮೂಲಗಳಿಗೆ ಧಕ್ಕೆ ಉಂಟಾಗುತ್ತಿದೆ. ಈಗಾಗಲೇ ಜಿಲ್ಲೆಯಲ್ಲಿ ಶೇ.90ರಷ್ಟು ಭತ್ತದ ಗದ್ದೆಗಳು ನಶಿಸಿಹೋಗಿದ್ದು, ಮುಂದೆ ಇದೇ ಪರಿಸ್ಥಿತಿ ಕಾಫಿಗೂ ಬರಲಿದೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಪಕ್ಷದ ಜಿಲ್ಲಾ ಉಸ್ತುವಾರಿ ಕಳ್ಳೀರ ಹರೀಶ್, ಉಪಾಧ್ಯಕ್ಷೆ ಹಾಜಿರಾಬಿ, ನಗರಾಧ್ಯಕ್ಷ ಪ್ರದೀಶ್, ಉಪಾಧ್ಯಕ್ಷೆ ರೋಹಿಣಿ ಉಪಸ್ಥಿತರಿದ್ದರು.

ಕಾಡಾನೆ ದಾಳಿ : ಕಾರು ಜಖಂ

ಸಿದ್ದಾಪುರ, ಮಾ.21– ದುಬಾರೆ ಪ್ರವಾಸಿ ತಾಣಕ್ಕೆ ತೆರಳುತ್ತಿದ್ದ ಕಾರಿನ ಮೇಲೆ ಕುಶಾಲನಗರ ತಾಲೂಕಿನ ವಾಲ್ನೂರು–ತ್ಯಾಗತ್ತೂರು ಬಳಿ ಕಾಡಾನೆ ಏಕಾಏಕಿ ದಾಳಿ ಮಾಡಿದ್ದು, ಕಾರಿನ ಹಿಂಭಾಗ ಸಂಪೂರ್ಣ ಜಖಂಗೊಂಡಿದೆ. ಕಾರು ಚಾಲಕ ಸೇರಿದಂತೆ ಪ್ರವಾಸಿಗರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಮಡಿಕೇರಿಯಿಂದ ಚೆಟ್ಟಳ್ಳಿ ಮೂಲಕ ದುಬಾರೆಗೆ ಪ್ರವಾಸಿಗರು ಕಾರಿನಲ್ಲಿ ತೆರಳುತ್ತಿದ್ದಾಗ ತ್ಯಾಗತ್ತೂರು ಬಳಿಯ ಮುಖ್ಯ ರಸ್ತೆಯ ಕಾಫಿ ತೋಟದಿಂದ ಬಂದ ಕಾಡಾನೆ ಏಕಾಏಕಿ ಕಾರಿನ ಮೇಲೆ ದಾಳಿ ಮಾಡಿದೆ. ಪರಿಣಾಮ ಕಾರಿನ ಹಿಂಭಾಗ ಜಖಂಗೊಂಡಿದೆ. ಇದರಿಂದ ಗ್ರಾಮದಲ್ಲಿ ಆತಂಕದ ವಾತಾವರಣ ಎದುರಾಗಿದೆ.

ಸ್ಥಳಕ್ಕೆ ಉಪವಲಯ ಅರಣ್ಯಾಧಿಕಾರಿ ಕೂಡಕಂಡಿ ಸುಬ್ರಾಯ, ಅರಣ್ಯ ಗಸ್ತು ಸಿಬ್ಬಂದಿ ರವಿ ಉತ್ನಾಳ ಮತ್ತು ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ, ಸ್ಥಳ ಪರಿಶೀಲಿಸಿದರು.

ಅರಣ್ಯ ಇಲಾಖೆ ಕಾಡಾನೆಗಳ ಹಾವಳಿ ತಡೆಗೆ ಶಾಶ್ವತ ಕ್ರಮ ಕೈಗೊಳ್ಳಬೇಕೆಂದು ಬೆಳೆಗಾರರು ಹಾಗೂ ಸ್ಥಳೀಯರು ಒತ್ತಾಯಿಸಿದ್ದಾರೆ.



ಶಫ್ನಾಸ್‌ಗೆ ಪಿಎಚ್.ಡಿ ಪದವಿ

ಮಡಿಕೇರಿ: ಡಾ. ಕೆ.ಎಸ್. ಅನಿಲ್ ಕುಮಾರ್ ಮಾರ್ಗದರ್ಶನದಲ್ಲಿ ಸುಂಟಿಕೊಪ್ಪ ಸಮೀಪದ ಭೂತನಕಾಡು ನಿವಾಸಿ ಶಫ್ನಾಸ್ ಮಂಡಿಸಿದ 'ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ' ಶಾಸ್ತ್ರದ ಪ್ರಬಂಧಕ್ಕೆ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ನೀಡಿದೆ. ಭೂತನಕಾಡುವಿನ ಐ.ಇಸ್ಮಾಯಿಲ್ ಮತ್ತು ಕೆ.ವಿ.ಶಹರ್ಬಾನು ದಂಪತಿ ಪುತ್ರಿಯಾಗಿರುವ ಶಫ್ನಾಸ್ ಭಾರತೀಯ ಆಹಾರ ಕಾರ್ಪೋರೇಷನ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.



ಮಾ.24ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ: ಪೊನ್ನಂಪೇಟೆ ವಿದ್ಯುತ್ ಮಾರ್ಗದಲ್ಲಿ ತುರ್ತುನಿರ್ವಹಣೆ ಕಾರ್ಯ ಹಮ್ಮಿಕೊಂಡಿರುವುದರಿಂದ ಮಾ.24ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಪೊನ್ನಂಪೇಟೆ, ವಿರಾಜಪೇಟೆ, ಶ್ರೀಮಂಗಲ, ಸಿದ್ದಾಪುರ, ಮೂರ್ನಾಡು ವಿದ್ಯುತ್ ಉಪ ಕೇಂದ್ರಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಳಿಸುವುದರಿಂದ ಗೋಣಿಕೊಪ್ಪಲು, ನಲ್ಲೂರು, ಹುದಿಕೇರಿ, ತಿತಿಮತಿ, ಹಾತೂರು, ಪಾಲಿಬೆಟ್ಟ, ಬಾಳೆಲೆ, ಕಾನೂರು, ಬಿರುನಾಣಿ, ಕುಟ್ಟ, ಬಿ. ಶೆಟ್ಟಿಗೇರಿ, ಚೆತ್ತಿ, ಕಡಂಗಮರೂರು, ಕಾಕೋಟು ಪರಂಬು, ಅಮ್ಮತ್ತಿ, ಮಾಲ್ದಾರೆ, ಮರಗೋಡು, ನಾಪೋಕ್ಲು, ಕಕ್ಕಬೆ, ಅರೆಕಾಡು, ಐಯ್ಯಂಗೇರಿಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಕುಶಾಲನಗರ, ಸೋಮವಾರಪೇಟೆ, ಕುಶಾಲನಗರ, ಕೂಡಿಗೆ, ಇಂಡಸ್ಟ್ರಿಯಲ್ ಏರಿಯಾ, ಹಾರಂಗಿ, ಎಸ್‌ಎಲ್‌ಎನ್, ಶಿರಂಗಾಲ, ಭುವನಗಿರಿ, ಹೆಬ್ಬಾಲೆ, ನಂಜರಾಯಪಟ್ಟಣ, ಶಾಂತಳ್ಳಿ, ಅಬ್ಬೂರುಕಟ್ಟೆ, ಬೇಳೂರು, ಐಗೂರು, ಬೆಟ್ಟದಳ್ಳಿ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಮಡಿಕೇರಿ ವಿಭಾಗದ ಸೆಸ್ಕ್ ಇಇ ಅನಿತಾ ಬಾಯಿ ತಿಳಿಸಿದ್ದಾರೆ.

ಮಹದೇಶ್ವರಬೆಟ್ಟದಲ್ಲಿ ಮಹಾರುದ್ರಾಭಿಷೇಕ ಪೂಜೆ


ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ನೇತೃತ್ವದಲ್ಲಿ ಮಹಾರುದ್ರಾಭಿಷೇಕ ಪೂಜೆ ನೆರವೇರಿಸಲಾಯಿತು.

ಹನೂರು: ತಾಲೂಕಿನ ಮಲೆಮಹದೇಶ್ವರ ಬೆಟ್ಟದಲ್ಲಿ ಸಾಲೂರು ಬೃಹನ್ಮಠದ ಪೀಠಾಧಿಪತಿ ಶ್ರೀ ಶಾಂತ ಮಲ್ಲಿಕಾರ್ಜುನಸ್ವಾಮೀಜಿ ನೇತೃತ್ವದಲ್ಲಿ ಮಹಾಶಿವರಾತ್ರಿಯ ಮಹಾರುದ್ರಭಿಷೇಕ ಪೂಜಾ ಕಾರ್ಯವನ್ನು ಗುರುವಾರ ನೆರವೇರಿಸಲಾಯಿತು.

ಶಿವರಾತ್ರಿ ನಂತರ ಮೊದಲ ಪೂಜೆ: ಮಹದೇಶ್ವರಬೆಟ್ಟದಲ್ಲಿ ನಡೆದ ಮಹಾಶಿವರಾತ್ರಿ ಜಾತ್ರಾ ಮಹೋತ್ಸವದ ನಂತರ ನಡೆಯುವ ಮಹಾರುದ್ರಾಭಿಷೇಕ ಪೂಜೆ ತಲತಲಾಂತರದಿಂದ ಸಾಲೂರು ಮಠದ ವತಿಯಿಂದ ನಡೆಯುವ ಮೊದಲ ಪೂಜೆಯಾಗಿದೆ.

ಗುರುವಾರ ದೇವಾಲಯವನ್ನ ತಳಿರು ತೋರಣಗಳಿಂದ ಸಿಂಗರಿಸಿ ಸ್ವಾಮಿಗೆ ಮಹಾರುದ್ರಾಭಿಷೇಕ, ಪೂಜಾ ಕಾರ್ಯಕ್ರಮ ನಡೆಸಲಾಯಿತು. ನಂತರ ನೆರೆದಿದ್ದ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಪೂಜಾ ಕಾರ್ಯದಲ್ಲಿ ಗುಡ್ಡೇಗಾಲ ಮಠದ ಶ್ರೀ ಮಲ್ಲಿಕಾರ್ಜುನಸ್ವಾಮೀಜಿ, ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ, ನೀಲಕಂಠ ಮಠದ ಶ್ರೀ ನೀಲಕಂಠ ಸ್ವಾಮೀಜಿ ಮತ್ತು ಮಲೆಮಹದೇಶ್ವರಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರಘು, ಸಿಬ್ಬಂದಿ ಇದ್ದರು.

ನಗರದಲ್ಲಿ ಕೋಟ್ಪಾ ದಾಳಿ: 2960 ರೂ. ದಂಡ


ಚಾಮರಾಜನಗರದಲ್ಲಿ ಜಿಲ್ಲಾ ಕೋಟ್ಪಾ ತಂಡದ ಅಧಿಕಾರಿಗಳು ನಿಯಮ ಉಲ್ಲಂಘಿಸಿ ತಂಬಾಕು ಉತ್ಪನ್ನಗಳನ್ನು ಮಾರುತ್ತಿದ್ದ ಅಂಗಡಿ ಮಾಲೀಕರಿಗೆ ದಂಡ ವಿಧಿಸಿದರು.


ಚಾಮರಾಜನಗರ, ಮಾ.21– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಬುಧವಾರ ನಗರದ ಪಚ್ಚಪ್ಪ ವೃತ್ತದಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮೂಲಕ ಗುಂಡ್ಲುಪೇಟೆ ವೃತ್ತದವರೆಗೆ ಕೋಟ್ಪಾ ಕಾರ್ಯಾಚರಣೆ ನಡೆಸಿ, 27 ಪ್ರಕರಣಗಳಿಂದ 2960 ರೂ. ದಂಡ ವಿಧಿಸಲಾಗಿದೆ.

ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯ್ದೆಯನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಜಿಲ್ಲಾ ಕೋಟ್ಪಾ ತನಿಖಾ ತಂಡದ ಸಹಯೋಗದೊಂದಿಗೆ ದಾಳಿ ನಡೆಸಲಾಯಿತು. ದಾಳಿ ವೇಳೆ ನಿಯಮ ಉಲ್ಲಂಘಿಸಿ, ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದ ಅಂಗಡಿಗಳು, ಕೋಟ್ಪಾ ಎಚ್ಚರಿಕೆ ನಾಮಫಲಕವನ್ನು ಪ್ರದರ್ಶಿಸದ ಹೋಟೆಲ್, ಬಾರ್ ಅಂಡ್ ರೆಸ್ಟೋರೆಂಟ್, ಟೀ–ಸ್ಟಾಲ್, ಚಿಲ್ಲರೆ ಅಂಗಡಿ ಹಾಗೂ ಇತರೆ ಅಂಗಡಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದ ವ್ಯಕ್ತಿಗಳಿಗೆ ಸ್ಥಳದಲ್ಲೇ ದಂಡ ವಿಧಿಸಲಾಯಿತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಚಿದಂಬರ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಗಿರಿಧರ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ನವೀನ್ ಕುಮಾರ್, ಮಧುಶಂಕರ್, ದಯಾನಂದ್, ಭಾಸ್ಕರ್, ನಾರಾಯಣ್, ಜಿಲ್ಲಾ ತಂಬಾಕು ನಿಯಂತ್ರಣ ಘಟಕದ ಜಿಲ್ಲಾ ಸಲಹೆಗಾರರಾದ ಪ್ರಶಾಂತ್, ಸಮಾಜ ಕಾರ್ಯಕರ್ತರಾದ ವೀರಣ್ಣ, ಕಾರ್ಮಿಕ, ಪೊಲೀಸ್, ಕಂದಾಯ ಇಲಾಖೆ ಅಧಿಕಾರಿಗಳು ದಾಳಿ ವೇಳೆ ಹಾಜರಿದ್ದರು.

ಕೆಆರ್‌ಎಸ್‌ನಿಂದ ಕಂದಳ್ಳಿ ಮಹೇಶ್‌ಗೆ ಟಿಕೆಟ್

ಚಾಮರಾಜನಗರ, ಮಾ.21– ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಿಂದ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ (ಕೆಆರ್‌ಎಸ್)ದಿಂದ ಕಂದಳ್ಳಿ ಮಹೇಶ್ ಅವರಿಗೆ ಟಿಕೆಟ್ ನೀಡಿದೆ.




ಕೆಆರ್‌ಎಸ್‌ನ 2ನೇ ಪಟ್ಟಿಯಲ್ಲಿ ಕಂದಳ್ಳಿ ಮಹೇಶ್ ಅವರನ್ನು ಅಧಿಕೃತ ಅಭ್ಯರ್ಥಿಯಾಗಿ ಘೋಷಿಸಿದೆ. ಮಹೇಶ್ ಕಳೆದ ವಿಧಾನಸಭಾ ಚುನಾವಣೆಯಲ್ಲೂ ಕೊಳ್ಳೇಗಾಲ ಮೀಸಲು ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಭವಗೊಂಡಿದ್ದರು.

ಗೆಲುವಿನ ವಿಶ್ವಾಸ: ನನ್ನನ್ನು ಗುರುತಿಸಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಪಕ್ಷ ಟಿಕೆಟ್ ನೀಡಿದೆ. ಭ್ರಷ್ಟಾಚಾರ ನಿರ್ಮೂಲನೆ ಮಾಡುವುದು ನಮ್ಮ ಪಕ್ಷದ ಉದ್ದೇಶವಾಗಿದೆ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪ್ರತಿ ಚುನಾವಣೆಯಲ್ಲೂ ಭ್ರಷ್ಟಾಚಾರ ಮಾಡಿಕೊಂಡು ಮತದಾರರಿಗೆ ಆಮಿಷವೊಡ್ಡಿ ಗೆದ್ದ ಮೇಲೆ ಜನರಹಿತ ಮರೆತು ಹಣ ಮಾಡುತ್ತಿವೆ. ಇದರಿಂದ ಬೇಸತ್ತಿರುವ ಜನತೆ ಈ ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸಲಿದ್ದಾರೆ ಎಂದು ಕಂದಳ್ಳಿ ಮಹೇಶ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಲೋಕ್ ಅದಾಲತ್‌ನಲ್ಲಿ 31,267 ಪ್ರಕರಣ ಇತ್ಯರ್ಥ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಬಿ.ಎಸ್. ಭಾರತಿ ಮಾಹಿತಿ

ಚಾಮರಾಜನಗರ, ಮಾ.21–ಸರ್ವರಿಗೂ ನ್ಯಾಯ ಒದಗಿಸುವ ಪರಿಕಲ್ಪನೆಯಡಿ ಮಾ.16ರಂದು ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ನಡೆದ ಮೆಗಾ ಲೋಕ ಅದಾಲತ್‌ನಲ್ಲಿ ಒಟ್ಟು 31,267 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷೆ ಬಿ.ಎಸ್.ಭಾರತಿ ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಪ್ರಧಾನ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷೆ ಬಿ.ಎಸ್.ಭಾರತಿ ಮಾತನಾಡಿದರು. ಎಂ.ಶ್ರೀಧರ್, ಉಮ್ಮತ್ತೂರು ಇಂದುಶೇಖರ್ ಇದ್ದರು.

ನಗರದ ಜಿಲ್ಲಾ ನ್ಯಾಯಾಲಯದ ವ್ಯಾಜ್ಯಪೂರ್ವ ಪರಿಹಾರ ಕೇಂದ್ರದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಸಾಮಾನ್ಯರಿಗೆ ಸಕಾಲದಲ್ಲಿ ನ್ಯಾಯ ದೊರಕಿಸಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸುವ ನಿಟ್ಟಿನಲ್ಲಿ ಈ ಬಾರಿಯ ಲೋಕ್ ಅದಾಲತ್‌ನಲ್ಲಿ 195 ಸಿವಿಲ್, 1635 ಕ್ರಿಮಿನಲ್ ಹಾಗೂ ವ್ಯಾಜ್ಯಪೂರ್ವ 29,437 ಪ್ರಕರಣಗಳು ಸೇರಿದಂತೆ ಒಟ್ಟು 31,267 ಪ್ರಕರಣಗಳು ಇತ್ಯರ್ಥವಾಗಿವೆ. ಚಾಮರಾಜನಗರ ನ್ಯಾಯಾಲಯದಲ್ಲಿ 19,875, ಯಳಂದೂರಿನಲ್ಲಿ 2178, ಕೊಳ್ಳೇಗಾಲದಲ್ಲಿ 5839, ಗುಂಡ್ಲುಪೇಟೆಯಲ್ಲಿ 3375 ಪ್ರಕರಣಗಳನ್ನು ರಾಜೀಸಂಧಾನದ ಮೂಲಕ ಬಗೆಹರಿಸಲಾಗಿದೆ ಎಂದರು.


ಈ ಬಾರಿ ಗರಿಷ್ಠ ಪ್ರಮಾಣದ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಲೋಕ ಅದಾಲತ್‌ನಲ್ಲಿ ಇಷ್ಟು ಪ್ರಮಾಣದ ಪ್ರಕರಣಗಳನ್ನು ಇತ್ಯರ್ಥಪಡಿಸಿರುವುದು ದಾಖಲೆಯಾಗಿದೆ. ದಂಡದ ಮೊತ್ತ, ಅಪಘಾತಗಳಿಂದ ಕ್ಲೈಮು, ತೆರಿಗೆ ವಸೂಲಿ, ಕಾರ್ಮಿಕರಿಗೆ ಪರಿಹಾರ, ಪಿಂಚಣಿ ಇತರೆ ಸೇರಿದಂತೆ ಒಟ್ಟು 8,36,94,538 ರೂ. ಇತ್ಯರ್ಥಗೊಂಡ ಪ್ರಕರಣಗಳಿಂದ ಸಂಗ್ರಹವಾಗಿದೆ. ಇದರಲ್ಲಿ ದಂಡದ ಹಣ ಸರ್ಕಾರಕ್ಕೆ ಪಾವತಿಯಾಗಲಿದ್ದು, ಪರಿಹಾರದ ಮೊತ್ತ ಸಂತ್ರಸ್ತರಿಗೆ ತಲುಪಲಿದೆ ಎಂದು ತಿಳಿಸಿದರು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನದನ್ವಯ ಜಿಲ್ಲಾ ಹಾಗೂ ತಾಲೂಕು ನ್ಯಾಯಾಲಯಗಳಲ್ಲಿ 10–15 ವರ್ಷಗಳಿಂದ ಬಾಕಿ ಇದ್ದ ಪ್ರಕರಣಗಳನ್ನು ರಾಜೀಸಂಧಾನದ ಮೂಲಕ ಇತ್ಯರ್ಥಪಡಿಸಿಕೊಂಡು ಜನರು ಅದಾಲತ್ ಅನ್ನು ಸದ್ಬಳಕೆ ಮಾಡಿಕೊಂಡಿದ್ದಾರೆ. ಲೋಕ್ ಅದಾಲತ್ ಯಶಸ್ವಿಯಾಗಲು ವಕೀಲರು, ಕಕ್ಷಿದಾರರು, ವಿವಿಧ ಇಲಾಖೆಗಳು ನೆರವಾಗಿವೆ ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಮಾತನಾಡಿ, ಲೋಕ್ ಅದಾಲತ್‌ನಲ್ಲಿ 500 ಪ್ರಕರಣಗಳನ್ನು ಮಾತ್ರ ಇತ್ಯರ್ಥಪಡಿಸಲಾಗಿತ್ತು. ಪ್ರತಿ ಅದಾಲತ್‌ನಿಂದ ಅದಾಲತ್‌ಗೆ ಪ್ರಕರಣಗಳ ಇತ್ಯರ್ಥ ಸಂಖ್ಯೆ ಹೆಚ್ಚಾಗುತ್ತಿವೆ. ಜನರಿಗೆ ನ್ಯಾಯಾಂಗದಲ್ಲಿ ನಂಬಿಕೆ ಉಳಿದಿದೆ. ಎಲ್ಲರ ಸಹಕಾರದಿಂದ ಹೆಚ್ಚಿನ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಪರಸ್ಪರ ಕಕ್ಷಿದಾರರ ಮನವೊಲಿಸುವಲ್ಲಿ ವಕೀಲರ ಪಾತ್ರ ಪ್ರಮುಖವಾಗಿದೆ ಎಂದು ತಿಳಿಸಿದರು.

> ರಾಜೀಯಾಗಬಲ್ಲ ಪ್ರಕರಣಗಳನ್ನು ಗುರುತಿಸಿ ವಿವಿಧ ಇಲಾಖೆಗಳಲ್ಲಿ ಜನರಿಗಿದ್ದ ಸಮಸ್ಯೆಗಳನ್ನು ಬಗೆಹರಿಸಲು ಕಳೆದ ಎರಡೂವರೆ ತಿಂಗಳಿಂದ ಪೂರ್ವ ಸಮಾಲೋಚನೆ ನಡೆಸಿ, ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಲೋಕ್ ಅದಾಲತ್ ಮೂಲಕ ಜನರು ರಾಜೀಸಂಧಾನದ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಮುಂದೆ ಬರುತ್ತಿರುವುದು ಶ್ಲಾಘನೀಯ. ಎಲ್ಲರ ಸಹಕಾರ ನಿರಂತರವಾಗಿರಲಿ.
>
> –ಎಂ.ಶ್ರೀಧರ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ

ನಾಯಕ ಸಮುದಾಯ ಕಾಂಗ್ರೆಸ್‌ಗೆ ಹೋಗುವ ಪ್ರಶ್ನೆಯೇ ಇಲ್ಲ


ಚಾಮರಾಜನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಕೆಲ್ಲಂಬಳ್ಳಿ ಸೋಮನಾಯಕ ಮಾತನಾಡಿದರು.

ಚಾಮರಾಜನಗರ, ಮಾ.21– ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ನಾಯಕ ಸಮುದಾಯ ಸಂಪೂರ್ಣವಾಗಿ ಬಿಜೆಪಿ ಪರವಾಗಿದ್ದು, ಸಮುದಾಯದವರು ಕಾಂಗ್ರೆಸ್‌ಗೆ ಹೋಗುವ ಪ್ರಶ್ನೆಯೇ ಇಲ್ಲ ಎಂದು ಬಿಜೆಪಿ ಮುಖಂಡ ಕೆಲ್ಲಂಬಳ್ಳಿ ಸೋಮನಾಯಕ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯಲ್ಲಿ ಅಧಿಕಾರ ಅನುಭವಿಸಿದ ಸಮುದಾಯದ ಕೆಲ ಮುಖಂಡರು ತಮ್ಮ ಸ್ವಾರ್ಥ ಹಾಗೂ ವೈಯಕ್ತಿಕ ಹಿತಕ್ಕಾಗಿ ಬಿಜೆಪಿ ಬಿಡಬಹುದು. ಆದರೆ, ಬಿಜೆಪಿ ಇಡೀ ಸಮುದಾಯವನ್ನು ಕಡೆಗಣನೆ ಮಾಡಿದೆ ಎಂಬುದು ಸರಿಯಲ್ಲ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ನಾಯಕ ಸಮುದಾಯ ಕಾಂಗ್ರೆಸ್ ಕಡೆ ಮುಖ ಮಾಡಿದೆ ಎಂಬರ್ಥದಂತೆ ವರದಿ ಹಾಗೂ ವೈಯಕ್ತಿಕ ಸಭೆಗಳಿಂದ ನಾಯಕ ಸಮುದಾಯಕ್ಕೆ ಯಾವುದೇ ಧಕ್ಕೆ ಇಲ್ಲ. ಅವರು ವೈಯಕ್ತಿಕವಾಗಿ ಪಕ್ಷಬಿಟ್ಟು ಇತರೇ ಪಕ್ಷಕ್ಕೆ ಹೋದರೆ ನಾಯಕ ಸಮುದಾಯವೇ ಹೋಗುತ್ತದೆ ಎಂಬುವುದು ಸುಳ್ಳು ಎಂದರು.

ಬಿಜೆಪಿಯಲ್ಲಿ ಅಧಿಕಾರ ಅನುಭವಿಸಿದ ಕೆಲವರು ಸ್ವಹಿತಕ್ಕಾಗಿ ಬಿಜೆಪಿ ತೊರೆಯಬಹುದು. ಆದರೆ, ಬಿಜೆಪಿಗೆ ಯಾವುದೇ ನಷ್ಟವಾಗುವುದಿಲ್ಲ. ಇವರು ನಮ್ಮ ಹಿಂದೆ ಎರಡು ಜಿಲ್ಲೆಗಳ ನಾಯಕ ಸಮುದಾಯ ಜೊತೆಗಿದೆ ಎನ್ನುವುದು ಅಪಹಾಸ್ಯವಾಗಿದೆ. ಬಿಜೆಪಿಯಲ್ಲಿ ಎಲ್ಲವನ್ನು ಅನುಭವಿಸಿ, ಈಗ ಬೇರೆ ಪಕ್ಷಕ್ಕೆ ಹೋಗುತ್ತೇವೆ ಎಂಬುವರಿಗೆ ಆತ್ಮ ಇಲ್ಲ ಎಂದು ಛೇಡಿಸಿದರು.

ಸುದ್ದಿಗೋಷ್ಠಿಯಲ್ಲಿ ಯು.ರಾಜು ನಾಯಕ ಹಾಜರಿದ್ದರು.

ಚಾಮರಾಜನಗರ ಜಿಲ್ಲೆಯ ವಿವಿಧೆಡೆ 7 ಲಕ್ಷಕ್ಕೂ ಹೆಚ್ಚು ನಗದು ವಶ

ಚಾಮರಾಜನಗರ, ಮಾ.21–ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ತಪಾಸಣಾ ಕಾರ್ಯವನ್ನು ಚುರುಕುಗೊಳಿಸಿದ್ದು, ಜಿಲ್ಲೆಯಲ್ಲಿ ಗುರುವಾರ 6 ಪ್ರತ್ಯೇಕ ಪ್ರಕರಣಗಳಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ಒಟ್ಟು 7,00,300 ರೂ.ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪುಣಜನೂರು ಚೆಕ್‌ಪೋಸ್ಟ್ ಬಳಿ ಬಿ.ಎನ್.ರಮೇಶ್ ಮತ್ತು ಸಬ್ ಇನ್ಸ್‌ಪೆಕ್ಟರ್ ದಿವಾಕರ್ ತಂಡ ಬೆಳಗ್ಗೆ ಕೇರಳದಿಂದ ಚಾಮರಾಜನಗರಕ್ಕೆ ಬರುತ್ತಿದ್ದ ವಾಹನದಲ್ಲಿ ಅಬೀಬ್ ಅವರ ಬಳಿ ದಾಖಲೆ ಇಲ್ಲದೆ ಸಾಗಾಣೆ ಮಾಡುತ್ತಿದ್ದ 1 ಲಕ್ಷ ರೂ. ಜಪ್ತಿ ಮಾಡಿದೆ.

ಸಂತೇಮರಹಳ್ಳಿ ಸರ್ಕಲ್ ಬಳಿ ಮೈಸೂರಿನಿಂದ ಚಾಮರಾಜನಗರಕ್ಕೆ ಬರುತ್ತಿದ್ದ ವಾಹನದಲ್ಲಿ ಜಯಂತಿಲಾಲ್ ಜೈನ್, ಗೋವಿಂದರಾಜು, ಮಹಮ್ಮದ್ ಆಸೀಫ್, ವಿ.ಎಸ್. ರಿತೇಶ್ ಅವರಿಂದ ತಲಾ 40 ಸಾವಿರ ರೂ. 40,500 ರೂ. 40 ಸಾವಿರ ರೂ. ಮತ್ತು 43 ಸಾವಿರ ರೂ. ಸೇರಿದಂತೆ ಒಟ್ಟು 1,63,500 ವಶಕ್ಕೆ ಪಡೆಯಲಾಗಿದೆ.

ಗುಂಡ್ಲುಪೇಟೆ ವಿಧಾನಸಭಾ ವ್ಯಾಪ್ತಿಯ ಎಫ್‌ಎಸ್‌ಟಿ ತಂಡ ಮದ್ದೂರು ಚೆಕ್‌ಪೋಸ್ಟ್‌ನಲ್ಲಿ ಕೇರಳದಿಂದ ಬರುತ್ತಿದ್ದ ಜೋಷ್ ಕೈನಾಂಡಿ ಅವರ ವಾಹನದಲ್ಲಿದ್ದ 1 ಲಕ್ಷ ರೂ. ವಶಕ್ಕೆ ಪಡೆದಿದೆ.

ಕೇರಳದಿಂದ ಬರುತ್ತಿದ್ದ ಪಿಕಪ್ ವಾಹನದಲ್ಲಿದ್ದ 1.15 ಲಕ್ಷ ರೂ.ಅನ್ನು ವೈನಾಡಿನ ಜಮೀರ್ ಅವರಿಂದ ವಶಪಡಿಸಿಕೊಳ್ಳ ಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಕೇರಳದಿಂದ ಗುಂಡ್ಲುಪೇಟೆ ಕಡೆಗೆ ಬರುತ್ತಿದ್ದ ಗೂಡ್ಸ್ ವಾಹನದಲ್ಲಿ ಸಾಗಿಸುತ್ತಿದ್ದ 97 ಸಾವಿರ ರೂ. ಕೋಝಿಕೋಡ್‌ನ ಹ್ಯಾರಿಸ್ ಅವರಿಂದ ಜಪ್ತಿ ಮಾಡಲಾಗಿದೆ.

ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪಾಲಾರ್ ಚೆಕ್‌ಪೋಸ್ಟ್ ಬಳಿ ದಾಖಲೆ ಇಲ್ಲದ 1,24,800 ರೂ.ಅನ್ನು ಮೆಟ್ಟೂರಿನ ಕೆ.ಎಂ.ಗಣೇಶನ್ ಅವರಿಂದ ವಶಕ್ಕೆ ಪಡೆಯಲಾಗಿದೆ. ತಪಾಸಣೆ ವೇಳೆ ಹಣ ಸಾಗಿಸುತ್ತಿದ್ದವರನ್ನು ವಿಚಾರಣೆಗೊಳಪಡಿಸಿದಾಗ ಸ್ಪಷ್ಟ ಮತ್ತು ಸಮಂಜಸ ಉತ್ತರ ನೀಡದೆ ಇರುವ ಹಿನ್ನೆಲೆಯಲ್ಲಿ ಹಣವನ್ನು ಜಪ್ತಿ ಮಾಡಲಾಗಿದ್ದು, ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಿಕೊಂಡು ಹಣವನ್ನು ಖಜಾನೆಯಲ್ಲಿ ಠೇವಣಿ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇಕೆದಾಟು ಯೋಜನೆ ಜಾರಿಗೆ ಡಿಎಂಕೆ ಅಡ್ಡಗಾಲು

ಬೆಂಗಳೂರು, ಮಾ.21(ಕೆಎಂಶಿ)– ಮೇಕೆದಾಟು ಯೋಜನೆಯನ್ನು ಯಾವುದೇ ಕಾರಣಕ್ಕೂ ಜಾರಿ ಮಾಡಲು ಬಿಡುವುದಿಲ್ಲ ಎಂದು ಐ.ಎನ್.ಡಿ.ಐ.ಎ. ಒಕ್ಕೂಟದ ಮಿತ್ರಪಕ್ಷ ಡಿಎಂಕೆ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ್ದು ರಾಜ್ಯ ಕಾಂಗ್ರೆಸ್ ನಾಯಕರು ಇದಕ್ಕೆ ಏನು ಉತ್ತರ ಕೊಡುತ್ತಾರೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಇಂದಿಲ್ಲಿ ಪ್ರಶ್ನಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಉದ್ದೇಶಿಸಿ ಟ್ವೀಟ್ ಮಾಡಿರುವ ಅವರು, ತಮಿಳುನಾಡಿನ ಆಡಳಿತಾರೂಢ ಡಿಎಂಕೆ ತನ್ನ ಪ್ರಣಾಳಿಕೆಯಲ್ಲಿ, ಕೇಂದ್ರದಲ್ಲಿ ಐ.ಎನ್.ಡಿ.ಐ.ಎ. ಅಧಿಕಾರಕ್ಕೆ ಬಂದರೆ ಮೇಕೆದಾಟು ಯೋಜನೆಯನ್ನು ತಡೆಹಿಡಿಯುವುದಾಗಿ ಹೇಳಿಕೊಂಡಿದೆ, ಈಗ ಕರ್ನಾಟಕ ಕಾಂಗ್ರೆಸ್ ನಾಯಕರು ತಮ್ಮ ಶಾಸಕರನ್ನು ಚೆನ್ನೈಗೆ ಕರೆದುಕೊಂಡು ಹೋಗಿ 'ನಮ್ಮ ನೀರು, ನಮ್ಮ ಹಕ್ಕು' ಪ್ರತಿಭಟನೆ ಮಾಡುತ್ತೀರಾ ಎಂದಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಮೆಚ್ಚಿಸಲು ಕನ್ನಡಿಗರ ಹಿತಾಸಕ್ತಿ ಬಲಿಕೊಟ್ಟು ರಾಜಿ ಮಾಡಿಕೊಳ್ಳುತ್ತೀರಾ ಎಂದು ಕೇಳಿದ್ದಾರೆ. ಬೆಂಗಳೂರಿಗೆ ನೀರು ತರುತ್ತೇವೆ ಎಂದು ಮೇಕೆದಾಟು ಪಾದಯಾತ್ರೆ ಮಾಡಿ ಕನ್ನಡಿಗರ ಮೂಗಿಗೆ ತುಪ್ಪ ಸವರಿ ಅಧಿಕಾರಕ್ಕೇರಿದ ಕಾಂಗ್ರೆಸ್, ಈಗ ಕನ್ನಡಿಗರ ಬೆನ್ನಿಗೆ ಚೂರಿ ಹಾಕುತ್ತಿದೆ ಎಂದು ಅಶೋಕ್ ಟೀಕಿಸಿದ್ದಾರೆ. ಡಿಎಂಕೆ ಪ್ರಣಾಳಿಕೆಯಲ್ಲಿನ ಮೇಕೆದಾಟು ವಿಷಯ ಪ್ರಸ್ತಾಪಕ್ಕೆ ಪ್ರತಿಕ್ರಿಯಿಸಿ ಟ್ವೀಟ್ ಮಾಡಿದ್ದಾರೆ.

ಮೂರನೇ ಪುಟದಿಂದ

ಅರವಿಂದ್ ಕೇಜ್ರಿವಾಲ್ ಬಂಧನ

ಆಮ್ ಆದ್ಮಿ ಪಾರ್ಟಿಯ ಕಾರ್ಯಕರ್ತರು ಹಾಗೂ ಕೇಜ್ರಿವಾಲ್ ಅವರ ಬೆಂಬಲಿಗರು ಅಪಾರ ಸಂಖ್ಯೆಯಲ್ಲಿ ದೆಹಲಿ ಮುಖ್ಯಮಂತ್ರಿಗಳ ಅಧಿಕೃತ ನಿವಾಸದ ಮುಂದೆ ಜಮಾಯಿಸಿದರು. ಕೇಜ್ರಿವಾಲ್ ಯಾವುದೇ ಕ್ಷಣದಲ್ಲಾದರೂ ಬಂಧನಕ್ಕೊಳಪಡಿಸುವ ನಿರೀಕ್ಷೆ ಇದ್ದಿದ್ದರಿಂದ ಅಲ್ಲಿಗೆ ಆಗಮಿಸಿದ ನೂರಾರು ಮಂದಿ ಬೆಂಬಲಿಗರು ಕೇಜ್ರಿವಾಲ್ ಅವರಿಗೆ ಜಯಕಾರ ಹಾಕಲು ಶುರು ಮಾಡಿದರು. ಅಲ್ಲಿ ನಿಧಾನವಾಗಿ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತ ಜಾರಿ ನಿರ್ದೇಶನಾಲಯದ ಅಧಿಕಾರಿಗಳೂ ತಡ ಮಾಡದೇ ಅರೇ ಸೇನಾ ಪಡೆಗಳ ತುಕಡಿಗಳನ್ನು ಸ್ಥಳಕ್ಕೆ ಕರೆಸಿದರು. ಸಿಎಂ ನಿವಾಸಕ್ಕೆ ಭಾರೀ ಬಿಗಿಭದ್ರತೆಯನ್ನು ನಿಯೋಜಿಸಲಾಯಿತು. ಅಷ್ಟೇ ಅಲ್ಲದೆ, ಸಿಎಂ ನಿವಾಸದ ಸುತ್ತ 144 ಸೆಕ್ಷನ್ ಜಾರಿಗೊಳಿಲಾಯಿತು. ಭಾರೀ ಬಿಗಿಭದ್ರತೆಯೊಂದಿಗೆ ಕೇಜ್ರಿವಾಲ್ ಅವರನ್ನು ವಶಕ್ಕೆ ಪಡೆದ ಅಧಿಕಾರಿಗಳು ತಮ್ಮೊಂದಿಗೆ ಕರೆದೊಯ್ದರು. ಈಗಾಗಲೇ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಇದೇ ಪ್ರಕರಣದಲ್ಲಿ ಜೈಲುವಾಸ ಅನುಭವಿಸುತ್ತಿದ್ದಾರೆ.

ಇಂಡಿಯಾ ಮೈತ್ರಿಕೂಟ ಖಂಡನೆ: ಕೇಜ್ರಿವಾಲ್ ಬಂಧನವನ್ನು ಇಂಡಿಯಾ ಮೈತ್ರಿಕೂಟದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್‌ಗಾಂಧಿ, ಸೀತಾರಾಮ್ ಯೆಚೂರಿ, ಎಂ.ಕೆ.ಸ್ಟಾಲಿನ್, ಕರ್ನಾಟಕದ ಡಿಸಿಎಂ ಡಿ.ಕೆ.ಶಿವಕುಮಾರ್ ಇತರರು ಖಂಡಿಸಿದ್ದಾರೆ.

ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಆಶೀರ್ವಾದ, ಪ್ರಧಾನಿ ಮೋದಿ ಅವರ ಸಹಕಾರ ಹಾಗೂ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರ ಶ್ರಮದಿಂದ ಮಂಡ್ಯ, ಹಾಸನ, ಕೋಲಾರ ಸೇರಿದಂತೆ ರಾಜ್ಯದ ಎಲ್ಲಾ 28 ಕ್ಷೇತ್ರಗಳಲ್ಲೂ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದರು. ಹೆಚ್‌ಡಿಕೆ ಸ್ಪರ್ಧೆ ಮೂಲಕ ಮಂಡ್ಯ ಎಂದರೆ ಇಂಡಿಯಾ ಎಂಬ ಜನ ನುಡಿ ಧ್ವನಿಸಬೇಕಿದೆ. ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರಿಗೆ ನಿರಾಸೆ ಮಾಡ ಬಾರದು ಎಂಬ ಕಾರಣಕ್ಕೆ ಹೆಚ್‌ಡಿಕೆ ಸ್ಪರ್ಧೆ ಮಾಡಲು ಒಪ್ಪಿಕೊಳ್ಳುತ್ತಿದ್ದಾರೆ. ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಅವರು ಡಿಸ್ಚಾರ್ಜ್ ಆದ ಬಳಿಕ ಮಂಡ್ಯಕ್ಕೆ ಆಗಮಿಸಿ ಅಭ್ಯರ್ಥಿ ಘೋಷಣೆ ಮಾಡಲಿದ್ದಾರೆ. ಸಂಸದೆ ಸುಮಲತಾ ಅಂಬರೀಶ್ ಅವರ ಸ್ಪರ್ಧೆ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಹಿಂದೆ ಯಾವುದೋ ಸಂದರ್ಭದಲ್ಲಿ ಸಣ್ಣಪುಟ್ಟ ಲೋಪದೋಷಗಳು ಆಗಿರಬಹುದು. ರಾಜಕಾರಣದಲ್ಲಿ ಯಾರು ಶತ್ರುವೂ ಅಲ್ಲ, ಮಿತ್ರರು ಅಲ್ಲ. ಅಭ್ಯರ್ಥಿ ಘೋಷಣೆಯಾದ ಬಳಿಕ ಜೆಡಿಎಸ್ ಪಕ್ಷದ ರಾಷ್ಟ್ರೀಯ ಮತ್ತು ರಾಜ್ಯ ನಾಯಕರು ಗೊಂದಲವಾಗದಂತೆ ಎಚ್ಚರಿಕೆ ವಹಿಸಿ ಸಂಸದರೊಡನೆ ಮಾತುಕತೆ ನಡೆಸಲಿದ್ದು, ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುತ್ತೇವೆ ಎಂದು ಹೇಳಿದರು.

ಕುಮಾರಸ್ವಾಮಿ ಅವರು ಹೊರಗಿನವರು ಎಂಬ ಕಾಂಗ್ರೆಸ್ ನಾಯಕರ ಆರೋಪಕ್ಕೆ, ಹೆಚ್‌ಡಿಕೆ ಮುಖ್ಯಮಂತ್ರಿಯಾಗಿದ್ದಾಗ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಒಲ್ಲದ ಮನಸ್ಸಿನಲ್ಲಿಯೇ ಕಾಂಗ್ರೆಸ್ ಜತೆ ಸೇರಿ ಸರ್ಕಾರ ರಚಿಸಿದ್ದಾಗಲೂ ಕಾಂಗ್ರೆಸ್ ನಾಯಕರು ರೈತರ ಸಾಲಮನ್ನಾಕ್ಕೆ ವಿರೋಧ ವ್ಯಕ್ತಪಡಿಸಿದರು. ಆದರೂ ಯಾರ ಮಾತು ಕೇಳದೇ 25 ಸಾವಿರ ಕೋಟಿ ರೈತರ ಸಾಲ ಮನ್ನಾ ಮಾಡಿದರು. ಹೀಗಾಗಿ ಕುಮಾರಸ್ವಾಮಿ ಜನರ ಹೃದಯದಲ್ಲಿ ಇದ್ದಾರೆ. ಮತದಾರರು ಅವರ ಕೈಬಿಡುವುದಿಲ್ಲ. ಬಿಡದಿಯ ತೋಟದ ಮನೆಯಿಂದ ಮಂಡ್ಯಕ್ಕೆ ಬರಲು 20 ನಿಮಿಷ ಸಾಕು. ಕಾಂಗ್ರೆಸ್ ಅಭ್ಯರ್ಥಿ ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿದ್ದಾರೆ. ಇಲ್ಲಿಗೆ ಬರಲು ಒಂದೂವರೆ ಗಂಟೆ ಬೇಕು ಯಾರು ದೂರದಲ್ಲಿದ್ದಾರೆ ಹೇಳಿ ಎಂದು ಪ್ರಶ್ನಿಸಿದರು.

ಜೆಡಿಎಸ್ ನಾಯಕರಿಗೆ ಸ್ವಂತ ತೀರ್ಮಾನ ತೆಗೆದುಕೊಳ್ಳಲು ಆಗಲ್ಲ ಎಂಬ ಸಚಿವ ಚಲುವರಾಯಸ್ವಾಮಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, ಚಲುವರಾಯಸ್ವಾಮಿ ಅವರು ಜೆಡಿಎಸ್‌ನಲ್ಲಿದ್ದಾಗ ಹೆಡ್ ಮಾಸ್ಟರ್ ಆಗಿದ್ದರು. ಅವರ ಮಾತಿನಂತೆ ನಾವು ನಡೆದುಕೊಳ್ಳುತ್ತಿದ್ದೆವು. ಈಗ ಅವರಿಲ್ಲದೆ ನಾವು ಕಂಗಲಾಗಿದ್ದೇವೆ ಎಂದು ವ್ಯಂಗ್ಯವಾಡಿದರು. ಐಎನ್‌ಡಿಐಎ ಒಕ್ಕೂಟದ ಮಿತ್ರ ಪಕ್ಷವಾಗಿರುವ ಡಿಎಂಕೆ ನಾಯಕ ಹಾಗೂ ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್ ಅವರು ಕೇಂದ್ರದಲ್ಲಿ ಇಂಡಿಯಾ ಒಕ್ಕೂಟ ಅಧಿಕಾರಕ್ಕೆ ಬಂದರೆ ಮೇಕೆದಾಟು ಅಣೆಕಟ್ಟೆ ನಿರ್ಮಿಸಲು ಅವಕಾಶ ನೀಡಲ್ಲ ಎಂದು ಪ್ರಣಾಳಿಕೆಯಲ್ಲಿ ಹೇಳಿಕೊಂಡಿದ್ದಾರೆ. ಇಂತಹವರ ಸಹವಾಸ ಮಾಡಿರುವ ಕಾಂಗ್ರೆಸ್ ನಾಯಕರಿಗೆ ನಾಚಿಕೆಯಾಗಬೇಕು ಎಂದು ಕಿಡಿಕಾರಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಮಾಣಿಕ್ಯನಹಳ್ಳಿ ಅಶೋಕ್, ಆರ್.ಸೋಮಶೇಖರ್, ವಿ.ಎಸ್.ನಿಂಗೇಗೌಡ ಇತರರು ಇದ್ದರು.

ಕುಮಾರಸ್ವಾಮಿಗೆ ಯಶಸ್ವಿ ಹೃದಯ ಶಸ್ತ್ರಚಿಕಿತ್ಸೆ

ಎಲ್ಲ ಕಾರ್ಯಕರ್ತರು ಹಾಗೂ ರಾಜ್ಯದ ಸಮಸ್ತ ಜನತೆಯ ಹಾರೈಕೆ ಹಾಗೂ ಆ ಭಗವಂತನ ದಯೆಯಿಂದ ತಂದೆಯವರು ಆರೋಗ್ಯವಾಗಿದ್ದಾರೆ. ತಂದೆಯವರ ಆರೋಗ್ಯಕ್ಕಾಗಿ ಪ್ರಾರ್ಥಿಸಿ, ಹರಸಿದ ಪ್ರತಿಯೊಬ್ಬರಿಗೂ ನಮ್ಮ ಕುಟುಂಬದ ಪರವಾಗಿ ತುಂಬು ಹೃದಯದ ಧನ್ಯವಾದಗಳು. ನಿಮ್ಮ ಪ್ರೀತಿ ವಿಶ್ವಾಸಕ್ಕೆ ಋಣಿಯಾಗಿದ್ದೇವೆ ಎಂದು ಕೃತಜ್ಞತೆ ಸಲ್ಲಿಸಿದ್ದಾರೆ. ರಾಜ್ಯದ ಮಾಜಿ ಮುಖ್ಯಮಂತ್ರಿಗಳು, ಜೆಡಿಎಸ್ ರಾಜ್ಯಾಧ್ಯಕ್ಷರಾದ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಇಂದು ಹೃದಯ ಶಸ್ತ್ರಚಿಕಿತ್ಸೆಯು ಯಶಸ್ವಿಯಾಗಿ ನೆರವೇರಿದೆ. ರಾಜ್ಯದ ಜನತೆಯ ಹರಕೆ, ಆಶೀರ್ವಾದದಿಂದ ಆರೋಗ್ಯವಾಗಿದ್ದು ಸದ್ಯದಲ್ಲಿಯೇ ಮರಳಿ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಆದಷ್ಟು ಶೀಘ್ರವಾಗಿ ಜನಸೇವೆಗೆ ಮರಳಲಿ ಎಂದು ನಾನು ಹಾರೈಸುತ್ತೇನೆ ಎಂದು ಹಾಸನ ಲೋಕಸಭಾ ಸಂಸದ ಪ್ರಜ್ವಲ್ ರೇವಣ್ಣ ಕೂಡ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ. ಈ ಹಿಂದೆಯೇ ಪಕ್ಷದ ಮೂಲಗಳು ಮಾಹಿತಿ ನೀಡಿದ್ದವು. ಮಾ.21ರಂದು ಕುಮಾರಸ್ವಾಮಿ ಅವರಿಗೆ ಹೃದಯ ಶಸ್ತ್ರಚಿಕಿತ್ಸೆ ನಡೆಯಲಿದೆ. ಅದಕ್ಕೂ ಮುನ್ನ ಚೆನ್ನೈ ಆಸ್ಪತ್ರೆಯಲ್ಲಿ ಕೆಲ ಆರೋಗ್ಯ ತಪಾಸಣೆ ನಡೆಯಲಿದೆ. ಶಸ್ತ್ರ ಚಿಕಿತ್ಸೆ ಬಳಿಕ 24ರವರೆಗೂ ಆಸ್ಪತ್ರೆಯಲ್ಲೇ ವಿಶ್ರಾಂತಿ ಪಡೆಯಲಿದ್ದಾರೆ. ಮಾರ್ಚ್ 25ರಂದು ಅವರು ಬೆಂಗಳೂರಿಗೆ ವಾಪಸ್ಸಾಗಲಿದ್ದಾರೆ. ಶಸ್ತ್ರ ಚಿಕಿತ್ಸೆ ಬಳಿಕ ಕೆಲವು ದಿನಗಳ ಕಾಲ ವಿಶ್ರಾಂತಿ ಪಡೆದು ಲೋಕಸಭಾ ಚುನಾವಣೆ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿದ್ದಾರೆ" ಎಂದು ಪಕ್ಷದ ಮೂಲಗಳು ಈ ಹಿಂದೆ ತಿಳಿಸಿದ್ದವು.

ಪ್ರೋತ್ಸಾಹಕ ನಿವೇಶನ ನೀಡಿದ್ದರೆ ಶಿಸ್ತು ಕ್ರಮ

ನಿವೇಶನಗಳನ್ನು ನೀಡಲು ಮಾನದಂಡವೇನು? ಈ ರೀತಿ ಮಂಜೂರು ಮಾಡಲು ಪ್ರಾಧಿಕಾರದ ಸಭೆಯ ಅನುಮೋದನೆ ಪಡೆಯಲಾಗಿದೆಯೇ? ಕಳೆದ 2020ರಿಂದ ಈವರೆಗೆ ಎಷ್ಟು ಪ್ರೋತ್ಸಾಹಕ ನಿವೇಶನಗಳನ್ನು ಮಂಜೂರು ಮಾಡಲಾಗಿದೆ ಎಂಬ ಮಾಹಿತಿಯನ್ನು ವಾರದೊಳಗೆ ಸಲ್ಲಿಸುವಂತೆಯೂ ಅಧ್ಯಕ್ಷರು ತಮ್ಮ ಟಿಪ್ಪಣಿಯಲ್ಲಿ ತಿಳಿಸಿದ್ದಾರೆ. ಮುಡಾ ಸಭೆಯ ಅನುಮೋದನೆಯಲ್ಲದೆ ಹೆಚ್ಚುವರಿಯಾಗಿ ಪ್ರೋತ್ಸಾಹಕ ನಿವೇಶನಗಳನ್ನು ನೀಡಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು ಎಂದೂ ಕೆ.ಮರೀಗೌಡರು ಟಿಪ್ಪಣಿ ಮೂಲಕ ಎಚ್ಚರಿಕೆ ನೀಡಿದ್ದಾರೆ. ಈ ಹಿಂದೆ ಪ್ರೋತ್ಸಾಹಕ ನಿವೇಶನ ಮಂಜೂರು ಮಾಡಿರುವ ಕಡತಗಳಿಂದ ಆದೇಶದ ಹಾಳೆಗಳನ್ನು ತೆಗೆದು ಹಾಕಿ, ಭೂಮಾಲೀಕರಿಂದ ಅರ್ಜಿ ಪಡೆದು ಇತ್ತೀಚೆಗೆ ಅಕ್ರಮವಾಗಿ ಅತೀ ಬೆಲೆ ಬಾಳುವ ನಿವೇಶನ ಮಂಜೂರು ಮಾಡಿ ರುವ ಸಾವಿರಕ್ಕೂ ಹೆಚ್ಚು ಪ್ರಕರಣ ನಡೆದಿದ್ದು, ಈ ವ್ಯವಹಾರದಲ್ಲಿ ಕೋಟ್ಯಾಂತರ ರೂ. ಅಕ್ರಮ ವಹಿವಾಟು ನಡೆದಿದೆ ಎಂದು ತಿಳಿದು ಬಂದ ಹಿನ್ನೆಲೆಯಲ್ಲಿ ಮುಡಾ ಅಧ್ಯಕ್ಷರು ತನಿಖೆ ಆರಂಭಿಸಿದ್ದಾರೆ. ಈ ಹಗರಣದಲ್ಲಿ ಅಧಿಕಾರಿಗಳು, ಮಧ್ಯವರ್ತಿಗಳ ಕೈವಾಡವಿದ್ದು ಪ್ರಾಧಿಕಾರಕ್ಕೆ ಕೋಟ್ಯಾಂತರ ರೂ. ಆರ್ಥಿಕ ನಷ್ಟ ಉಂಟು ಮಾಡಿರುವವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ರೀತಿಯ ಶಿಸ್ತು ಕ್ರಮ ಜರುಗಿಸಲಾಗುವುದೆಂದೂ ಮುಡಾ ಅಧ್ಯಕ್ಷರು ತಿಳಿಸಿದ್ದಾರೆ. ಪ್ರಾಧಿಕಾರದ ಸಭೆ ಹಾಗೂ ಸರ್ಕಾರದ ಅನುಮೋದನೆ ಪಡೆಯದೇ ಈ ರೀತಿ ಕಾನೂನುಬಾಹಿರವಾಗಿ ಮಂಜೂರು ಮಾಡಿರುವ ನಿವೇಶನಗಳು ಅರ್ಹ ಭೂಮಾಲೀಕರಿಗೆ ಸಿಗದೆ ಮಧ್ಯವರ್ತಿಗಳ ಪಾಲಾಗಿವೆ. ಈ ಸಂಬಂಧ ತುಂಡು ಭೂಮಿ ಹಂಚಿಕೆ, ಭೂಪರಿಹಾರವಾಗಿ ನಿವೇಶನ ಮಂಜೂರು ಮಾಡುವ ಕುರಿತಂತೆ ಮಾರ್ಗಸೂಚಿ ಹೊರಡಿಸುವವರೆಗೂ ಯಾವುದೇ ನಿರ್ಣಯ ಕೈಗೊಳ್ಳದಂತೆ 2023ರ ಮಾ.14ರಂದು ಸರ್ಕಾರ ಮುಡಾ ಆಯುಕ್ತರಿಗೆ ನಿರ್ದೇಶನ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ದೇವರಾಜ ಮಾರುಕಟ್ಟೆ ಆಜುಬಾಜು ಫುಟ್‌ಪಾತ್ ಒತ್ತುವರಿ ತೆರವು





ಮೈಸೂರಿನ ದೇವರಾಜ ಮಾರುಕಟ್ಟೆ ಆವರಣ ಮತ್ತು ಸುತ್ತಲಿನ ಫುಟ್‌ಪಾತ್ ಒತ್ತುವರಿಯನ್ನು ಪಾಲಿಕೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ತೆರವುಗೊಳಿಸಿದರು.

ಮೈಸೂರು, ಮಾ.21(ಆರ್‌ಕೆ)–ಮೈಸೂರಿನ ದೇವರಾಜ ಮಾರುಕಟ್ಟೆ ಆವರಣ ಮತ್ತು ಸುತ್ತಲಿನ ಫುಟ್‌ಪಾತ್ ಒತ್ತುವರಿಯನ್ನು ಪಾಲಿಕೆ ಅಧಿಕಾರಿಗಳು ಇಂದು ಕಾರ್ಯಾಚರಣೆ ನಡೆಸಿ, ತೆರವುಗೊಳಿಸಿದರು.

ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ–6ರ ವಲಯಾಧಿಕಾರಿ ವಾಣಿ ಆಳ್ವಾ ಅವರ ನೇತೃತ್ವದಲ್ಲಿ ಬೆಳಗ್ಗೆ 9.30 ರಿಂದ ಮಧ್ಯಾಹ್ನ 12.45 ಗಂಟೆವರೆಗೆ ಸುಮಾರು 100ಕ್ಕೂ ಹೆಚ್ಚು ಫುಟ್‌ಪಾತ್ ಮಾರಾಟ ಅಂಗಡಿಗಳನ್ನು ತೆರವುಗೊಳಿಸಲಾಯಿತು.

ದೇವರಾಜ ಮಾರುಕಟ್ಟೆ ಒಳಗೆ ಗ್ರಾಹಕರು ಓಡಾಡುವ ಜಾಗದಲ್ಲಿ ಅನಧಿಕೃತವಾಗಿ ತರಕಾರಿ, ಹೂ, ಹಣ್ಣು ಇಟ್ಟು ಮಾರಾಟ ಮಾಡುತ್ತಿದ್ದರು. ಅದೇ ರೀತಿ ಹೊರ ಆವರಣದ ಸಯ್ಯಾಜಿರಾವ್ ರಸ್ತೆಯ ಫುಟ್‌ಪಾತ್ ಒತ್ತುವರಿ ಮಾಡಿಯೂ ವ್ಯಾಪಾರ ಮಾಡುತ್ತಿದ್ದರು. ಪರಿಣಾಮ ಸಾರ್ವಜನಿಕರು ಓಡಾಡಲು ತೀವ್ರ ತೊಂದರೆಯಾಗುತ್ತಿತ್ತು. ಈ ಬಗ್ಗೆ ಹಲವು ಲಿಖಿತ ದೂರುಗಳು ಬಂದ ಕಾರಣ ಸ್ಥಳ ಪರಿಶೀಲಿಸಿದ್ದ ಪಾಲಿಕೆ ವಲಯಾಧಿಕಾರಿ ವಾಣಿ ಆಳ್ವಾ, ಪರಿಸರ ಇಂಜಿನಿಯರ್ ಮೈತ್ರಿ ನೇತೃತ್ವದಲ್ಲಿ ಇಂದು ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು, ಒತ್ತುವರಿ ಮಾಡಿಕೊಂಡು ಅನಧಿಕೃತವಾಗಿ ವ್ಯಾಪಾರ ಮಾಡುತ್ತಿದ್ದವರನ್ನು ತೆರವು ಮಾಡಿಸಿದರು.

ಕೆಲವು ಫುಟ್‌ಪಾತ್ ವ್ಯಾಪಾರಿಗಳು ವಾಗ್ವಾದಕ್ಕಿಳಿದರಾದರೂ ಅನುಮತಿ ಪಡೆದು ವ್ಯಾಪಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದವರು ತಾವಾಗಿಯೇ ಅಂಗಡಿಗಳನ್ನು ತೆರವುಗೊಳಿಸಿದರು.

ಇಂದಿನ ಕಾರ್ಯಾಚರಣೆಯಲ್ಲಿ 100ಕ್ಕೂ ಹೆಚ್ಚು ಅನಧಿಕೃತ ಮಾರಾಟ ಸ್ಥಳವನ್ನು ತೆರವುಗೊಳಿಸಿದ ಅಧಿಕಾರಿಗಳು, ಮತ್ತೆ ಫುಟ್‌ಪಾತ್‌ನಲ್ಲಿ ಮಾರಾಟ ನಡೆಸಿದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದಾಗಿ ವಾಣಿ ಆಳ್ವಾ ಅವರು ಎಚ್ಚರಿಸಿದ್ದಾರೆ.

ಫುಟ್‌ಪಾತ್ ತೆರವು ಕಾರ್ಯಾಚರಣೆ ಮುಂದುವರಿಯಲಿದ್ದು, ಸಾರ್ವಜನಿಕರಿಗೆ ಓಡಾಡಲು ಮೀಸಲಿರುವ ಜಾಗದಲ್ಲಿ ಮತ್ತೆ ಅಂಗಡಿ–ಮುಂಗಟ್ಟು ಇರಿಸಿದರೆ ಅಂತಹವರಿಗೆ ದುಬಾರಿ ದಂಡ ವಿಧಿಸಲಾಗುವುದು ಎಂದು ಪಾಲಿಕೆ ವಲಯಾಧಿಕಾರಿ ವಾಣಿ ಆಳ್ವಾ ಎಚ್ಚರಿಕೆ ನೀಡಿದ್ದಾರೆ.

ಆರೋಗ್ಯ ನಿರೀಕ್ಷಕರಾದ ಬಸವರಾಜು, ಮಂಜು ಕುಮಾರ್, ಕೃಷ್ಣ, ವರ್ಕ್ ಇನ್ಸ್‌ಪೆಕ್ಟರ್ ಶಾಂತರಾಜ್, ಅಭಯ–2 ತಂಡದ ಸಿಬ್ಬಂದಿ, ದೇವರಾಜ ಮಾರುಕಟ್ಟೆಯಲ್ಲಿರುವ ಪಾಲಿಕೆ ಕಚೇರಿ ಶಾಖೆ ಸಿಬ್ಬಂದಿ ಇಂದಿನ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮನೆ ಮನೆಗೆ ತೆರಳಿ ಮತದಾನ ಜಾಗೃತಿ



ಜಿಪಂ ಸಿಇಓ ಕೆ.ಎಂ.ಗಾಯತ್ರಿ ನೇತೃತ್ವದಲ್ಲಿ ಮತದಾನ ಜಾಗೃತಿ ಮೂಡಿಸಲಾಯಿತು.

ಮೈಸೂರು, ಮಾ.21(ಎಂಕೆ)– ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ಸ್ವೀಪ್ ವತಿಯಿಂದ ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಗುರುವಾರ ಮನೆ ಮನೆಗೆ ತೆರಳಿ ಮತದಾನ ಮಾಡುವಂತೆ ಜಾಗೃತಿ ಮೂಡಿಸಲಾಯಿತು.

ಈ ವೇಳೆ ಜಿಪಂ ಸಿಇಓ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರೂ ಆದ ಕೆ.ಎಂ.ಗಾಯತ್ರಿ, ಮತದಾನ ಜಾಗೃತಿ ಕರಪತ್ರಗಳನ್ನಿಡಿದು ಮನೆ ಮನೆಗೆ ತೆರಳಿ ಕಡ್ಡಾಯ ಮತದಾನದಲ್ಲಿ ಪಾಲ್ಗೊಳ್ಳಿ, ಮತದಾನ ಅರಿವು ನಿಮಗೂ ಇರಲಿ, ಏ.26 ರಂದು ತಪ್ಪದೇ ಮತದಾನ ಮಾಡುವಂತೆ ಮತದಾರರಿಗೆ ಮನವಿ ಮಾಡಿದರು.

ವೃದ್ಧ ಮತದಾರರಿಗೆ, ಮಹಿಳಾ ಮತದಾರರಿಗೆ ಮುಕ್ತ ಮತದಾನಕ್ಕೆ ಜಿಲ್ಲಾಡಳಿತವು ಸೌಲಭ್ಯಗಳನ್ನು ಕಲ್ಪಿಸಿರುವ ಬಗ್ಗೆ ತಿಳಿಸಿಕೊಟ್ಟರು. ಎಲ್ಲಾ ಮತದಾರರು ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವ ಬಗ್ಗೆ ವೋಟರ್ ಹೆಲ್ಪ್‌ಲೈನ್ ಆ್ಯಪ್ ಮೂಲಕ ಖಚಿತಪಡಿಸಿಕೊಳ್ಳಬಹುದಾಗಿದೆ. ಸಿ–ವಿಜಿಲ್ ಆ್ಯಪ್ ಮೂಲಕ ಚುನಾವಣಾ ಅಕ್ರಮಗಳನ್ನು ಜಿಲ್ಲಾಡಳಿತಕ್ಕೆ ತಿಳಿಸಿಕೊಡುವ ಮೂಲಕ ನ್ಯಾಯಸಮ್ಮತ ಚುನಾವಣೆಗೆ ಸಹಕಾರ ನೀಡಬೇಕೆಂದು ಜಾಗೃತಿ ಮೂಡಿಸಿದರು.

ಬಳಿಕ ಅಂಗನವಾಡಿ ಕಾರ್ಯಕರ್ತೆಯರು, ಪಟ್ಟಣ ಪಂಚಾಯಿತಿ ಅಧಿಕಾರಿಗಳು ಹಾಗೂ ಸಾರ್ವಜನಿಕರ ಜತೆಗೂಡಿ ಮಾನವ ಸರಪಳಿ ನಿರ್ಮಿಸಿ ಮತದಾನದ ಪ್ರತಿಜ್ಞಾ ವಿಧಿ ಬೋಧಿಸುವ ಮೂಲಕವೂ ಮತದಾನ ಕುರಿತು ಅರಿವು ಮೂಡಿಸಲಾಯಿತು. ಅಲ್ಲದೆ ಮತದಾನ ಜಾಗೃತಿ ಮೂಡಿಸುವ ಸ್ವಚ್ಛತಾ ವಾಹನಗಳಿಗೂ ಚಾಲನೆ ನೀಡಿ, ಮತದಾನದ ಅರಿವಿನ ಕರಪತ್ರಗಳನ್ನು ವಿತರಿಸಲಾಯಿತು.

ಸಹಾಯಕ ಸ್ವೀಪ್ ನೋಡಲ್ ಅಧಿಕಾರಿಗಳಾದ ಎಂ.ಶಾಂತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಹೆಚ್.ಆರ್.ಸುರೇಶ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಬ್ಬಯ್ಯ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಿ.ಕುರಿಯ ಕೋಷ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ನಿರೂಪಣಾಧಿಕಾರಿ ಮಂಜುನಾಥ್ ಮತ್ತಿತರರಿದ್ದರು.

ಕೆಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆಯಲ್ಲಿ ಫುಟ್‌ಪಾತ್ ಒತ್ತುವರಿ

ಮೈಸೂರು,ಮಾ.21(ಆರ್‌ಕೆ)–ಮೈಸೂರಿನ ಪ್ರಮುಖ ವಾಣಿಜ್ಯ ಕೇಂದ್ರಗಳಾದ ಕೆಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆ, ಓಲ್ಡ್ ಬ್ಯಾಂಕ್ ರೋಡ್, ಮಕ್ಕಾಜಿ ಚೌಕ ಸೇರಿದಂತೆ ಹಲವೆಡೆ ಫುಟ್‌ಪಾತ್ ಒತ್ತುವರಿಯಾಗಿದೆ. ಇಂದು ಪಾಲಿಕೆ ಅಧಿಕಾರಿಗಳು ಕೇವಲ ದೇವರಾಜ ಮಾರುಕಟ್ಟೆ ಅದಕ್ಕೆ ಹೊಂದಿ ಕೊಂಡಂತಿರುವ ಸಯ್ಯಾಜಿ ರಾವ್ ರಸ್ತೆಯ ಒಂದು ಬದಿಯ ಪಾದಚಾರಿ ರಸ್ತೆಯಲ್ಲಿ ವ್ಯಾಪಾರ ಮಾಡುತ್ತಿದ್ದವರನ್ನು ಮಾತ್ರ ತೆರವುಗೊಳಿಸಿದ್ದಾರೆ.

ಈ ಹಿಂದೆ ಶಿವಕುಮಾರ್ ಮೇಯರ್ ಆಗಿದ್ದಾಗ ಮಕ್ಕಾಜಿ ಚೌಕ ಮತ್ತು ಕೆಆರ್ ಸರ್ಕಲ್‌ನಲ್ಲಿ ಫುಟ್‌ಪಾತ್ ಒತ್ತುವರಿ ತೆರವುಗೊಳಿಸಿದ್ದರಾದರೂ, ಎರಡು ದಿನಗಳ ನಂತರ ಮತ್ತೆ ವ್ಯಾಪಾರಿಗಳು ಅಲ್ಲೇ ವ್ಯಾಪಾರ ಆರಂಭಿಸಿದ್ದರು. ಜನಪ್ರತಿನಿಧಿಗಳು ಮಧ್ಯ ಪ್ರವೇಶಿಸಿ ಅವರಿಗೆ ಆಶ್ರಯ ನೀಡಿದ್ದರು.

ಆದರೆ ಸಾರ್ವಜನಿಕರು ಓಡಾಡಲೆಂದು ಇರುವ ಫುಟ್‌ಪಾತ್ ಮೇಲೆ ವ್ಯಾಪಾರ ಮಾಡುತ್ತಿರುವುದರಿಂದ ಜನರು ಅನಿವಾರ್ಯವಾಗಿ ರಸ್ತೆಗಿಳಿದು ಅಪಘಾತಗಳಿಗೆ ಕಾರಣವಾಗುತ್ತಿದೆ. ಪಾಲಿಕೆ ಅಧಿಕಾರಿಗಳು ಈಗಲಾದರೂ ಕಾರ್ಯಾಚರಣೆ ನಡೆಸಿ ಒತ್ತುವರಿ ತೆರವುಗೊಳಿಸಿ ಪಾದಚಾರಿಗಳಿಗೆ ಮುಕ್ತ ಅವಕಾಶ ಮಾಡಿಕೊಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕೆಆರ್ ಸರ್ಕಲ್‌ನಿಂದ ಹೈವೇ ಸರ್ಕಲ್ ವರೆಗೂ ಸಯ್ಯಾಜಿರಾವ್ ರಸ್ತೆಯ ಎರಡೂ ಕಡೆ ಫುಟ್‌ಪಾತ್ ಒತ್ತುವರಿಯಾಗಿ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದ್ದರೂ, ಪಾಲಿಕೆ ಅಧಿಕಾರಿಗಳು ಹಾಗೂ ಸಂಚಾರ ಪೊಲೀಸರು ಕಣ್ಮುಚ್ಚಿ ಕುಳಿತಿರುವುದು ನಾಗರಿಕರ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ

ನಾಳೆ ಜೆಎಸ್‌ಎಸ್ ವೈದ್ಯಕೀಯ ಮಹಾ ವಿದ್ಯಾಲಯದ ಪದವೀಧರರ ದಿನಾಚರಣೆ

ಮೈಸೂರು, ಮಾ.21(ಜಿಎ)–ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾ ವಿದ್ಯಾಲಯದ ಪದವೀಧರರ ದಿನಾಚರಣೆಯನ್ನು ಮಾ.23ರ ಸಂಜೆ 4 ಗಂಟೆಗೆ ಜೆಎಸ್‌ಎಸ್ ವೈದ್ಯಕೀಯ ಸಂಸ್ಥೆಗಳ ಕ್ಯಾಂಪಸ್‌ನಲ್ಲಿ ನಡೆಸಲಾಗುತ್ತಿದೆ ಎಂದು ಪ್ರಾಚಾರ್ಯರಾದ ಡಾ.ಎಚ್. ಬಸವನಗೌಡಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟ್‌ಸೂರ್‌ಮಠ್ ಅಧ್ಯಕ್ಷತೆ ವಹಿಸುವರು, ಸಮಕುಲಾಧಿಪತಿಗಳಾದ ಡಾ.ಬಿ.ಸುರೇಶ್ ಮತ್ತು ಡಾ.ಸುರೀಂದರ್ ಸಿಂಗ್ ವೇದಿಕೆಯಲ್ಲಿರುವರು. ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಪುರಸ್ಕೃತ ಹಾಗೂ ಮುಂಬಯಿಯ ಲೀಲಾವತಿ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆಯ ಹಿರಿಯ ಸಮಾಲೋಚಕ ಡಾ. ಶಶಾಂಕ್ ಆರ್.ಜೋಶಿ ಆಗಮಿಸುವರು ಎಂದರು.

ಪದವೀಧರರ ದಿನಾಚರಣೆಯಲ್ಲಿ 204 ವಿದ್ಯಾರ್ಥಿಗಳು ಪದವಿ ಪ್ರಮಾಣಪತ್ರ ಹಾಗೂ ಎಂಟು ಮಂದಿ ಪ್ರತಿಭಾನ್ವಿತ ವಿದ್ಯಾರ್ಥಿಗಳು 12 ಚಿನ್ನದ ಪದಕ ಹಾಗೂ 12 ನಗದು ಬಹುಮಾನ ಸ್ವೀಕರಿಸಲಿದ್ದಾರೆ. ಕೋಲ್ಕತಾ ಮೂಲದ ಡಾ.ಸುಬ್ರದೀಪ್ ಧಾರ್ ಆರು ಚಿನ್ನದ ಪದಕ, ಮೈಸೂರಿನ ಡಾ. ರೋಹಿತ್ ಆರ್. ನಾಯರ್ ಮೂರು ಚಿನ್ನದ ಪದಕ, ಡಾ.ಎಸ್.ಎಂ. ತೇಜಾಶ್ರೀ ಎರಡು ಚಿನ್ನದ ಪದಕ ಸ್ವೀಕರಿಸಲಿದ್ದಾರೆ. ಈ ವೇಳೆ ಅತ್ಯುತ್ತಮ ಸೇವೆ ಸಲ್ಲಿಸಿದ ಬೋಧಕರನ್ನು ಸನ್ಮಾನಿಸಿ, ಗೌರವಿಸಲಾಗುವುದೆಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಸುಧೀಂದ್ರ ಭಟ್, ಡಾ.ಬಿ.ಮಂಜುನಾಥ್, ಡಾ.ಪ್ರವೀಣ್ ಕುಲಕರ್ಣಿ, ಡಾ.ಸುಮಾ, ಸತೀಶ್‌ಚಂದ್ರ, ಡಾ.ಮಹಂತಪ್ಪ ಉಪಸ್ಥಿತರಿದ್ದರು.

ಪ್ರೊ.ಚ.ಸರ್ವಮಂಗಳರ 'ಅಮ್ಮನಗುಡ್ಡ–ಅಂತರಾಳ' ಕೃತಿ ಬಿಡುಗಡೆ



ಹಿರಿಯ ಲೇಖಕಿ ಪ್ರೊ.ಚ.ಸರ್ವಮಂಗಳ ಅವರ 'ಅಮ್ಮನಗುಡ್ಡ–ಅಂತರಾಳ' ಕೃತಿಯನ್ನು ನಿವೃತ್ತ ಪ್ರಾಧ್ಯಾಪಕ ಪ್ರೊ.ಬಸವರಾಜು ಕಲ್ಗುಡಿ ಗುರುವಾರ ಲೋಕಾರ್ಪಣೆಗೊಳಿಸಿದರು.

ಮೈಸೂರು, ಮಾ.21(ಎಂಕೆ)– ಹಿರಿಯ ಲೇಖಕಿ ಪ್ರೊ.ಚ.ಸರ್ವಮಂಗಳ ಅವರ 'ಅಮ್ಮನಗುಡ್ಡ–ಅಂತರಾಳ' ಕೃತಿಯನ್ನು ಗುರುವಾರ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಕಸಾಪ ಸಭಾಂಗಣದಲ್ಲಿ ಕನ್ನಡ ಲೇಖಕಿಯರ ಟ್ರಸ್ಟ್ ಸಹಯೋಗದೊಂದಿಗೆ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಬೆಂಗಳೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಬಸವರಾಜು ಕಲ್ಗುಡಿ ಕೃತಿ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಹಿರಿಯ ಲೇಖಕಿ ಚ.ಸರ್ವಮಂಗಳ ಅವರು, 'ಅಮ್ಮನಗುಡ್ಡ–ಅಂತರಾಳ' ಕೃತಿಯ ಮೂಲಕ ಅರ್ಥಗರ್ಭಿತ ಕಾವ್ಯಗಳಿಂದ ಹೆಣ್ಣು ಪ್ರತಿನಿತ್ಯ ಅನುಭವಿಸುವ ಸಂಕಷ್ಟಗಳನ್ನು ಅರ್ಥವತ್ತಾಗಿ ಪ್ರಸ್ತುತಪಡಿಸಿದ್ದಾರೆ. ಹೆಣ್ಣಿನ ಅಂತರಾಳದಲ್ಲಿ ನಡೆಯುವ ಸಂಘರ್ಷಗಳ ಕುರಿತು ಸೂಕ್ಷ್ಮ ಅಂಶಗಳನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ಕೃತಿಯ ಕೆಲವು ಕವನಗಳನ್ನು ಓದಿ, ಅರ್ಥ ವಿವರಿಸಿದರು.

ನಂತರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕುರಿತು ನಿವೃತ್ತ ಪ್ರಾಧ್ಯಾಪಕಿ ಡಾ.ಹೆಚ್.ಎಂ.ಕಲಾಶ್ರೀ ಮಾತನಾಡಿದರು. ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕಿ ಡಾ.ಎಸ್.ಡಿ. ಶಶಿಕಲಾ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಲೇಖಕಿಯರ ಟ್ರಸ್ಟ್ ಅಧ್ಯಕ್ಷೆ ಪ್ರೊ.ಪದ್ಮಾಶೇಖರ್, ಕಾರ್ಯದರ್ಶಿ ಹೇಮಾನಂದೀಶ್, ಸಹ ಕಾರ್ಯದರ್ಶಿ ಮೀನಾ ಮೈಸೂರು, ಮೈನಾ ಕಾರ್ಯಪ್ಪ ಮತ್ತಿತರರು ಉಪಸ್ಥಿತರಿದ್ದರು.

12 ದಿನಗಳ ಕಾಲ ಸಿಇಟಿ ಉಚಿತ ತರಬೇತಿ

ಮೈಸೂರು, ಮಾ.21(ಜಿಎ)–ತಾಂಡವಪುರದಲ್ಲಿರುವ ಮಹಾರಾಜ ತಾಂತ್ರಿಕ ಮಹಾ ವಿದ್ಯಾಲಯದ ವತಿಯಿಂದ ಇದೇ ಮಾ. 25 ರಿಂದ ಏ.8ರವರೆಗೆ 12 ದಿನಗಳ ಸಿಇಟಿ ಉಚಿತ ತರಬೇತಿ ಆಯೋಜಿಸಲಾಗಿದೆ ಎಂದು ಶಿಕ್ಷಣ ಸಂಸ್ಥೆಯ ಬುದ್ಧಿಮತ್ತೆ ಮತ್ತು ತಂತ್ರಾಂಶ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಮೊಹಮ್ಮದ್ ಸಲಾಮತ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತರಬೇತಿ ವೇಳೆ ಮೈಸೂರು, ಚಾಮರಾಜನಗರ, ನಂಜನಗೂಡು, ಟಿ.ನರಸೀಪುರ, ಹೆಚ್.ಡಿ. ಕೋಟೆ, ಗುಂಡ್ಲುಪೇಟೆ, ಮಳವಳ್ಳಿ, ಸರಗೂರು, ಕೆ.ಆರ್. ನಗರ, ಕೆ.ಆರ್. ಪೇಟೆ ಮತ್ತು ಹುಣಸೂರಿನಿಂದ ಉಚಿತ ಬಸ್ ಸೌಲಭ್ಯ ಕಲ್ಪಿಸಲಾಗಿದೆ. ಅಲ್ಲದೆ, ಮಧ್ಯಾಹ್ನದ ಊಟದ ವ್ಯವಸ್ಥೆ ಸಹ ಇರಲಿದ್ದು, ನಗರದ ಪ್ರತಿಷ್ಠಿತ ಪಿಯು ಕಾಲೇಜುಗಳ ಪರಿಣತ ಹಾಗೂ ಅನುಭವಿ ಉಪನ್ಯಾಸಕರು ತರಬೇತಿ ನೀಡಲಿದ್ದಾರೆ. ಆಸಕ್ತರು ಹೆಚ್ಚಿನ ಮಾಹಿತಿಗೆ ದೂ. 99808 32371 ಅನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರದೀಪ್ ಉಪಸ್ಥಿತರಿದ್ದರು.

ನಾಳೆ ಹರಿಶ್ಚಂದ್ರ ಘಾಟ್‌ನಲ್ಲಿ ಸ್ವಚ್ಛತಾ ಕಾರ್ಯಕ್ರಮ

ಮೈಸೂರು, ಮಾ.21(ಜಿಎ)–ಮೈಸೂರು ಎಕ್ಸ್ ಸರ್ವಿಸ್‌ಮೆನ್ ಮೂಮೆಂಟ್ ವತಿಯಿಂದ ಹುತಾತ್ಮರ ದಿನದ ಅಂಗವಾಗಿ ಮಾ. 23 ರಂದು ನಗರದ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಸಿ.ಎಂ. ಶ್ರೀಧರ್ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 7ರಿಂದ 10 ಗಂಟೆವರೆಗೆ ಸ್ವಚ್ಛತಾ ಕಾರ್ಯ ನಡೆಯಲಿದೆ. ಸುಮಾರು ಮುನ್ನೂರು ಮಂದಿ ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ವಿ.ಮಹೇಶ್, ಕಿಶೋರ್ ಕದಂ ಉಪಸ್ಥಿತರಿದ್ದರು.

ಲೋಕಸಭಾ ಚುನಾವಣೆ ಹಿನ್ನೆಲೆ

ಸಾಮಾಜಿಕ ಜಾಲತಾಣಗಳಲ್ಲಿ ಊಹಾಪೋಹ ಹರಿಬಿಟ್ಟೀರಿ... ಜೋಕೆ

● ವಾಟ್ಸಪ್ ಗುಂಪುಗಳ ಮೇಲೂ ನಿಗಾ ● ವೈರಲ್ ವಿಡಿಯೋಗಳನ್ನು ಪರಿಶೀಲಿಸುವ ತಂಡ



ಮೈಸೂರು,ಮಾ.21(ಎಂಟಿವೈ)– ಲೋಕಸಭಾ ಚುನಾವಣೆ ಅಂಗವಾಗಿ ರಾಜಕೀಯ ಪಕ್ಷಗಳ ಕಾರ್ಯಕರ್ತರು, ಅಭ್ಯರ್ಥಿಗಳ ಬೆಂಬಲಿಗರು ವಾಟ್ಸಪ್ ಗ್ರೂಪ್ ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಮಾಡುವ ಪ್ರಚಾರ, ನೀತಿ ಸಂಹಿತೆ ಉಲ್ಲಂಘಿಸುವ, ಪ್ರಚೋದನೆ, ಊಹಾಪೋಹ ಹಾಗೂ ತೇಜೋವಧೆ ಮಾಡುವ ಸುಳ್ಳು ಸಂದೇಶಗಳನ್ನು ಕಳುಹಿಸುವವರ ಮೇಲೂ ಚುನಾವಣಾ ಆಯೋಗ ಹದ್ದಿನಕಣ್ಣಿಡಲಿದೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನೀತಿ ಸಂಹಿತೆ ಉಲ್ಲಂಘನೆ ತಡೆಗಟ್ಟುವ ನಿಟ್ಟಿನಲ್ಲಿ ಚುನಾವಣಾ ಆಯೋಗ ವಿವಿಧ ತಂಡಗಳನ್ನು ರಚಿಸಿದ್ದು, ಅವುಗಳಲ್ಲಿ ಸೋಶಿಯಲ್ ಮೀಡಿಯಾ ತಂಡವೂ ಒಂದಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರವಾಗುವ ಮಾಹಿತಿ, ಚುನಾವಣಾ ಪ್ರಚಾರ ಸೇರಿದಂತೆ ಲೋಕಸಭಾ ಚುನಾವಣೆ ಸಂಬಂಧಿತ ಊಹಾಪೋಹ, ಭರವಸೆ ನೀಡುವ ಸುದ್ದಿಗಳನ್ನು ಗಮನಿಸುವ ಕಾರ್ಯವನ್ನು ಸೋಶಿಯಲ್ ಮೀಡಿಯಾ ತಂಡ ಆರಂಭಿಸಿದೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಚುನಾವಣಾ ವಿಭಾಗದಲ್ಲಿ ಸೋಶಿಯಲ್ ಮೀಡಿಯಾ ಘಟಕ ಕಾರ್ಯನಿರ್ವಹಿಸುತ್ತಿದ್ದು, ಸಾಮಾಜಿಕ ಜಾಲತಾಣಗಳಾದ ವಾಟ್ಸಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಟ್ವಿಟರ್, ಥ್ರೆಡ್ಸ್, ಎಕ್ಸ್ ಖಾತೆ, ಯೂಟ್ಯೂಬ್ ಸೇರಿದಂತೆ ಇನ್ನಿತರ ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ಇಟ್ಟಿದೆ. ಈಗಾಗಲೇ ರಾಜಕೀಯ ಪಕ್ಷಗಳ ಸಾಮಾಜಿಕ ಜಾಲತಾಣಗಳ ಅಧಿಕೃತ ಖಾತೆಗಳನ್ನು ಈ ತಂಡ ಗಮನಿಸುತ್ತಿದೆ. ಇದೀಗ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಸಂಬಂಧ ಮಾಹಿತಿ ಹರಿಬಿಡುವ ವಾಟ್ಸಪ್ ಗ್ರೂಪ್‌ಗಳ ಮೇಲೆ ನಿಗಾ ಇಟ್ಟಿದೆ. ಅದರಲ್ಲೂ ಯಾವುದೇ ಗ್ರೂಪ್‌ಗಳಲ್ಲಿ ಚುನಾವಣೆ ಸಂಬಂಧ ಅಸಂಬದ್ಧ ಹಾಗೂ ಪ್ರಚೋದನಾಕಾರಿ, ಊಹಾಪೋಹದ ಸಂದೇಶ ರವಾನೆ ಬಗ್ಗೆ ಸಾರ್ವಜನಿಕರು ಮಾಹಿತಿ ನೀಡಿದರೆ ತುರ್ತಾಗಿ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ. ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುವ ಚುನಾವಣಾ ಸಂಬಂಧಿತ ಹೇಳಿಕೆಗಳು, ರಾಜಕೀಯ ಪಕ್ಷಗಳ ಮುಖಂಡರ ಭಾಷಣದ ತುಣುಕುಗಳುಳ್ಳ ವಿಡಿಯೋಗಳನ್ನು ಅಧಿಕಾರಿಗಳು ಸ್ವಯಂ ಪರಿಶೀಲಿಸಲಿದ್ದಾರೆ.

ಈ ಕುರಿತು ಸೋಶಿಯಲ್ ಮೀಡಿಯಾ ತಂಡ ನೋಡಲ್ ಅಧಿಕಾರಿ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಂಶೋಧನಾಧಿಕಾರಿ ಹೆಚ್.ಎಸ್.ಬಿಂಧ್ಯಾ ಮಾತನಾಡಿ, ನಿಗದಿತ ವಾಟ್ಸಪ್ ಗ್ರೂಪ್‌ಗಳಲ್ಲಿ ನೀತಿ ಸಂಹಿತೆ ಉಲ್ಲಂಘನೆ ಸೇರಿದಂತೆ ಇನ್ನಿತರ ಸಂದೇಶ ಕಳುಹಿಸಿರುವುದು ಕಂಡು ಬಂದರೆ, ಆ ಗ್ರೂಪ್‌ನಲ್ಲಿರುವ ಯಾರಾದರೂ ಸದಸ್ಯರು ಮಾಹಿತಿ ನೀಡಿದರೂ ಕ್ರಮ ಕೈಗೊಳ್ಳುತ್ತೇವೆ. ವೈರಲ್ ಆಗುವ ವಿಡಿಯೋಗಳನ್ನು ಪರಿಶೀಲಿಸಲಾಗುತ್ತದೆ. 10 ಮಂದಿ ಸದಸ್ಯರುಳ್ಳ ಸೋಶಿಯಲ್ ಮೀಡಿಯಾ ತಂಡ ಸಾಮಾಜಿಕ ಜಾಲತಾಣಗಳನ್ನು ಪರಿಶೀಲಿಸಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ವರದಿ ಸಲ್ಲಿಸುತ್ತೇವೆ ಎಂದರು.



ರವಿಚಂದ್ರನ್ ಹುಟ್ಟುಹಬ್ಬಕ್ಕೆ

ಪ್ರೇಮಲೋಕ-2

ಸುಮಾರು 37 ವರ್ಷಗಳ ಹಿಂದೆ ತೆರೆಕಂಡ ಪ್ರೇಮಲೋಕ ಎಂಬ ಚಿತ್ರ ನೀಡಿದ ಯಶಸ್ಸು ಇಂದಿಗೂ ರವಿಚಂದ್ರನ್ ಅವರನ್ನು ಕೈಹಿಡಿದು ಕರೆದುಕೊಂಡು ಬಂದಿದೆ. ಇಂದಿಗೂ ಕ್ರೇಜಿಸ್ಟಾರ್ ಅಂದರೆ ಪ್ರೇಮಲೋಕ, ಹಾಗೇ ಪ್ರೇಮಲೋಕ ಅಂದರೆ ಕ್ರೇಜಿಸ್ಟಾರ್ ಎನ್ನಲಾಗುತ್ತದೆ. ಅಂಥಾ ಸರ್ವಕಾಲಿಕ ದಾಖಲೆ ಬರೆದ ಚಿತ್ರವನ್ನು ಇದುವರೆಗೆ ಯಾರೂ ಸಹ ಬೀಟ್ ಮಾಡಲು ಸಾಧ್ಯವಿಲ್ಲ. ಸದ್ಯ ಕನಸುಗಾರನ ಹೊಸ ಕನಸು ಪ್ರೇಮಲೋಕ-2 ಮಾಡುವುದು. ಕಳೆದ ಕೆಲ ದಿನಗಳಿಂದ ರವಿಚಂದ್ರನ್ ಈ ಸಿನಿಮಾ ಬಗ್ಗೆಯೇ ಜಪ ಮಾಡುತ್ತಿದ್ದಾರೆ. ಈ ಸಿನಿಮಾ ಮಾಡುವುದಕ್ಕೆ ತುದಿಗಾಲಲ್ಲಿ ನಿಂತಿದ್ದಾರೆ. ಮೇ ತಿಂಗಳಲ್ಲಿ ಅವರ ಹುಟ್ಟುಹಬ್ಬದಂದು ಪ್ರೇಮಲೋಕ-2 ಚಿತ್ರವು ಗ್ರ್ಯಾಂಡಾಗಿ ಸೆಟ್ಟೇರಲಿದೆ. ಇದೊಂದು ಬಿಗ್ ಬಜೆಟ್ ಚಿತ್ರವಾಗಿರಲಿದ್ದು, ಇದರಲ್ಲಿ ಒಟ್ಟು 25 ಹಾಡುಗಳಿರುತ್ತವೆ, 40ರಿಂದ 50ಸೆಟ್‌ಗಳಲ್ಲಿ ಚಿತ್ರದ ಶೂಟಿಂಗ್ ನಡೆಯಲಿದೆ. ಉಳಿದಂತೆ ಚಿತ್ರದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಮುಹೂರ್ತದಂದು ರಿವೀಲ್ ಮಾಡುವುದಾಗಿ ಹೇಳಿದ್ದಾರೆ. ಅದನ್ನು ಬರೆಯಲು ಎಷ್ಟೋ ಬಾರಿ ಕೂತಾಗ ಕಥೆ ಆಗಿರಲಿಲ್ಲ. ನನ್ನ ಮಗಳ ಬರ್ತ್‌ಡೇ ದಿನ ಒಂದು ಸ್ಪಾರ್ಕ್ ಸಿಕ್ತು ಒಂದು ದಾರಿ ಸಿಕ್ಕಿತು. ಹೀಗೆ ಮಾಡಬಹುದಾ ಅಂತ ಐಡಿಯಾ ಬಂತು ಎಂದು ರವಿಚಂದ್ರನ್ ಮಾಹಿತಿ ಹಂಚಿಕೊಂಡಿದ್ದರು. ಚಿತ್ರದಲ್ಲಿ ಪ್ರಮುಖವಾಗಿ ಮನು ಇರುತ್ತಾನೆ ಎಂದವರು ಮಾಹಿತಿ ಕೊಟ್ಟಿದ್ದರು.

'ಭರ್ಜರಿ ಗಂಡು' ಭರ್ಜರಿ ಟ್ರೇಲರ್

ಕನ್ನಡತಿ ಸೀರಿಯಲ್ ಮೂಲಕ ಹೆಸರಾದ ನಟ ಕಿರಣ್‌ರಾಜ್ ಈಗಾಗಲೇ ಅಸತೋಮಾ ಸದ್ಗಮಯ, ಬಡ್ಡೀಸ್ ಚಿತ್ರಗಳ ಮೂಲಕ ಚಾಕೋಲೇಟ್ ಹೀರೋ ಆಗಿ ಗುರುತಿಸಿಕೊಂಡಿದ್ದಾರೆ. ಇದಲ್ಲದೆ ಇವರ ರೋನಿ ಚಿತ್ರವೂ ಸಹ ಬಿಡುಗಡೆಗೆ ಸಿದ್ಧವಿದೆ. ಈಗ ಅವರ ಮತ್ತೊಂದು ಚಿತ್ರ ರಿಲೀಸ್ ಹಂತದಲ್ಲಿದೆ. ಆ ಚಿತ್ರದ ಹೆಸರು ಭರ್ಜರಿ ಗಂಡು. ಕಿರಣ್ ರಾಜ್ ನಾಯಕನಾಗಿ ನಟಿಸಿರುವ ಈ ಚಿತ್ರಕ್ಕೆ ಪ್ರಸಿದ್ದ್ ಆಕ್ಷನ್ ಕಟ್ ಹೇಳಿದ್ದಾರೆ. ಯಶಾ ಶಿವಕುಮಾರ್ ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ. ಇತ್ತೀಚೆಗೆ ಭರ್ಜರಿ ಗಂಡು ಚಿತ್ರದ ಟ್ರೇಲರ್ ಬಿಡುಗಡೆಯಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಹಾಗೂ ನಿರ್ಮಾಪಕ ಪ್ರಸಿದ್ದ್, ಈ ಹಿಂದೆ ರತ್ನಮಂಜರಿ ಎಂಬ ಚಿತ್ರ ನಿರ್ದೇಶಿಸಿದ್ದೆ, ಇದು ನನ್ನ ಎರಡನೇ ಚಿತ್ರ. ನನ್ನ ಸ್ನೇಹಿತ ಛಾಯಾಗ್ರಾಹಕ ಕಿಟ್ಟಿ ಕೌಶಿಕ್, ನಾಯಕ ಕಿರಣ್‌ರಾಜ್‌ರನ್ನು ಪರಿಚಯಿಸಿದರು. ಚಾಕೋಲೇಟ್ ಬಾಯ್ ಆಗಿದ್ದ ಕಿರಣ್‌ರಾಜ್, ಈ ಚಿತ್ರದ ಮೂಲಕ ಆಕ್ಷನ್ ಹೀರೋ ಆಗುತ್ತಿದ್ದಾರೆ. ಭರ್ಜರಿಗಂಡು ಗ್ರಾಮೀಣ ಸೊಗಡಿನಲ್ಲಿ ನಡೆಯುವ ಯುವಕನೊಬ್ಬನ ಸಾಹಸಮಯ ಕಥೆ. ಬರೀ ಪ್ರೀತಿಗಷ್ಟೇ ಸೀಮಿತವಾಗದ ನಾಯಕ ತನ್ನ ಊರಿಗೆ ಹಾಗೂ ಊರ ಜನರಿಗೆ ಏನೆಲ್ಲಾ ಸಹಾಯ ಮಾಡುತ್ತಾನೆ ಎಂದು ಚಿತ್ರದಲ್ಲಿ ತೋರಿಸಿದ್ದೇವೆ. ಏಪ್ರಿಲ್ 5ರಂದು ಭರ್ಜರಿ ಗಂಡು ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ ಎಂದು ಹೇಳಿದರು.

ನಾಯಕ ಕಿರಣ್‌ರಾಜ್ ಮಾತನಾಡುತ್ತ, ನಾನು ನಟಿಸಿರುವ ಮೊದಲ ಚಿತ್ರವಿದು. ರಿಲೀಸ್ ಸ್ವಲ್ಪ ಲೇಟಾಗಿದೆ. ಪ್ರಸಿದ್ದ್ ತುಂಬಾ ಚೆನ್ನಾಗಿ ಕಥೆ ಚಿತ್ರಕಥೆ ಮಾಡಿಕೊಂಡಿದ್ದಾರೆ. ನಾನು ನನ್ನ ಮೊದಲ ಚಿತ್ರದಲ್ಲೇ ಆಕ್ಷನ್ ಹೀರೋ ಆಗಿ ಕಾಣಿಸಿಕೊಂಡಿದ್ದೆ, ನಂತರ ರೊಮ್ಯಾಂಟಿಕ್ ಹೀರೋ ಪಾತ್ರ ಮಾಡಿದೆ ಎಂದು ಹೇಳಿದರು. ನಾಯಕಿ ಯಶ ಶಿವಕುಮಾರ್ ತಮ್ಮ ಪಾತ್ರದ ಬಗ್ಗೆ ಮಾಹಿತಿ ನೀಡಿದರು. ಕಲಾವಿದರಾದ ರಾಕೇಶ್‌ರಾಜ್, ರೋಹಿತ್ ನಾಗೇಶ್, ಸೌರಭ್ ಕುಲಕರ್ಣಿ, ಛಾಯಾಗ್ರಾಹಕ ಕಿಟ್ಟಿ ಕೌಶಿಕ್, ಸಂಗೀತ ನಿರ್ದೇಶಕ ಗುಮ್ಮಿನೇನಿ ವಿಜಯ್ ಮುಂತಾದವರು ಚಿತ್ರದ ಕುರಿತು ಮಾಹಿತಿ ನೀಡಿದರು. ಪ್ರಸಿದ್ದ್ ಫಿಲಂಸ್, ಅನಿಲ್‌ಕುಮಾರ್ ಹಾಗೂ ಮದನ್‌ಗೌಡ ಸೇರಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ, ಈ ಚಿತ್ರದ ಸಹ ನಿರ್ಮಾಪಕರಾಗಿ ರಮೇಶ್‌ಗೌಡ ಮತ್ತು ಸುದರ್ಶನ್ ಸುಂದರರಾಜ್ ಕೈಜೋಡಿಸಿದ್ದಾರೆ.



'ಮಾರಿಗೋಲ್ಡ್'ನಲ್ಲಿ ಸಿಹಿಜೇನಮಳೆಯ ಹಾಡು!

ಬಿಗ್‌ಬಾಸ್ ಖ್ಯಾತಿಯ ಸಂಗೀತ ಶೃಂಗೇರಿ ಮತ್ತು ದಿಗಂತ್ ನಟಿಸಿರುವ ಮಾರಿಗೋಲ್ಡ್ ಚಿತ್ರದ ಸಿಹಿಜೇನಮಳೆ ಎಂಬ ಲಿರಿಕಲ್ ಹಾಡು ಬಿಡುಗಡೆಯಾಗಿದೆ. ವೀರ್ ಸಮರ್ಥ್ ಸಂಗೀತವಿರುವ ಈ ಹಾಡಿಗೆ ಯೋಗರಾಜ್ ಭಟ್ ಸಾಹಿತ್ಯ, ಅನುರಾಧ ಭಟ್ ದನಿ ನೀಡಿದ್ದಾರೆ.

ಚಿತ್ರದ ಕುರಿತು ಮಾಹಿತಿ ಹಂಚಿಕೊಂಡ ನಿರ್ಮಾಪಕ ರಘುವರ್ಧನ್, ಮಾರಿಗೋಲ್ಡ್ ಒಂದು ಆಕ್ಷನ್, ಕ್ರೈಮ್ ಥ್ರಿಲ್ಲರ್ ಜಾನರ್‌ನ ಚಿತ್ರವಾಗಿದೆ. ಚಿನ್ನದ ಬಿಸ್ಕತ್ ಮಾರಲು ಹೊರಟ ನಾಲ್ವರು ಹುಡುಗರ ಕಥೆ ಇದರಲ್ಲಿದೆ. ಸುಂದರ ಜೀವನ ಕಟ್ಟಿಕೊಳ್ಳುವ ಕನಸುಕಂಡ ಈ ಹುಡುಗರು ಸುಲಭ ಮಾರ್ಗದಲ್ಲಿ ಹಣ ಸಂಪಾದಿಸಲು ಹೋಗಿ, ಯಾವುದೋ ಒಂದುಕಡೆ ಸಿಕ್ಕಿಹಾಕಿಕೊಳ್ತಾರೆ. ಅದರಿಂದ ಅವರು ಹೊರ ಬರ್ತಾರಾ, ಅಂದುಕೊಂಡ ಕೆಲಸ ಸಾಧಿಸುತ್ತಾರೆ ಎನ್ನುವುದೇ ಮಾರಿಗೋಲ್ಡ್ ಚಿತ್ರದ ಕಥಾಹಂದರ. ನಾಯಕಿ ಸಂಗೀತಾ ಶೃಂಗೇರಿ ಈ ನಾಲ್ವರು ಹುಡುಗರ ಜೊತೆ ಸೇರಿ ಅವರನ್ನು ಬದಲಾಯಿಸಲು ಹೋಗ್ತಾರೆ, ಆ ಪ್ರಯತ್ನದಲ್ಲಿ ಏನೇನೆಲ್ಲಾ ಆಗಲಿದೆ ಎನ್ನುವುದು ಚಿತ್ರದ ಕುತೂಹಲದ ಸಂಗತಿ ಎಂದು ವಿವರ ನೀಡಿದರು.

ಇದುವರೆಗೂ ರೋಮ್ಯಾಂಟಿಕ್ ಹೀರೋ ಆಗಿ ಕಾಣಿಸಿಕೊಂಡಿದ್ದ ನಟ ದಿಗಂತ್, ಈ ಚಿತ್ರದಲ್ಲಿ ಮಾಸ್ ಹೀರೋ ಆಗಿ ಬಡ್ತಿ ಪಡೆದಿದ್ದಾರೆ. ಮತ್ತೊಂದೆಡೆ ಸಂಗೀತ ಶೃಂಗೇರಿ ಬಿಗ್ಬಾಸ್ ಮನೆಯಿಂದ ಹೊರಬಂದ ಬಳಿಕ ಬಿಡುಗಡೆಯಾಗುತ್ತಿರುವ ಮೊದಲ ಚಿತ್ರ. ಹಾಗಾಗಿ ಅವರ ಅಭಿಮಾನಿಗಳಲ್ಲಿ ಕಾತುರವಿದೆ. ಏಪ್ರಿಲ್ ತಿಂಗಳಲ್ಲಿ ಚಿತ್ರವನ್ನು ಬಿಡುಗಡೆ ಮಾಡಬೇಕೆಂದು ನಿರ್ಮಾಪಕರು ಪ್ಲಾನ್ ಮಾಡಿಕೊಂಡಿದ್ದಾರೆ, ಅಲ್ಲದೆ ಇದೇ ತಿಂಗಳ 25ರಂದು ಈ ಚಿತ್ರದ ಟ್ರೇಲರ್ ಬಿಡುಗಡೆಯಾಗುತ್ತಿದೆ,

ಈ ಚಿತ್ರದಲ್ಲಿ ದಿಗಂತ್ ಬಾಡಿ ಲಾಂಗ್ವೇಜ್, ಸಂಪೂರ್ಣ ಬದಲಾಗಿದೆ. ಜೊತೆಗೆ ನಟಿ ಸಂಗೀತಾ ಶೃಂಗೇರಿ ಅವರ ಪಾತ್ರ ಹೊಸತನದಿಂದ ಕೂಡಿದೆ. ಚಿತ್ರದಲ್ಲಿ ಅವರು ಒಬ್ಬ ಡ್ಯಾನ್ಸರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಬದುಕು ಕಟ್ಟಿಕೊಳ್ಳಲು ಪರದಾಡುವ ಯುವತಿಯ ಪಾತ್ರವದು.

ಇನ್ನು ಈ ಚಿತ್ರಕ್ಕೆ ರಾಘವೇಂದ್ರ ಎಂ, ನಾಯ್ಕ ಆಕ್ಷನ್‌ಕಟ್ ಹೇಳಿದ್ದು, ಯಶ್ ಶೆಟ್ಟಿ, ಕಾಕ್ರೋಚ್ ಸುಧಿ, ವಜ್ರಾಂಗ್ ಶೆಟ್ಟಿ, ಬಲರಾಜವಾಡಿ, ಮಹಂತೇಶ್, ಸಂದೀಪ್ ಮಲಾನಿ ಮತ್ತಿತರರಿದ್ದಾರೆ. ಕೆ.ಎಸ್ ಚಂದ್ರಶೇಖರ್ ಅವರ ಛಾಯಾಗ್ರಹಣ, ರಘು ನಿಡವಳ್ಳಿ ಅವರ ಸಂಭಾಷಣೆ ಈ ಚಿತ್ರಕ್ಕಿದೆ, ಯೋಗರಾಜ್ ಭಟ್, ವಿಜಯ್ ಭರಮಸಾಗರ ಹಾಡುಗಳನ್ನು ಬರೆದಿದ್ದಾರೆ.



ಟೀಸರ್‌ನಲ್ಲಿ 'ದೇಸಾಯಿ' ಮನೆತನದ ಕಥೆ

ಉತ್ತರ ಕರ್ನಾಟಕದಲ್ಲಿ ಹಿಂದಿನಿಂದಲೂ ದೇಸಾಯಿ ಮನೆತನಕ್ಕೆ ಅದರದೇ ಆದ ವಿಶಿಷ್ಟ ಪರಂಪರೆಯಿದೆ. ಈ ಮನೆತನದ ಹಿನ್ನೆಲೆಯಲ್ಲಿ ನಡೆಯುವ ಘಟನೆಗಳನ್ನಿಟ್ಟುಕೊಂಡು ನಿರ್ಮಾಪಕ ಮಹಾಂತೇಶ್ ವಿ.ಚೊಳಚಗುಡ್ಡ ಅವರು ಕಥೆ ಬರೆದು "ದೇಸಾಯಿ" ಚಿತ್ರ ನಿರ್ಮಾಣ ಮಾಡಿದ್ದಾರೆ, ನಾಗಿರೆಡ್ಡಿ ಬಡ ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ, ಚಿತ್ರದಲ್ಲಿ ಲವ್ 360 ಖ್ಯಾತಿಯ ಪ್ರವೀಣ್‌ಕುಮಾರ್ ನಾಯಕನಾಗಿದ್ದು, ಮೈಸೂರು ಮೂಲದ ರಾದ್ಯಾ ದೇಸಾಯಿ ನಾಯಕಿಯಾಗಿ ನಟಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ಕಲಾವಿದರ ಸಂಘದಲ್ಲಿ ನೆರವೇರಿತು. ಮಾಜಿ ಉಪ ಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ್ ಸವದಿ ಈ ಚಿತ್ರದ ಟೀಸರ್ ಬಿಡುಗಡೆ ಮಾಡಿದರು.


ನಿರ್ಮಾಪಕ ಮಹಂತೇಶ ವಿ.ಚೋಳಚಗುಡ್ಡ ಮಾತನಾಡುತ್ತ, ಸಿನಿಮಾ ನಿರ್ಮಾಣ ನನ್ನ ಕನಸು. ಆ ಕನಸು ನನಸಾಗಲು ಚಿತ್ರತಂಡ ನೀಡಿದ ಸಹಕಾರವೇ ಕಾರಣ. ನಾನೊಂದು ಚಿತ್ರ ಮಾಡಬೇಕೆಂದು ವಿಶಿಷ್ಟ ಕಥೆ ಹುಡುಕುತ್ತಿದ್ದಾಗ ಯೋಚನೆಗೆ ಬಂದದ್ದೇ ಈ ಗತಕಾಲದ, ತನ್ನದೇ ಆದ ವೈಶಿಷ್ಟ್ಯತೆ ಹಾಗೂ ಪರಂಪರೆಯನ್ನು ಹೊಂದಿರುವ ದೇಸಾಯಿ ಮನೆತನದ ಚಿತ್ರಣ. ದೇಸಾಯಿ ಮನೆತನದ ಕೌಟುಂಬಿಕ ಕಥಾಹಂದರ ಹೊಂದಿರುವ ಈ ಚಿತ್ರದ ಹೆಚ್ಚಿನ ಭಾಗದ ಚಿತ್ರೀಕರಣವನ್ನು ಬಾಗಲಕೋಟೆಯಲ್ಲಿ ನಡೆಸಿದ್ದೇವೆ. ಈ ಸಂದರ್ಭದಲ್ಲಿ ಅಲ್ಲಿನ ಜನತೆ ನಮಗೆ ತುಂಬಾ ಸಹಕಾರ ನೀಡಿದರು ಎಂದು ಹೇಳಿದರು.

ನಿರ್ದೇಶಕ ನಾಗಿರೆಡ್ಡಿ ಬಡ ಮಾತನಾಡಿ, ನನ್ನ ನಿರ್ದೇಶನದ ಮೊದಲ ಚಿತ್ರವಿದು. ಉತ್ತರ ಕರ್ನಾಟಕದಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣ ನಡೆದಿದ್ದು, ಅಂದುಕೊಂಡ ಹಾಗೆ ಮೂಡಿ ಬಂದಿದೆ. ಸದ್ಯದಲ್ಲೇ ಚಿತ್ರವನ್ನು ತೆರೆಮೇಲೆ ತರುತ್ತಿದ್ದೇವೆ ಎಂದರು. ಪ್ರವೀಣ್‌ಕುಮಾರ್ ಮಾತನಾಡುತ್ತ, ನನ್ನ ವೃತ್ತಿಬದುಕಿನಲ್ಲಿ ಹೊಸ ಅಧ್ಯಾಯ ತೆರೆಯೋ ಚಿತ್ರವಿದು, ಅಂತಹ ಚಾಲೆಂಜ್ ಪಾತ್ರ, ನಾನು ಈ ಹಿಂದೆ ಲವ್ 360 ಚಿತ್ರದಲ್ಲಿ ಮಾಡಿದ್ದ ಪಾತ್ರವೇ ಬೇರೆ. ಈ ಚಿತ್ರದ ಪಾತ್ರವೇ ಬೇರೆ. ಈ ಚಿತ್ರಕ್ಕಾಗಿಯೇ ನಾನು ಸಾಕಷ್ಟು ತಯಾರಿ ಮಾಡಿಕೊಂಡು ನಂತರ ಅಭಿನಯಿಸಿದ್ದೇನೆ ಎಂದು ಹೇಳಿದರು.

ಶ್ರೀ ವೀರಭದ್ರೇಶ್ವರ ಕ್ರಿಯೇಟಿವ್ ಫಿಲಂಸ್ ಲಾಂಛನದಲ್ಲಿ ಮಹಾಂತೇಶ ವಿ ಚೋಳಚಗುಡ್ಡ ಕಥೆ ಬರೆದು ನಿರ್ಮಿಸಿರುವ ಈ ಚಿತ್ರದ ಉಳಿದ ಪಾತ್ರಗಳಲ್ಲಿ ಒರಟ ಪ್ರಶಾಂತ್, ಮಧುಸೂದನ್ ರಾವ್, ಕಲ್ಯಾಣಿ, ಹರಿಣಿ, ನಟನ ಪ್ರಶಾಂತ್, ಸೀತಾ ಬೆನಕ, ಆರತಿ ಕುಲಕರ್ಣಿ, ಮಂಜುನಾಥ್ ಹೆಗಡೆ, ಸೃಷ್ಟಿ (ಕಾಂತಾರ) ಮುಂತಾದವರು ನಟಿಸಿದ್ದಾರೆ. ಜೈಆನಂದ್ ಅವರ ಛಾಯಾಗ್ರಹಣ, ಸಾಯಿಕಾರ್ತಿಕ್ ಅವರ ಸಂಗೀತ ಈ ಚಿತ್ರಕ್ಕಿದೆ.



ಸಿನಿಪದಬಂಧ-518



ಹೆಸರು ____________________

ವಿಳಾಸ ____________________

____

ದೂರವಾಣಿ ಸಂಖ್ಯೆ ____________________

ಎಡದಿಂದ ಬಲಕ್ಕೆ

1. ಪ್ರಭಾಕರ್ -ಜಯಮಾಲ ಅಭಿನಯದ ಮಾತೃ ಭೂಮಿ 4
3. ಅಂಬರೀಶ್ ದ್ರೋಣಚಾರ್ಯರ ಶಿಷ್ಯ 4
7. ರಾಜ್ - ಲಕ್ಷ್ಮೀ ಅಭಿನಯದಿ ಪ್ರೀತಿ ಜಯಿಸಿದೆ 6
9. " ಕಮಲ _ _ _ _ _ _ ವದನ ಕಮಲ ರಮಣ ನಾರಾಯಣ..... ", 6
10. ಬಹದ್ದೂರ್ ಗಂಡು ಎಲ್ಲಿಯ ಬೆಂಕಿ ಚಂಡು 4
11. ಪಕ್ಷಿಯೊಂದರ ಶಿಕಾರಿ ಇಲ್ಲಿ ತಿರುಗಿದೆ 4
15. ಆರತಿ ಪಾಂಡುರಂಗ ವಿಠಲನ ಭಕ್ತೆ 6
16. ರಾಜ್ ಕುಮಾರ್ - ಕಲ್ಪನಾ ಅಭಿನಯದ ಹೆತ್ತವಳ ಕೂಗು 6
19. ಅರ್ಜುನ್ ಸರ್ಜಾ - ಮಾಲಾಶ್ರೀ ಅಭಿನಯದ ಚಿತ್ರ 4
20. ಕನಸುಗಾರ ರವಿಚಂದ್ರನ್ ಬಿರುದು 4

ಮೇಲಿನಿಂದ ಕೆಳಕ್ಕೆ

1. ಶಂಕರ್‌ನಾಗ್ ಕಂಡ ಹೆತ್ತವಳ ಸ್ವಪ್ನ 5
2. ತಬಲ ಬಾರಿಸಿದ ಹಾಸ್ಯ ನಟ 2
4. ರಾಷ್ಟ್ರೀಯ ಪಕ್ಷವೊಂದರ ಚಿಹ್ನೆ ಹೆಸರಿನ ಚಿತ್ರ 3
5. _ _ _ ಮೂಡಿದಾಗ 3
6. ಕಲಾ ವಲ್ಲಭನಲ್ಲಿ ಎಲ್ಲವೂ ಅಡಗಿದೆ 3
7. ವಿಷ್ಣುವರ್ಧನ್ - ರೂಪಿಣಿ ಅಭಿನಯಕ್ಕೆ ಕೆ.ವಿ. ಜಯರಾಮ್ ನಿರ್ದೇಶಕ 7
8. "ಕುಂತ್ರೆ ನಿಂತ್ರೆ ಅವನದೇ ಧ್ಯಾನ... ", ಹಾಡಿನಲ್ಲಿ ಬಂದ ಸ್ನೇಹಿತ 4
11. ವೀರಪ್ಪ ಮೊಯ್ಲಿ ಅವರ ಜನಪ್ರಿಯ ಕಾದಂಬರಿ 4
13. ಸೂರ್ಯ ಮಾಲೆ ಹಾಕಿಕೊಂಡಿದ್ದಾನೆ 3
14. ಡೈಲಾಗ್ ಕಿಂಗ್ ಎಂಡೊಡನೆ ನೆನಪಿಗೆ ಬರುವ ನಟ 5
16. ಕುಮಾರ್ ಗೋವಿಂದನ ಚೌಕಕಾರದ ಕೊಳ 3
17. ಈ ನಟಿ ಮಿನುಗುತಾರೆ 3
18. ಸರಿಗಮ ಇರಿಸಿಕೊಂಡಿರುವ ನಟ 2

ವಿಜೇತರು: ಡಾ. ಐಶ್ವರ್ಯ.ಎನ್, #40, 2ನೇ ಮೇನ್, 1ನೇ ಕ್ರಾಸ್, ರೈಲ್ವೇ ಲೇಔಟ್, ಬೋಗಾದಿ, ಮೈಸೂರು-26




ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 517ರ ಉತ್ತರ

ತುಂ	ಗ	ಭ	ದ್ರ		ಲೋ	ಕ	ನಾ	ಥ್		ಭೈ
ಬಿ		ದ್ರ				ವ				ರ
ದ			ಮಾ		ಮಾ	ನ	ವ	ದಾ	ನ	ವ
ಮ	ನ	ಸಿ	ನ	ಮಾ	ತು			ದಾ		
ನೆ			ಸ		ತ		ಹೊಂ	ಗಿ	ರ	ಣ
		ಮಂ			ಪ್ಪ			ರಿ		
ಕು	ಳ್ಳ	ಕು	ಳ್ಳಿ		ದ		ಪ			ಕಾ
		ತಿ			ಮ	ರೆ	ಯ	ದ	ಹಾ	ಡು
ಜ	ಯ	ಮ್ಮ	ನ	ಮ	ಗ		ಣ			ಕು
ಲಿ				ತ್ಸ				ಲ		ದು
ಲ್		ಮ	ಣಿ	ರ	ತ್ನಂ		ನ	ವ	ತಾ	ರೆ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

'ಲೈನ್‌ಮ್ಯಾನ್' ಈ ವಾರ ತೆರೆಗೆ



ಒಂದು ಹಳ್ಳಿಯಲ್ಲಿ ಯಾರಿಂದಲೂ ಮಾಡಲಾಗದಂಥ ಬದಲಾವಣೆ ತಂದ ಲೈನ್‌ಮ್ಯಾನ್ ಕಥಾಹಂದರ ಹೊಂದಿರುವ "ಲೈನ್‌ಮ್ಯಾನ್" ಚಿತ್ರ ಈ ಶುಕ್ರವಾರ ರಾಜ್ಯಾದ್ಯಂತ ತೆರೆ ಕಾಣುತ್ತಿದೆ. ಕನ್ನಡ ಚಿತ್ರರಂಗಕ್ಕೆ ಸದಭಿರುಚಿಯ ಚಿತ್ರಗಳನ್ನು ನೀಡಿರುವ ಪರ್ಪಲ್ ರಾಕ್ ಸಂಸ್ಥೆಯ ಲೈನ್‌ಮ್ಯಾನ್ ಸಂಬಂಧಗಳನ್ನು ಬೆಸೆಯುವ ಕಥೆಯಾಗಿದ್ದು, ಕನ್ನಡ ಹಾಗೂ ತೆಲುಗು ಸೇರಿ 2 ಭಾಷೆಗಳಲ್ಲೂ ಏಕಕಾಲಕ್ಕೆ ಬಿಡುಗಡೆಯಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ವಾಟ್ಸಾಪ್, ಇನ್‌ಸ್ಟಾಗ್ರಾಂ ಅಂತ ಮೊಬೈಲ್‌ನಲ್ಲೇ ಮುಳುಗಿರುವ ಜನ ಮನೇಲಿ ಒಟ್ಟಾಗಿ ಕೂತು ಮಾತಾಡುವುದು, ಊಟ ಮಾಡುವುದು, ಮಕ್ಕಳು ಸಾಂಪ್ರದಾಯಿಕ ಆಟಗಳನ್ನು ಆಡುವುದು ಇದನ್ನೆಲ್ಲ ಮರೆತು ಬಿಟ್ಟಿದ್ದಾರೆ. ಇಂಥ ಸುಂದರ ಕ್ಷಣಗಳನ್ನು ಲೈನ್‌ಮ್ಯಾನ್ ಚಿತ್ರ ನೆನಪಿಸುತ್ತದೆ. ಚಾಮರಾಜನಗರದ ಚಂದಕವಾಡಿಯಲ್ಲಿ ಇಡೀ ಚಿತ್ರವನ್ನು ಚಿತ್ರೀಕರಿಸಲಾಗಿದೆ. ಯತೀಶ್ ವೆಂಕಟೇಶ್, ಗಣೇಶ್ ಪಾಪಣ್ಣ, ಶ್ರೀನಿವಾಸ್ ಬಿಂಡಿಗನವಿಲೆ, ಅಜಯ್ ಅಪರೂಪ್ ಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸದ

ಸೆಸ್ಕ್ ಅಧಿಕಾರಿಗಳ ಬೇಜವಾಬ್ದಾರಿ ಖಂಡಿಸಿ ಪ್ರತಿಭಟನೆ

ತಿ.ನರಸೀಪುರ, ಮಾ.21– ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡದ ಸೆಸ್ಕ್ ಅಧಿಕಾರಿಗಳ ಬೇಜವಾಬ್ದಾರಿ ಖಂಡಿಸಿ ನಿಲಸೋಗೆ, ಚೌಹಳ್ಳಿ ಗ್ರಾಮಗಳ ರೈತರು ಪಟ್ಟಣದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಸೆಸ್ಕ್ ಕಚೇರಿ ಎದುರು ಜಮಾಯಿಸಿದ ಗ್ರಾಮಸ್ಥರು, ರೈತರು, ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡಲು ವಿಫಲರಾಗಿದ್ದಾರೆ ಎಂದು ಆರೋಪಿಸಿ ಮುಖ್ಯ ದ್ವಾರದ ಗೇಟ್ ಬಂದ್ ಮಾಡಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಗೇಟ್ ಬಂದ್ ಮಾಡಿದ್ದರಿಂದ ಗ್ರಾಹಕರು ಪರದಾಡುವಂತಾಯಿತು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಟ್ಟಣದ ಸೆಸ್ಕ್ ಎಇಇ ವಿಜಯ ಕುಮಾರ್, ಪ್ರತಿಭಟನಾಕಾರ ರೊಂದಿಗೆ ಮಾತುಕತೆಗೆ ಮುಂದಾಗುತ್ತಿದ್ದಂತೆ ಗ್ರಾಮಾಂತರ ಎಇಇ ಧನಂಜಯ್ ಅವರನ್ನು ಸ್ಥಳಕ್ಕೆ ಕರೆಸಬೇಕು. ಅವರು ಬಂದು ರೈತರ ಸಮಸ್ಯೆ ಆಲಿಸುವವರೆಗೂ ಪ್ರತಿಭಟನೆ ನಡೆಸುವುದಾಗಿ ರೈತರು ಪಟ್ಟುಹಿಡಿದರು.

ಈ ವೇಳೆ ವಾಟಾಳು ಕ್ಷೇತ್ರ ವ್ಯಾಪ್ತಿಯಲ್ಲಿ ಕರ್ತವ್ಯದಲ್ಲಿದ್ದ ಧನಂಜಯ್ ಅವರಿಗೆ ವಿಷಯ ತಿಳಿಸಲಾಗಿ ಅವರು ಸ್ಥಳಕ್ಕಾಗಮಿಸಿ ರೈತರ ಸಮಸ್ಯೆ ಆಲಿಸಿದರು.


ಸಮರ್ಪಕ ವಿದ್ಯುತ್ ಪೂರೈಕೆ ಮಾಡದ ಸೆಸ್ಕ್ ಅಧಿಕಾರಿಗಳ ಬೇಜವಾಬ್ದಾರಿ ಖಂಡಿಸಿ ನಿಲಸೋಗೆ, ಚೌಹಳ್ಳಿ ಗ್ರಾಮಗಳ ರೈತರು ಪ್ರತಿಭಟನೆ ನಡೆಸಿದರು.

ಈ ವೇಳೆ ನಿಲಸೋಗೆ ಗ್ರಾಮದ ನಂಜುಂಡಸ್ವಾಮಿ ಮಾತನಾಡಿ, ನಿಲಸೋಗೆ ಹಾಗೂ ಚೌಹಳ್ಳಿ ವ್ಯಾಪ್ತಿಯ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಸರಬರಾಜು ಮಾಡುತ್ತಿಲ್ಲ. ಮೊದಲು ದಿನಕ್ಕೆ 7 ಗಂಟೆ ನಿರಂತರ ವಿದ್ಯುತ್ ನೀಡಲಾಗುತ್ತಿತ್ತು. ಇದೀಗ ಒಂದು ಗಂಟೆಯೂ ವಿದ್ಯುತ್ ನೀಡುತ್ತಿಲ್ಲ. ಇದರಿಂದ ಜಮೀನಿನಲ್ಲಿ ಕಷ್ಟಪಟ್ಟು ಬೆಳೆದಿರುವ ಫಸಲು ನಾಶವಾಗಿ ರೈತರು ನಷ್ಟ ಅನುಭವಿಸುವಂತಾಗಿದೆ. ಪಂಪ್‌ಸೆಟ್‌ಗಳಿಗೆ ಅರ್ಧ ಗಂಟೆ ಮಾತ್ರ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಈ ಬಗ್ಗೆ ಅಧಿಕಾರಿಗಳಿಗೆ ದೂರವಾಣಿ ಮಾಡಿ ಪ್ರಶ್ನಿಸಿದರೆ ಅಸಡ್ಡೆ ಉತ್ತರ ನೀಡುತ್ತಾರೆ. ಹಾಗಾಗಿ ನಮಗೆ ಮೊದಲಿನಂತೆ ದಿನಕ್ಕೆ 7 ಗಂಟೆ ನಿರಂತರ ವಿದ್ಯುತ್ ನೀಡಬೇಕು. ನಿಮಗೆ ಸಾಧ್ಯವಾಗದಿದ್ದರೆ ಒಂದು ಗಂಟೆ ವಿದ್ಯುತ್ ಕಡಿತಗೊಳಿಸಿ, 6 ಗಂಟೆಯಾದರೂ ವಿದ್ಯುತ್ ನೀಡಿ. ಇಲ್ಲದಿದ್ದಲ್ಲಿ ನಮಗಾಗುವ ನಷ್ಟಕ್ಕೆ ಪರಿಹಾರ ಕೊಡಿಸಿ ಎಂದು ಒತ್ತಾಯಿಸಿ ಪ್ರತಿಭಟನೆ ಹಿಂಪಡೆದರು.

ಬೇಸಿಗೆ ಹಿನ್ನೆಲೆಯಲ್ಲಿ ಲೋಡ್‌ಶೆಡ್ಡಿಂಗ್ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಇದರಿಂದ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯಲ್ಲಿ ಸ್ವಲ್ಪಮಟ್ಟಿನ ತೊಂದರೆಯಾಗಿದೆ. ಆದರೆ ಇದು ತಾತ್ಕಾಲಿಕವಾಗಿದ್ದು, ಮುಂದೆ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಪೂರೈಕೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ. ರೈತರಿಗೆ ಈವರೆವಿಗೆ ಕಡಿತವಾಗಿರುವ ವಿದ್ಯುತ್ ಅನ್ನು ಸರಿಪಡಿಸಿ ಕೊಡಿಸಿಕೊಡಲಾಗುತ್ತದೆ. ನಾಳೆಯಿಂದ ಬೆಳಗ್ಗೆ ಹಾಗೂ ರಾತ್ರಿ ಪಾಳಿಯಲ್ಲಿ ತಲಾ 3 ಗಂಟೆಗಳ ಕಾಲ ವಿದ್ಯುತ್ ಪೂರೈಕೆ ಮಾಡಲಾಗುತ್ತದೆ.

- ಧನಂಜಯ, ಎಇಇ.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ರಾಜೇಶ್ ಪಟೇಲ್, ರಾಚಪ್ಪ, ಮಹದೇವ್ ಪ್ರಸಾದ್, ಶಾಂತ, ಪ್ರಸಾದ್, ಮಹದೇವಸ್ವಾಮಿ, ನಾಗೇಂದ್ರಸ್ವಾಮಿ, ಡೈರಿ ರಾಜು, ಪ್ರದೀಪ, ರವಿ, ಧನು, ಯೋಗೇಶ್, ಬಸವರಾಜು, ಸುಬ್ರಹ್ಮಣ್ಯ, ಪುಟ್ಟರಾಜು, ಸುರೇಶ್, ನಿಲಸೋಗೆ ಪ್ರಸಾದ್ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಸೈರನ್ 108 (ತ)	4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕರಟಕ ದಮನಕ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗನಾಯಕ (ಕ)	4 ಪ್ರದರ್ಶನಗಳು
ರಾಜಕಮಲ್	
ಯೋಧ (ಹಿಂ)	4 ಪ್ರದರ್ಶನಗಳು
ಸಂಗಂ	
ಕೆರೆಬೇಟೆ (ಕ)	4 ಪ್ರದರ್ಶನಗಳು
ಲಿಡೋ	
ಹೈಡ್ ಅಂಡ್ ಸೀಕ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸೈರನ್ (ತ)	4 ಪ್ರದರ್ಶನಗಳು
ಪ್ರಭಾ	
ಸೋಮು ಸೌಂಡ್ ಇಂಜಿನಿಯರ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕುಂಗ್ ಫು ಪಾಂಡ 4(3ಡಿ) (ಇಂ): ಬೆ.11ಕ್ಕೆ, ಸಂ.4ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ಕರಟಕ ದಮನಕ (ಕ): ಮ.1ಕ್ಕೆ, ಓಂ ಭೀಮ್ ಬುಶ್ (ತೆ): ರಾ.10ಕ್ಕೆ.
ಸ್ಕ್ರೀನ್ 2	ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.30ಕ್ಕೆ, ರಾ.7.20ಕ್ಕೆ, ದಿಲ್‌ಖುಷ್ (ಕ): ಮ.1.25ಕ್ಕೆ, ಆರ್ಟಿಕಲ್ 370 (ಹಿಂ): ಸಂ.4.10ಕ್ಕೆ, ಅಂಚಕಲ್ಲಕೊಕ್ಕನ್ (ಮ): ರಾ.10ಕ್ಕೆ
ಸ್ಕ್ರೀನ್ 3	ತೂತು ಕಾಸು (ಕ): ಬೆ.10.45ಕ್ಕೆ, ಲೈನ್‌ಮನ್ (ಕ): ಮ.1.30ಕ್ಕೆ, ಯೋಧ (ಹಿಂ): ಸಂ.4.15ಕ್ಕೆ, ಜಾಕಿ (ಕ): ರಾ.7.05ಕ್ಕೆ, ರಜಾಕರ್ ಸೈಲೆಂಟ್ ಜಿನೋಸೈಡ್ ಆಫ್ ಹೈದ್ರಾಬಾದ್ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಜಾಕಿ (ಕ): ಬೆ.10.30ಕ್ಕೆ, ರೆಬಲ್ (ತ): ಮ.1.20ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಸಂ.4.10ಕ್ಕೆ, ರಾ.7.30ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಮಡಗಾಂವ್ ಎಕ್ಸ್‌ಪ್ರೆಸ್ (ಹಿಂ): ಮ.12.15ಕ್ಕೆ, ಸಂ.6.15ಕ್ಕೆ, ರಾ.9.20ಕ್ಕೆ, ಸೈತಾನ್ (ಹಿಂ): ಮ.3.20ಕ್ಕೆ.
ಸ್ಕ್ರೀನ್ 2	ಜಾಕಿ (ಕ): ಮ.12.55ಕ್ಕೆ, ರಾ.7.15ಕ್ಕೆ, ಕರಟಕ ದಮನಕ (ಕ): ಸಂ.4ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಂಜುಮ್ಮೆಲ್ ಬಾಯ್ಸ್ (ಮ): ಬೆ.10ಕ್ಕೆ, ರಾ.7ಕ್ಕೆ, ಓಂ ಭೀಮ್ ಬುಶ್ (ತೆ): ಮ.1ಕ್ಕೆ, ಯೋಧ (ಹಿಂ): ಸಂ.4.05ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ರಾ.10ಕ್ಕೆ
ಸ್ಕ್ರೀನ್ 4	ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಬೆ.10ಕ್ಕೆ, ಮ.3.55ಕ್ಕೆ, ಕುಂಗ್ ಫು ಪಾಂಡ 4(3ಡಿ) (ಇಂ): ಮ.1.40ಕ್ಕೆ, ರಾ.7.35ಕ್ಕೆ, ರಾ.9.50ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣೆ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ದೇವಾಲಯಗಳಲ್ಲಿ ಪ್ರಸಾದ ಪರಿಶೀಲನೆ ಆದೇಶಕ್ಕೆ ಆಕ್ರೋಶ

ಹುಣಸೂರು, ಮಾ.21– ರಾಜ್ಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ರಾಜ್ಯದ ಹಿಂದೂ ದೇವಾಲಯಗಳಲ್ಲಿ ಸಿದ್ಧಪಡಿಸಿದ ಪ್ರಸಾದ ಪರಿಶೀಲನೆಗೆ ಆದೇಶಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ ಎಂದು ಹೈಕೋರ್ಟ್ ವಕೀಲ ಹುಣಸೂರಿನ ಪ್ರಶಾಂತ್ ಮೇತಲ್ ತಿಳಿಸಿದ್ದಾರೆ.

ಈ ಸಂಬಂಧ ಪ್ರಶಾಂತ್ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಅಧಿಕಾರಿಗಳಿಗೆ ಹಾಗೂ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರಿಗೆ ಪತ್ರ ಬರೆದಿದ್ದು, ಈ ಆದೇಶ ಕಾನೂನು ಬಾಹಿರ, ಸಂವಿಧಾನ ಬಾಹಿರ ಭಾರತ ಸಂವಿಧಾನದ ವಿಧಿ 14, 15, 16ರ ಉಲ್ಲಂಘನೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ಕೇವಲ ಹಿಂದೂ ದೇವಾಲಯಗಳ ಮೇಲೆ ಯಾಕೆ ಕ್ರಮ ಎಂದು ಪ್ರಶ್ನಿಸಿರುವ ಅವರು ಪ್ರಸಾದ ತಯಾರಿಕೆಗೆ ಬಳಸುವ ಕಚ್ಚಾ ವಸ್ತುಗಳ ತಪಾಸಣೆ ಮಾಡಿದರೆ ಸ್ವಾಗತಿಸುತ್ತೇವೆ. ಆದರೆ ಪ್ರಸಾದವನ್ನು ತಪಾಸಣೆಗೆ ಒಳಪಡಿಸುವುದನ್ನು ವಿರೋಧಿಸುತ್ತೇವೆ. ಈ ಆದೇಶವು ಚರ್ಚ್, ಮಸೀದಿ, ಗುರುದ್ವಾರಗಳಿಗೆ ಅನ್ವಯವಾಗುವುದಿಲ್ಲ. ಎಲ್ಲಾ ಧಾರ್ಮಿಕ ಕೇಂದ್ರಗಳಿಗೂ ಈ ಆದೇಶ ಅನ್ವಯವಾಗಬೇಕು. ಇಲ್ಲದಿದ್ದರೇ ಸರ್ಕಾರ ಕೂಡಲೇ ಆದೇಶ ಮಾರ್ಪಡಿಸಬೇಕು. ಇಲ್ಲವಾದಲ್ಲಿ ಇದು ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಮತ್ತೆ ಮುಜುಗರಕ್ಕೆ ದೂಡುವ ಸಾಧ್ಯತೆ ಇದೆ. ಅಲ್ಲದೆ ಕಾಂಗ್ರೆಸ್ ಸರ್ಕಾರ ಮತ್ತೆ ಹಿಂದೂ ವಿರೋಧಿ ಸರ್ಕಾರ ಎಂಬ ಹಣೆಪಟ್ಟೆ ಕಟ್ಟಿಕೊಳ್ಳುವ ಸಾಧ್ಯತೆ ಇದೆ ಎಂದಿದ್ದಾರೆ.

ನಂ.ಗೂಡಲ್ಲಿ ಅಪರಿಚಿತ ವ್ಯಕ್ತಿ ಹತ್ಯೆ

ನಂಜನಗೂಡು, ಮಾ.21– ಅಪರಿಚಿತ ವ್ಯಕ್ತಿಯನ್ನು ಹತ್ಯೆಗೈದು ಮೂಟೆಯಲ್ಲಿ ಕಟ್ಟಿ ಎಸೆದು ಹೋಗಿರುವ ಘಟನೆ ಕಪಿಲಾ ನದಿಯ ಹೆಜ್ಜಿಗೆ ಸೇತುವೆ ಬಳಿ ಜರುಗಿದೆ.

ಸುಮಾರು 40 ರಿಂದ 45 ವರ್ಷದ ಅಪರಿಚಿತ ವ್ಯಕ್ತಿ ಕೊಲೆಯಾಗಿದ್ದು, ಕೈಯಲ್ಲಿ ರೇಖಾ ಎಂದು ಹಚ್ಚೆ ಹಾಕಿಸಿಕೊಂಡಿದ್ದಾರೆ. ಕಳೆದ 2 ದಿನಗಳ ಹಿಂದೆ ದುಷ್ಕರ್ಮಿಗಳು ಈ ವ್ಯಕ್ತಿಯನ್ನು ಕೊಲೆಗೈದು, ಮೊದಲು ಬೆಡ್ ಶೀಟ್‌ನಲ್ಲಿ ಸುತ್ತಿ ನಂತರ ಪ್ಲಾಸ್ಟಿಕ್ ಚೀಲದಲ್ಲಿ ಕಟ್ಟಿ ಕಪಿಲಾ ನದಿಯ ಹೆಜ್ಜಿಗೆ ಸೇತುವೆ ಕೆಳಗೆ ಎಸೆದು ಹೋಗಿದ್ದಾರೆ. ಇದನ್ನು ಗಮನಿಸಿದ ಸ್ಥಳೀಯರು ಗುರುವಾರ ಸಂಜೆ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಮಾರಣೋತ್ತರ ಪರೀಕ್ಷೆಗಾಗಿ ನಂಜನಗೂಡಿನ ಆಸ್ಪತ್ರೆಗೆ ರವಾನಿಸಿದ್ದಾರೆ. ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಗ್ರಾಮಾಂತರ ಪೊಲೀಸರು ಕೊಲೆಯನ್ನು ಭೇದಿಸಲು ತನಿಖೆ ಮುಂದುವರಿಸಿದ್ದಾರೆ.

ಕಾಡುಹಂದಿ ದಾಳಿ: ರೈತನಿಗೆ ತೀವ್ರ ಗಾಯ

ಸರಗೂರು, ಮಾ.21– ಕಾಡುಹಂದಿ ದಾಳಿಗೆ ರೈತ ತೀವ್ರ ಗಾಯಗೊಂಡಿರುವ ಘಟನೆ ಸರಗೂರಿನಲ್ಲಿ ನಡೆದಿದೆ.

ತಾಲೂಕಿನ ಹಾದನೂರು ಗ್ರಾಮದ ರೈತ ಸುನೀಲ್ ಕುಮಾರ್(35) ಗಾಯಗೊಂಡವರು. ಈತ 2 ದಿನಗಳ ಹಿಂದೆ ಜಮೀನಿನಲ್ಲಿ ಎತ್ತುಗಳನ್ನು ಮೇಯಲು ಬಿಟ್ಟಿದ್ದರು. ಆದರೆ ಮನೆಗೆ ಬಂದಿರಲಿಲ್ಲ. ಹೀಗಾಗಿ ಜಮೀನಿನಲ್ಲಿ ಎತ್ತುಗಳನ್ನು ಹುಡುಕುತ್ತಿದ್ದ ವೇಳೆ ಸಮೀಪದಲ್ಲೇ ಮಲಗಿದ್ದ 15ಕ್ಕೂ ಹೆಚ್ಚು ಕಾಡುಹಂದಿಗಳ ಹಿಂಡು ರೈತ ಸುನೀಲ್ ಕುಮಾರ್ ನನ್ನು ಕಂಡು ಹೆದರಿ ಓಡಿ ಹೋಗಿವೆ. ಆದರೆ ಈ ಪೈಕಿ ಒಂದು ಕಾಡುಹಂದಿ ಏಕಾಏಕಿ ದಾಳಿ ನಡೆಸಿ, ಕೋರೆ ಹಲ್ಲಿನಿಂದ ತಿವಿದು ಕೆಡವಿ ಕಚ್ಚಿ ಎಳೆದಾಡಿದೆ. ಇದರಿಂದ ಗಾಬರಿಗೊಂಡ ಸುನೀಲ್ ಜೋರಾಗಿ ಕೂಗಿದ್ದಾರೆ. ಈ ವೇಳೆ ಅಕ್ಕಪಕ್ಕ ದಲ್ಲಿದ್ದ ಗ್ರಾಮಸ್ಥರು ಬಂದಿದ್ದರಿಂದ ಹಂದಿ ಕಾಡಿನತ್ತ ಪರಾರಿಯಾಯಿತು. ಬಳಿಕ ಗಾಯಗೊಂಡ ಸುನೀಲ್ ಕುಮಾರ್ ನನ್ನು ಸಂತೈಸಿ, ಅರಣ್ಯಾಧಿಕಾರಿಗಳ ಸಹಕಾರದಿಂದ ಬಡಗಲಪುರ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ರವಾನಿಸಲಾಯಿತು.

ಸೂಕ್ತ ಚಿಕಿತ್ಸೆಗೆ ಒತ್ತಾಯ: ರೈತ ಸುನೀಲ್ ಕುಮಾರ್ ಕಡುಬಡವರಾಗಿದ್ದು, ಕುಟುಂಬದ ನಿರ್ವಹಣೆ ತುಂಬಾ ಕಷ್ಟಕರವಾಗಿದೆ. ಹೀಗಾಗಿ ಇಲಾಖೆ ಸೂಕ್ತ ಚಿಕಿತ್ಸೆ ನೀಡಬೇಕು. ಗುಣಮುಖವಾಗುವವರೆಗೆ ಕುಟುಂಬದ ನಿರ್ವಹಣೆಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಗ್ರಾಮಸ್ಥರು ಅರಣ್ಯಾಧಿಕಾರಿಗಳನ್ನು ಒತ್ತಾಯಿಸಿದರು.

ಈ ವೇಳೆ ಗ್ರಾಪಂ ಸದಸ್ಯರಾದ ಶಿವರಾಜು, ಶಿವಲಿಂಗಯ್ಯ, ಮುಖಂಡರಾದ ರಾಜಣ್ಣ, ನಿಂಗರಾಜು, ಸ್ವಾಮಿ, ಗುರುಸ್ವಾಮಿ, ಚಿಕ್ಕಣ್ಣ ಇತರರಿದ್ದರು.

ಹೊಸೂರು ಡೈರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ಚುಂಚನಕಟ್ಟೆ, ಮಾ.21– ಸಾಲಿಗ್ರಾಮ ತಾಲೂಕಿನ ಹೊಸೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಹೆಚ್.ಜೆ.ರಮೇಶ್ ಹಾಗೂ ಉಪಾಧ್ಯಕ್ಷರಾಗಿ ನಾಗರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿನಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಹೆಚ್.ಜೆ.ರಮೇಶ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಾಗರಾಜು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಗಿರೀಶ್ ಘೋಷಿಸಿದರು.

ನೂತನ ಅಧ್ಯಕ್ಷ ಹೆಚ್.ಜೆ.ರಮೇಶ್ ಮಾತನಾಡಿ, ಸಂಘದ ಅಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಲು ಕಾರಣದಾರ ಶಾಸಕ ಡಿ. ರವಿಶಂಕರ್ ಸೇರಿದಂತೆ ಎಲ್ಲಾ ನಿರ್ದೇಶಕರಿಗೆ ಕೃತಜ್ಞತೆ ತಿಳಿಸಿದ ಅವರು, ಹಾಲು ಒಕ್ಕೂಟದಿಂದ ಬರುವ ಅನುದಾನ ಹಾಗೂ ಆದಾಯದಲ್ಲಿ ಸಂಘದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.


ಹೊಸೂರು ಡೈರಿ ಅಧ್ಯಕ್ಷ ಹೆಚ್.ಜೆ.ರಮೇಶ್, ಉಪಾಧ್ಯಕ್ಷ ನಾಗರಾಜು ಅವರನ್ನು ಸನ್ಮಾನಿಸಲಾಯಿತು.

ಸಂಘದ ಕಟ್ಟಡ ಮೇಲ್ದರ್ಜೆ ಇನ್ನಿತರ ಅಭಿವೃದ್ಧಿ ಕಾರ್ಯಕ್ರಮ ಸೇರಿದಂತೆ ಹಾಲು ಉತ್ಪಾದಕರಿಗೆ ಹೆಚ್ಚಿನ ಅನುಕೂಲವಾಗುವ ಯೋಜನೆಗಳನ್ನು ರೂಪಿಸಲು ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಸಲಹೆ ನೀಡುವಂತೆ ಮನವಿ ಮಾಡಿದರು.

ಸಂಘದ ನಿರ್ದೇಶಕರಾದ ಬುದ್ಧಿಸಾಗರ, ಸ್ವಾಮಿ, ಪ್ರಸನ್ನ, ಪೂರ್ಣಿಮಾ, ಲಲಿತಮ್ಮ, ಭಾರತಿ, ಯದುಕುಮಾರ್, ರಂಗೇಗೌಡ, ಪರಶುರಾಮ, ಅಕ್ಕಯಮ್ಮ, ಕಾರ್ಯದರ್ಶಿ ಶಿವಶಂಕರ್ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ಇದೇ ವೇಳೆ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮಿಗೌಡ, ತಾಪಂ ಮಾಜಿ ಅಧ್ಯಕ್ಷ ಹಾಡ್ಯ ಮಹದೇವಸ್ವಾಮಿ ಸೇರಿದಂತೆ ಕಾಂಗ್ರೆಸ್ ಮುಖಂಡರು ಸನ್ಮಾನಿಸಿದರು.

ಈ ವೇಳೆ ಮುಖಂಡರಾದ ಪ್ರಭಾಕರ್, ಶ್ರೀನಿವಾಸ್, ರವಿ, ಹರೀಶ್, ವಕೀಲ ಪುನಿ, ಸಚಿನ್, ನಾಗೇಶ್, ಚಂದನ್, ರಂಗಸ್ವಾಮಿ, ಮಹಾದೇವ, ಹೆಬ್ಬಾಳು ಶೇಖರ್, ನವೀನ್, ಗಿರೀಶ್, ಡೇರಿ ಮಾದು, ಮಂಜುನಾಥ್ ಸೇರಿದಂತೆ ಇನ್ನಿತರರಿದ್ದರು.

ನೀರಿನ ಸಂಪಿಗೆ ಬಿದ್ದು ಮಗು ಸಾವು

ಹೆಚ್.ಡಿ.ಕೋಟೆ, ಮಾ.21– ನೀರಿನ ಸಂಪಿಗೆ ಬಿದ್ದು ಮಗು ಸಾವನ್ನಪ್ಪಿರುವ ಘಟನೆ ತಾಲೂಕಿನ ಅಂತರಸಂತೆಯ ಬಂಗ್ಲಿಹುಂಡಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಸ್ವಾಮಿ ಮತ್ತು ಅಂಜು ದಂಪತಿ ಪುತ್ರಿ ಅಹಲ್ಯ(3) ಮೃತಪಟ್ಟ ಮಗು. ಎಂದಿನಂತೆ ಗುರುವಾರ ಅಂಗವಾಡಿಗೆ ತೆರಳಿದ್ದ ಮಗು ಅಹಲ್ಯ ಸಂಜೆಯಾದರೂ ಮನೆಗೆ ಬಾರದ ಹಿನ್ನೆಲೆಯಲ್ಲಿ ಪೋಷಕರು ಗಾಬರಿಗೊಂಡು ಮಗುವನ್ನು ಹುಡುಕಾಡಿದ್ದಾರೆ. ಆದರೂ ಅಹಲ್ಯ ಪತ್ತೆಯಾಗದ ಹಿನ್ನೆಲೆಯಲ್ಲಿ ಅಂಗನವಾಡಿಗೆ ತೆರಳಿ ಹುಡುಕಾಟ ನಡೆಸಿ ಸಂಪಿನ ಮುಚ್ಚಳ ತೆರೆದು ನೋಡಿದಾಗ ಮಗು ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮಗುವಿನ ಶವವನ್ನು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಲಾಗಿದೆ.

ಆಕ್ರೋಶ: ಅಂಗನವಾಡಿ ಸಿಬ್ಬಂದಿ ಸಂಪಿನ ಬಾಗಿಲು ಮುಚ್ಚದೆ ಬೇಜವಾಬ್ದಾರಿತನದಿಂದ ತೆರೆದ ಪರಿಣಾಮ ಈ ಅವಘಡ ಸಂಭವಿಸಿದೆ ಎಂದು ಸ್ಥಳೀಯರು ಅಂಗನವಾಡಿ ಸಿಬ್ಬಂದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ: ಸವಾರ ಸಾವು

ಹೆಚ್.ಡಿ.ಕೋಟೆ, ಮಾ.21– ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಹೈರಿಗೆ ಮತ್ತು ಹೆಚ್.ಮಟಕೆರೆ ಗ್ರಾಮದ ತಿರುವಿನಲ್ಲಿ ನಡೆದಿದೆ.



ಚಕ್ಕೂರು ಗ್ರಾಮದ ನಿವಾಸಿ ಬೆಟ್ಟನಾಯಕ ಅವರ ಪುತ್ರ ರವಿನಾಯಕ(35) ಮೃತಪಟ್ಟವರು. ಈತ ಗುರುವಾರ ಸಂಜೆ ಚಕ್ಕೂರು ಗ್ರಾಮದಿಂದ ಹ್ಯಾಂಡ್‌ಪೋಸ್ಟ್ ಕಡೆಗೆ ಬೈಕ್‌ನಲ್ಲಿ ಬರುತ್ತಿದ್ದ ವೇಳೆ ಹೈರಿಗೆ ಮತ್ತು ಹೆಚ್.ಮಟಕೆರೆ ಗ್ರಾಮದ ತಿರುವಿನಲ್ಲಿ ಮೈಸೂರಿಗೆ ತೆರಳುತ್ತಿದ್ದ ಸಾರಿಗೆ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ರವಿನಾಯಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಮೃತನ ಸಂಬಂಧಿಕರು ಸಾರಿಗೆ ಇಲಾಖೆ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿ ರಸ್ತೆ ತಡೆದು ಪ್ರತಿಭಟಿಸಿದ ಪರಿಣಾಮ ರಸ್ತೆ ಸಂಚಾರ ಬಂದ್ ಆಗಿತ್ತು. ಇದರಿಂದ ಹೆಚ್.ಡಿ.ಕೋಟೆ ಹಾಗೂ ಮೈಸೂರಿಗೆ ತೆರಳುತ್ತಿದ್ದ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಈ ವೇಳೆ ಸ್ಥಳಕ್ಕಾಗಮಿಸಿದ ಹೆಚ್.ಡಿ.ಕೋಟೆ ಸಾರಿಗೆ ನಿಗಮದ ವ್ಯವಸ್ಥಾಪಕ ಮಹದೇವ ಪ್ರಸಾದ್ ಸರ್ಕಾರದಿಂದ ಸೂಕ್ತ ಪರಿಹಾರ ನೀಡುವುದಾಗಿ ಭರವಸೆ ನೀಡಿ 25 ಸಾವಿರ ಪರಿಹಾರ ನೀಡಿದರು. ಬಳಿಕ ಶವವನ್ನು ಮರಣೋತ್ತರ ಪರೀಕ್ಷೆ ನಡೆಸಲು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಲಾಯಿತು. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿರತೆ ದಾಳಿಗೆ 2 ಕುರಿಗಳು ಬಲಿ

ನಂಜನಗೂಡು, ಮಾ.21– ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಕುರಿಗಳ ಮೇಲೆ ಚಿರತೆ ದಾಳಿ ನಡೆಸಿ ಎರಡು ಕುರಿಗಳನ್ನು ತಿಂದು ಹಾಕಿರುವ ಘಟನೆ ತಾಲೂಕಿನ ಎಲಚಗೆರೆ ಗ್ರಾಮದಲ್ಲಿ ಜರುಗಿದೆ. ಗ್ರಾಮದ ರೈತ ದೊರೆಸ್ವಾಮಿ ತಮ್ಮ ಕೊಟ್ಟಿಗೆಯಲ್ಲಿ ಕುರಿಗಳನ್ನು ಕಟ್ಟಿ ಹಾಕಿದ್ದರು. ಕೊಟ್ಟಿಗೆಗೆ ಬಾಗಿಲು ಇಲ್ಲದ ಕಾರಣ ಬುಧವಾರ ಮಧ್ಯರಾತ್ರಿ ಒಳ ನುಗ್ಗಿದ ಚಿರತೆ ಒಂದು ಕುರಿಯನ್ನು ಪೂರ್ಣವಾಗಿ ತಿಂದಿದ್ದು, ಮತ್ತೊಂದು ಕುರಿಯನ್ನು ಅರ್ಧ ತಿಂದು ಪರಾರಿಯಾಗಿದೆ. ಈ ಭಾಗದಲ್ಲಿ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ಜೀವ ಭಯದಲ್ಲಿ ಜೀವನ ಸಾಗಿಸುವಂತಾಗಿದೆ. ಆದ್ದರಿಂದ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಸೆರೆ ಹಿಡಿಯಬೇಕು ಮತ್ತು ಜಾನುವಾರು ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ದೊರಕಿಸಿಕೊಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದರು. ಸ್ಥಳಕ್ಕೆ ಅರಣ್ಯ ಇಲಾಖೆ ವಲಯ ಅರಣ್ಯ ಅಧಿಕಾರಿ ನಿತಿನ್ ಕುಮಾರ್ ಭೇಟಿ ನೀಡಿ ಪರಿಶೀಲಿಸಿ ಸೂಕ್ತ ಪರಿಹಾರ ದೊರಕಿಸಿಕೊಡುವ ಭರವಸೆ ನೀಡಿದರು.

ಕುಡಿಯುವ ನೀರು, ಮೇವಿನ ಸಮಸ್ಯೆ ಬಗೆಹರಿಯದಿದ್ದರೆ

ಮತ ಕೇಳುವ ಅಭ್ಯರ್ಥಿ, ಮುಖಂಡರಿಗೆ ಛೀಮಾರಿ

ರೈತ ಸಂಘದ ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್ ಎಚ್ಚರಿಕೆ


ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್ ಮಾತನಾಡಿದರು.

ತಿ.ನರಸೀಪುರ, ಮಾ.21– ಬರಗಾಲದ ಬೇಗೆಯಲ್ಲಿ ಬಳಲುತ್ತಿರುವ ಜನರಿಗೆ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಸಿಗುತ್ತಿಲ್ಲ. ಹೀಗಾಗಿ ಹಳ್ಳಿಗಳಿಗೆ ಮತ ಕೇಳಲು ಆಗಮಿಸುವ ಲೋಕಸಭಾ ಕ್ಷೇತ್ರದ ಅಭ್ಯರ್ಥಿಗಳು ಹಾಗೂ ರಾಜಕೀಯ ಮುಖಂಡರಿಗೆ ಛೀಮಾರಿ ಹಾಕಲಾಗುವುದು ಎಂದು ರೈತ ಸಂಘದ ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್ ಎಚ್ಚರಿಕೆ ನೀಡಿದರು.

ಪಟ್ಟಣದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ನಡೆದ ರೈತರ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಬರಗಾಲ ಕಾಡುತ್ತಿದೆ. ಹಳ್ಳಿಗಳಲ್ಲಿ ಕುಡಿಯುವ ನೀರು, ದನಗಳಿಗೆ ಮೇವು ಸಿಗುತ್ತಿಲ್ಲ. ರಾಜಕೀಯ ಪಕ್ಷಗಳು ಅಧಿಕಾರಕ್ಕಾಗಿ ದೊಂಬರಾಟ ಆಡುತ್ತಿವೆ. ಅಧಿಕಾರಿಗಳು ಚುನಾವಣಾ ಗುಂಗಿನಲ್ಲಿದ್ದಾರೆ. ರೈತರು ಸೊರಗುತ್ತಿದ್ದಾರೆ. ಕಬಿನಿ, ಕಾವೇರಿ ನಾಲೆಗಳಲ್ಲಿ ನೀರು ಹರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರೂ ನೀರಾವರಿ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ. ಸಮಸ್ಯೆಗೆ ಪರಿಹಾರ ಸಿಗದಿದ್ದರೆ ಹಳ್ಳಿಗಳಿಗೆ ಮತ ಕೇಳಲು ಬರುವ ರಾಜಕೀಯ ಪಕ್ಷಗಳಿಗೆ ಛೀಮಾರಿ ಹಾಕಿ ಸಮಸ್ಯೆ ಗಮನ ಸೆಳೆಯಬೇಕಾಗುತ್ತದೆ ಎಂದರು.


ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್ ಮಾತನಾಡಿ, ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಸಿಗುತ್ತಿಲ್ಲ. ಕಬ್ಬು, ಬಾಳೆ ಬೆಳೆಗಳು ಒಣಗುತ್ತಿವೆ. ಇಂಧನ ಇಲಾಖೆ ರೈತರನ್ನು ಕಗ್ಗತ್ತಲ್ಲಿಟ್ಟಿದೆ. ದೇಶದಲ್ಲಿ 70ರಷ್ಟಿರುವ ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಶಾಸನಬದ್ಧ ಬೆಲೆ ನಿಗದಿ ಮಾಡಿ ಎಂದರೆ ರೈತರ ಮೇಲೆ ಗೋಲಿಬಾರ್ ಮಾಡುತ್ತಾರೆ. ಆದರೆ ಶೇ.2ರಷ್ಟು ಇರುವ ಸರ್ಕಾರಿ ನೌಕರರಿಗೆ 58ರಷ್ಟು ಸಂಬಳ ಏರಿಸಬೇಕು ಎಂದು ವರದಿ ಸಲ್ಲಿಸುತ್ತಾರೆ. ಇಂತಹ ಪುರುಷಾರ್ಥಕ್ಕೆ ರೈತರು ಎಂಪಿಗಳನ್ನು ಗೆಲ್ಲಿಸಬೇಕೆ, ಅನ್ನ ನೀಡುವ ರೈತನನ್ನು ಅನಾಥರಾಗಿ ಮಾಡಬಾರದು, ಅನ್ನದಾತರು ದೇಶಕ್ಕೆ ಆಶ್ರಯದಾತರಾಗಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೆಹಲಿಯಲ್ಲಿ ವರ್ಷಾನುಕಾಲ ನಡೆದ ರೈತರ ಹೋರಾಟವನ್ನು ಕೇಂದ್ರ ಸರ್ಕಾರ ನಿರ್ಲಕ್ಷ ಮಾಡಿದೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಂಎಸ್‌ಪಿ ಗ್ಯಾರಂಟಿ ಕಾನೂನು ಜಾರಿ ಮಾಡುತ್ತೇವೆ. ಸಾಲಮನ್ನಾ ಮಾಡುತ್ತೇವೆ ಎಂದು ಘೋಷಿಸಿದೆ. ಈ ಬಗ್ಗೆ ಬಿಜೆಪಿ ಪಕ್ಷ ಅಥವಾ ಪ್ರಧಾನಿ ಮೋದಿ ಪ್ರತಿಕ್ರಿಯೆ ನೀಡದಿದ್ದರೇ ದೇಶದ ರೈತರು ಈ ಬಗ್ಗೆ ಗಂಭೀರವಾಗಿ ಚಿಂತಿಸಬೇಕಾಗುತ್ತದೆ ಎಂದು ಎಚ್ಚರಿಸುತ್ತಿದ್ದೇವೆ ಎಂದ ಅವರು, ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಹೆಚ್ಚುವರಿ 150 ರೂ. ನೀಡಿಲ್ಲ. ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿಯೇ ಸಕ್ಕರೆ ಕಾರ್ಖಾನೆಯವರು ಅನ್ಯಾಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಸಾದ್ ನಾಯಕ, ತಾಲೂಕು ಪ್ರಧಾನ ಕಾರ್ಯದರ್ಶಿ ನಂಜುಂಡಸ್ವಾಮಿ, ತಾಲೂಕು ಉಪಾಧ್ಯಕ್ಷ ಪ್ರದೀಪ್, ತಾಲೂಕು ಸಂಘಟನಾ ಕಾರ್ಯದರ್ಶಿ ಅಪ್ಪಣ್ಣ, ಟೌನ್ ಅಧ್ಯಕ್ಷ ಲಿಂಗರಾಜು, ಕುಮಾರ್, ಗೌರಿಶಂಕರ್, ಉಮೇಶ್, ನಾಗರಾಜು ಹಾಜರಿದ್ದರು.

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಶೀಘ್ರ ಗುಣಮುಖರಾಗಲೆಂದು

ಜೆಡಿಎಸ್ ಮುಖಂಡರು, ಕಾರ್ಯಕರ್ತರಿಂದ ವಿಶೇಷ ಪೂಜೆ

ಕೆ.ಆರ್.ನಗರ, ಮಾ.21– ಹೃದಯ ಶಸ್ತ್ರಚಿಕಿತ್ಸೆಗೊಳಗಾಗಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಶೀಘ್ರ ಗುಣಮುಖರಾಗಲೆಂದು ಕ್ಷೇತ್ರದ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಇಲ್ಲಿನ ಹಳೇ ಎಡತೊರೆ ಕಾವೇರಿ ನದಿ ದಡದಲ್ಲಿರುವ ಶ್ರೀಮೀನಾಕ್ಷಿ ಸಮೇತ ಅರ್ಕೇಶ್ವರ ದೇವಾಲಯದಲ್ಲಿ ಗುರುವಾರ ವಿಶೇಷ ಪೂಜೆ ಸಲ್ಲಿಸಿದರು.


ಹೃದಯ ಶಸ್ತ್ರಚಿಕಿತ್ಸೆಗೊಳಗಾಗಿರುವ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಶೀಘ್ರ ಗುಣಮುಖವಾಗಲೆಂದು ಪ್ರಾರ್ಥಿಸಿ, ಜೆಡಿಎಸ್ ಮುಖಂಡರು, ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿದರು.

ಜಮಾಯಿಸಿದ ನೂರಾರು ಅಭಿಮಾನಿಗಳು ಹಾಗೂ ಜೆಡಿಎಸ್ ಮುಖಂಡರು, ಕಾರ್ಯಕರ್ತರು ವಿಘ್ನ ನಿವಾರಕನಿಗೆ ವಿಶೇಷ ಪೂಜೆ ಸಲ್ಲಿಸಿ, ದೇವಾಲಯದ ಮುಂದೆ ಈಡುಗಾಯಿ ಒಡೆದು ಕುಮಾರಸ್ವಾಮಿ ಅವರು ಶೀಘ್ರ ಗುಣಮುಖರಾಗಲಿ, ಅವರ ಆರೋಗ್ಯ ಸುಧಾರಣೆಯಾಗಲಿ ಎಂದು ಪ್ರಾರ್ಥಿಸಿದರು.

ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಮಾತನಾಡಿ, ರಾಜ್ಯದ ಮುಖ್ಯಮಂತ್ರಿಯಾಗಿ ಕುಮಾರಸ್ವಾಮಿ ಅವರು ನೀಡಿರುವ ಕೊಡುಗೆ ಅಪಾರ. ಅವರ ಕಾರ್ಯ ವೈಖರಿಯನ್ನು ಈಗಲೂ ನಾಡಿನ ಜನ ನೆನೆಯುತ್ತಿದ್ದಾರೆ. ಅವರಿಗೆ 3ನೇ ಬಾರಿಗೆ ಹೃದಯ ಶಸ್ತ್ರಚಿಕಿತ್ಸೆ ಆಗಿದ್ದು, ಬೇಗ ಗುಣಮುಖರಾಗಲಿ ಎಂದು ದೇವರಲ್ಲಿ ಮೊರೆ ಇಟ್ಟಿದ್ದೇವೆ ಎಂದರು. ಆರೋಗ್ಯ, ಶಿಕ್ಷಣ, ನೀರಾವರಿ ಸೇರಿದಂತೆ ಇನ್ನೂ ಹತ್ತು ಹಲವು ಜನ ಕಾರ್ಯಕ್ರಮಗಳನ್ನು ರಾಜ್ಯದ ಜನರಿಗೆ ನೀಡುವ ಮೂಲಕ ದೇಶ ಮೆಚ್ಚುವ ಆಡಳಿತ ನೀಡಿದ್ದ ಕುಮಾರಣ್ಣ, ಅವರಿಗೆ ಶಸ್ತ್ರಚಿಕಿತ್ಸೆ ಆಗಿದ್ದು, ಆದಷ್ಟು ಬೇಗ ಗುಣಮುಖರಾಗಲಿ ಎಂದು ಆಶಿಸಿದರು.

ಪುರಸಭಾ ಸದಸ್ಯ ಸಂತೋಷ್‌ಗೌಡ ಮಾತನಾಡಿ, ರಾಜಕೀಯವಾಗಿ ಅಲ್ಲದೇ ವೈಯಕ್ತಿಕವಾಗಿ ಅನೇಕರಿಗೆ ಸಹಾಯಹಸ್ತ ಚಾಚಿರುವ ಕೊಡುಗೈ ದಾನಿ ಕುಮಾರಸ್ವಾಮಿ ಅವರಿಂದ ಮೈಸೂರು, ಮಂಡ್ಯ, ಹಾಸನ, ಕೊಡಗು, ಚಾ.ನಗರ ಭಾಗಕ್ಕೆ ಹಾಗೂ ರಾಜ್ಯಕ್ಕೆ ಮತ್ತಷ್ಟು ಕೊಡುಗೆ ಸಿಗಬೇಕಿದೆ. ಇದಕ್ಕಾಗಿ ಅವರಿಗೆ ದೇವರು ಇನ್ನೂ ಹೆಚ್ಚಿನ ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ ಎಂದರು.

ತಾಲೂಕು ಜೆಡಿಎಸ್ ಅಧ್ಯಕ್ಷ ಕುಮಾರ್, ಜಿಪಂ ಮಾಜಿ ಸದಸ್ಯ ಎಂ.ಟಿ. ಕುಮಾರ್, ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕುಚೇಲ, ಪುರಸಭಾ ಸದಸ್ಯರಾದ ಜಗದೀಶ್, ಮಂಜುಳಾ, ಮಾಜಿ ಸದಸ್ಯ ರಾಜಣ್ಣ, ತಾಲೂಕು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರಾಜಲಕ್ಷ್ಮೀ, ಪದಾಧಿಕಾರಿ ಗಳಾದ, ಭಾಗ್ಯಮ್ಮ, ರೂಪಾ, ಮೋಹನ ಕುಮಾರಿ, ಮುಖಂಡರಾದ ಮಹೇಶ್, ಮಲ್ಲಪ್ಪ, ಗ್ರಾಪಂ ಸದಸ್ಯ ಬಾಲಾಜಿ ಗಣೇಶ್, ಮಾದೇಶ್, ರುದ್ರೇಶ್ ಇದ್ದರು.

20ನೇ ವರ್ಷದ ಸವಿನೆನಪು



ಶ್ರೀ ಚೆನ್ನಸಿದ್ದಯ್ಯ
(ಬಿಲ್ಡಿಂಗ್ ಕಂಟ್ರಾಕ್ಟರ್, ಕುವೆಂಪುನಗರ, ಮೈಸೂರು)
ನಿಧನ: 22-03-2004

ದಿನಗಳುರುಳಿದರೂ, ಮಾಸಗಳು ಮಾಸಿದರೂ ವರುಷಗಳು ಗತಿಸಿದರೂ, ನಿಮ್ಮ ನೆನಪುಗಳು ಮಾತ್ರ ನಮ್ಮ ಮನದಾಳದಲ್ಲಿ ಹಚ್ಚಹಸಿರಾಗಿದೆ.

ಸದಾ ನಿಮ್ಮ ನೆನಪಿನಲ್ಲೇ ಇರುವ
ಧರ್ಮಪತ್ನಿ ಪದ್ಮಮ್ಮ ಮತ್ತು ಕುಟುಂಬವರ್ಗದವರು

HP ಗ್ಯಾಸ್ ಘೋಷಿಸುತ್ತದೆ

"ನಿಮ್ಮ ಇ.ಕೆ.ವೈ.ಸಿಯನ್ನು ಸ್ವತಃ ನೀವೇ ಮಾಡಿ, ಅದೀಗ ನಿಮ್ಮ ಬೆರಳತುದಿಯಲ್ಲಿದೆ"

ಇಂದೇ HP PAY APP ನ್ನು Google Play ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಿ.

HP PAY

ಆತ್ಮೀಯ HP ಗ್ಯಾಸ್ ಗ್ರಾಹಕರೇ
ಕೆಳಗಿನ ಹಂತವನ್ನು ಅನುಸರಿಸಿ

- ಪ್ಲೇ ಸ್ಟೋರ್ ಓಪನ್ ಮಾಡಿ
- ಸರ್ಚ್ ಬಾರ್‌ನಲ್ಲಿ HP Pay ಎಂದು ಟೈಪ್ ಮಾಡಿ
- HP Pay App ಡೌನ್ ಲೋಡ್ ಮಾಡಿ
- NEW USER ಮೇಲೆ ಕ್ಲಿಕ್ ಮಾಡಿ
- ನಿಮ್ಮ ವೈಯಕ್ತಿಕ ಮಾಹಿತಿಯನ್ನು ಭರ್ತಿಮಾಡಿ
- ನಿಮ್ಮ ಮೊಬೈಲ್ ಸಂಖ್ಯೆಯನ್ನು ಟೈಪ್ ಮಾಡಿ
- OTP ಯನ್ನು ಪರಿಶೀಲಿಸಿ
- ನೀವು ಬಯಸಿದ ಪಾಸ್‌ವರ್ಡ್ ನೀಡಿ
- ಸಬ್ ಮಿಟ್ ಅನ್ನು ಕ್ಲಿಕ್ ಮಾಡಿ
- LPG ಮೇಲೆ ಕ್ಲಿಕ್ ಮಾಡಿ
- E KYC ಮೇಲೆ ಕ್ಲಿಕ್ ಮಾಡಿ (Aadhar Face RD ಡೌನ್ ಲೋಡ್ ಮಾಡಿಕೊಳ್ಳಿ) ನಂತರ E KYC ಪ್ರಕ್ರಿಯೆಯನ್ನು ಪೂರ್ಣಗೊಳಿಸಿ
- ನಿಮ್ಮ E KYC ಅನ್ನು ಪೂರ್ಣಗೊಳಿಸಲು **31-03-2024** ಕೊನೆಯ ದಿನಾಂಕವಾಗಿದೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
ಶ್ರೀ ಅನ್ನಪೂರ್ಣೇಶ್ವರಿ HP ಗ್ಯಾಸ್ ಗ್ರಾಮೀಣ ವಿತರಕ್, ಉದ್ಬೂರು : 95901 29631
ಗಣೇಶ ಗ್ಯಾಸ್ ಏಜೆನ್ಸಿ : 0821-2480689 | ಲಹರಿ ಗ್ಯಾಸ್ : 87920 00755
ಅಟಲ್ ಗ್ಯಾಸ್ ಕಂಪನಿ : 0821-2563744 | ರಾಘವೇಂದ್ರ ಏಜೆನ್ಸೀಸ್ : 0821-2340617
LPS ಗ್ಯಾಸ್ ಸರ್ವೀಸ್ : 99005 99866 | ಶ್ರೀ ಚಿಕ್ಕದೇವಮ್ಮ ಗ್ಯಾಸ್ ಸರ್ವೀಸ್ : 0821-4270704
ಕಾಲಭೈರವೇಶ್ವರ HP ಗ್ಯಾಸ್ ಏಜೆನ್ಸಿ : 0821-2512122
ಅಮರ್‌ದೀಪ್ ಗ್ಯಾಸ್ ಸರ್ವೀಸ್ : 72044 44566 | ಪಾರ್ವತಿ HP ಗ್ಯಾಸ್ ಏಜೆನ್ಸಿ : 98868 99945
ಹೌದು! HP GAS your friendly gas



ಕಲ್ಯಾಣ್ ಜ್ಯುವೆಲ್ಲರ್ಸ್

GET 100% EXCHANGE VALUE On OLD GOLD BOUGHT FROM ANY JEWELLER*

GET UP TO ₹100 MORE PER GRAM On YOUR OLD GOLD*

PAY 5% ADVANCE & GET GOLD RATE PROTECTION — GET JEWELLERY AT THE BLOCKED RATE, IF PRICE INCREASES — GET JEWELLERY AT A LOWER RATE, IF PRICE REDUCES

OPEN ON ALL DAYS

FOR MORE DETAILS CONTACT US ON TOLL FREE NUMBER: 1800 425 7333 | WWW.KALYANJEWELLERS.NET | FOLLOW US ON
BUY ONLINE @ WWW.CANDERE.COM | FOR INSTITUTIONAL REQUIREMENTS, WRITE TO B2BINDIA@KALYANJEWELLERS.NET

T&C Apply. *Provided the old gold offered to exchange is 22ct purity and above. The offer is not valid on purchase of gold coins, loose stones and silver. Limited period offer.

WANTED

Min 250 Sqft Commercial Space Suitable for Multinational ICE-CREAM Brand
7022345675

SITES FOR SALE

40x60 and above Corner Sites are for Sale in a Fully Developed Residential Layout at Bannur Road
Contact:- 63641 67505



ಗಾಯತ್ರಿ ಟಾಕೀಸ್ ನಲ್ಲಿ ಮಾತ್ರ
ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್
ಜಾಕಿ (ಕನ್ನಡ)
ದಿನ 4 ಪ್ರದರ್ಶನ
10.30 1.30 4.30 7.30
ಆನ್‌ಲೈನ್ ಟಿಕೆಟ್ಸ್ ಬುಕ್ ಮೈ ಶೋ ನಲ್ಲಿ ಲಭ್ಯವಿದೆ

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿನಾಂಕ: 12.03.2024 ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 22.03.2024ನೇ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಮುರುಳೀಶ್ವರ ದೇವಸ್ಥಾನ, (ಕಾವೇರಿ ಶಾಲೆ ಪಕ್ಕ) ಅದಿಚುಂಚನಗಿರಿ ರಸ್ತೆ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರ ಶಾಂತಿ ಕೋರಬೇಕಾಗಿ ವಿನಂತಿ
ದುಃಖತಪ್ತರು: ಶ್ರೀಮತಿ ಲಕ್ಷ್ಮಿ, ಮಕ್ಕಳು ಹಾಗೂ ಕುಟುಂಬವರ್ಗದವರು
ಭೋಜನ ಮ:1 ಗಂಟೆಗೆ

ಶ್ರೀ ಜಗದೀಶ್

SALES EXECUTIVE REQUIRED

- For SALES OF AUTOMOBILE LUBRICANT & SPARES
- Freshers Welcome
- Male any graduate below 35 Years
- Own a two Wheeler with valid Licence
- 12,000 Fixed Salary + Inventive + conveyance

Call / Whatsapp resume to
7483593447

ಹಸಿರು ನಮ್ಮ ಉಸಿರು

MUDA APPROVED SITES FOR SALE

30X40 & 30X50
EAST & WEST FACING AVAILABLE
READY FOR REGISTRATION
Location: Adjacent J P Nagar, At Mysore-Ooty Road & Ring Road Junction.
Price @ Rs 64 lakhs onwards
Call: 96200 99122

2 BHK HOME INTERIORS

Starting @ ₹2.5 Lacs*
Home Space Mart™
TALK TO OUR DESIGN TEAM
9108923123

KHB SITE FOR SALE

60x40, South Face
Rs. 58 Lakhs,
KHB Kenchalagudu, Mysore
Within 3 KM from Ring Road
9632102676

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ANAND BROTHERS FAMILY STORE

BUY 3 GET 1
BUY 1 GET 1
FREE
OFFER AVAILABLE ON 10+ INSTA ACCOUNT SHARES
FOR UGADI AND RAMZAAN
SAREES, DRESS, KURTIES, JEANS TOPS WESTREN WARES, KIDS WARE, MENS WARES ONLINE AND OFFLINE
ALL FAMILY SHOPPING AND WANTED 1000 + SALES GIRLS AND BOYS FOR SALES JOB GANDHI SQUARE, MYSORE
9606565552 - 7406788889

PUBLIC NOTICE

Notice is hereby given that MAJOR.C.R.RAMESH, son of Sri-.C.Rangaswami, is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570 002, within 07 (Seven) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

House No.1585, situated at Dattagally E & F Block, Chamaraja Mohalla, Mysore City with building thereon, site measuring East to West 18.00 Meters and North to South 24.00 Meters, totally measuring 432.00 Square Meters and bounded on: East: Site No.1584, West: Site No.1586, North: Site No.1598 and South: Road.

Sd/-Dhirendra Kumar R. Mehta
Advocate,KEY-ANS LAW SOLUTIONS
Date: 21.03.2024, Place: Mysore

LAUNCH OFFER

MUDA APPROVED — Vee2 Developers
₹19 Lakhs Only
(20 x 30 Site)
HERITAGE CITY
Uttanahalli, Mysuru
PRM/KA/RERA/1268/PR/160124/006555
READY FOR REGISTRATION
Available Plots 20x30 & 30x40
8055 004 400

COMMERCIAL SPACE FOR RENT

at Yadavagiri Industrial Area. 4854 Sq feet with Ready Offices and 3 Toilets, 14 CCTV camera Light Fixtures. 20 Hp Commercial Power. Ready to move in. Suitable for Ware House, E-Commerce, Car Spa, Factory, Godown, Training institute. Contact :
9845161942

IMMEDIATE REQUIREMENT

Hiring for A Reputed US Based Outsourcing Company (Non-Voice)
Position-Process Associate
Qualification
BSc, BCA, BCom, BBM, MCA, MBA, MSc, MCom, BE candidates are also considered

KEY ATTRIBUTES:
- Proficiency in English Communication
- Must be a Computer Literate
- Good in Analytical skills (Non-Technical)
- Both Male & Females with Good Typing skills

Kindly attach your recent Passport size PHOTO to your Resume. Interested Candidates can APPLY IMMEDIATELY
Walk-In Interview: 20th Mar to 6th Apr 2024
Walk-In Time: 10:00am to 5:00pm
For any queries, please contact
Mob: 8147424748
SOURCE HUB One click convenience to outsourcing
Venue: Source Hub India Pvt Ltd #11, Second Floor, E & F Block, Above Royal Enfield Showroom Udayaravi Road, Kuvempunagar, Mysore - 570023.

CNM GROUP OF INSTITUTION

Wanted (Female Teachers)
Mahadevapura & Jayapura

DESIGNATION	QUALIFICATION
Montessori Teacher	NST, NTT OR Montessori Training
Primary Teacher	English, Hindi, Maths, Science Social and Kannada Degree with D.Ed
High School Teacher	English, Hindi, Math, Science Social and Kannada, Master Degree with B.Ed
Computer Teacher	BCA OR MCA
ACCOUNTANT	Degree and 3 years experience in accountancy

WALK IN INTERVIEW
Date: 23/03/2024 & 24/03/2024, Time: 10:00 AM TO 12:30 PM
Venue: 710, Mahadevapura, Near Judge Quarters, Srirampura village – 570008
Contact no : 8150993434, 8147470606

DREAM WORLD TRAVELS Mysore

Singapore Malaysia
6 Nights 7 Days
DEPARTURE DATE May 13th 2024
Per Person
1,06,000/-
For More Details Contact :
994 5242 427

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

PUBLIC NOTICE

By virtue of this notice, it is brought to the notice of the general Public that a suit in O.S. No. 10/2024 has been instituted before the competent Civil Court in respect of the Palace building called Krupalaya bearing Municipal No.677, situated at Nazarbad Mohalla, Mysore Taluk and residential site bearing CTS No.1077, Municipal No.677 (Krupalaya) situated at Vasant Mahal Road, Nazarbad Mohalla, Mysore which are more fully described in the Schedule-A and B herein below. The said Suit is pending for consideration.

If any transactions are made in spite of this Public Notice with M/s. Sweety Property Developers (P) Ltd., a Private Limited Liability Company incorporated under the Companies Act having its office at Flat No.12, 3rd Floor, Marian Manzil, 57 Reynold Road, Mumbai-400 008 represented by its Director Aquil Qureshi and M/s. Sankalp Constructions (P) Ltd., a Private Limited Liability Company incorporated under the Companies Act having its office at No.D/6A, Temple Road, V.V. Mohalla, Mysuru-570 002 represented by its Managing Director Sri V.K. Jagadish Babu, and also Executive Director Smt. Geetha Jagadish, relating to aforesaid property or apartments built therein, the purchasers are running the risk of being impleaded as parties in the said Suit and the Sale Deeds executed in their favour will be sought to be declared as null and void in the said Suit.

SCHEDULE-'A'

All that piece and parcel of Palace Building called as "Krupalaya" bearing Municipal No.677 situated at Nazarbad Mohalla Mysore Taluk bounded with :
East by : Vasant Mahal Road
West by : Palace Garage
North by : Palace Building called Retreat
South by : Mirza Road

SCHEDULE-'B'

All that piece and parcel of immovable residential site bearing CTS No.1077, Municipal No.677 (Krupalaya) situated at Vasant Mahal Road, Nazarbad Mohalla, Mysore, measuring North to South 203 Feet on the Eastern Side and 220 Feet on the Western side and measuring East to West 208 Feet on southern side and 191.6 Feet on the northern side in all 44,400 Sq. Ft. and bounded with :
East by : Vasant Mahal Road
West by : Site CTS No.1078 and Municipal No.676
North by : Site CTS No.1076 and Municipal No.678
South by : Road

MAHARAJAKUMARI SRI KAMAKSHI DEVIYAVARU,
(PLAINTIFF)
Represented by her Power of Attorney Holders
Advocate for Plaintiff: **S. RAJASHEKAR**, Advocate,
#4008, 4009 & 4111(A), Ground and First Floor,
High Point IV, Basaveshwara Circle, Near Hotel Chalukya,
Palace Road, Bangalore-560001. Mob: 9448725919.

CHIEF GUEST

|| वंदे श्री ऋषभं वीरं ||
JITO



KARTHIK MAHESH
Indian Actor,
Big Boss Kannada Season 10 WINNER

PRADEEP
Actor, Cricketer

OPEN FOR ALL REGISTER NOW

IIFL JITO AHIMSA RUN FOR PEACE FOR NON VIOLENCE
•ONE PURPOSE •ONE RUN
RUN TOGETHER FOR AHIMSA

31st MARCH ON SUNDAY 2024
Time: 5:30 am
Venue : Kote Sri Anjaneya Swamy Temple Mysore Palace North Gate, Mysore

Exciting Cash Prizes

10KM	5KM	3KM
1st - 10,000/	1st - 7,000/	1st - 5,000/
2nd - 7,000/	2nd - 5,000/	2nd - 3,000/
3rd - 5,000/	3rd - 3,000/	3rd - 2,000/

PREVIOUS EDITION RECORDS

Silver Sponsor: JAIN BUILD MART PVT. LTD.
Contact Details +91 99165 44413 +91 90369 09044
Register @ https://ahimsarun.com
RUN DISTANCE 10 KM 5 KM 3 KM
In Association with ARNOLD FITNESS, manipalhospitals, Chirag events
Food Sponsor: Smt Mohani Devi, Chaganrajji mutha, Mysore sales corporation
Cash Prize & Medal Sponsor: SHUBHAM
Cap Sponsor: High
Digital Partner — Sports Partner: DECATHLON
जियो और जीने दो
Sri Ram MultiMedia Designer Mob:99644 49997

JITO MYSORE CHAPTER
Kantilal. S Jain - Chairman
Goutam Salecha - Chief Secretary

JITO LADIES WING MYSORE
Mona Bhatewra - Chairperson
Rajani Dagaliya - Chief Secretary
Sapna Gandhi - Convenor
Saritha Baghmar - Co-Convenor

JITO MYSORE YOUTH WING
Puneet Srisrimaal - Chairman
Anmol Srisrimaal - Chief Secretary

KKG ZONE Ashokji salecha - Chairperson kkg Dilipji jain - Chief secretary kkg Chandraguptji kataria - Zone convener